ಅ. ಕ. ಸಂ. ಪ. ಪ್ರಕಟಣೆ–೧

ಸಂಸ್ಕೃತ-ಕನ್ನಡಗಳ ಬಾಂಧವ್ಯ

ಬಿ. ಎಚ್. ಶ್ರೀಧರ

ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್
ಮಂಗಳೂರು-575 003

1981

ರೂ. 6/-

ಸಂಸ್ಕೃತ-ಕನ್ನಡಗಳ ಬಾಂಧವ್ಯ

ಬಿ. ಎಚ್. ಶ್ರೀಧರ

ಅಖಿಲ ಕರ್ಣಾಟಕ ಸಂಸ್ಕೃತ ಪರಿಷತ್
ಮಂಗಳೂರು-575 003

1981

ರೂ. 6/-

SAMSKRIT-KANNADAGALA BANDHAVYA (Relation Between Sanskrit & Kannada)-by B. H. Sreedhar, M. A. Namajagudda, SIRSI (N. K.) - 581 401, Published by Akhila Karnataka Samskrita Parishat (Regd.) Mangalore (S. K.)-575 003

ಪ್ರಕಾಶಕರು :

ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್ (ರಜಿಸ್ಟರ್ಡ್)
ಮಂಗಳೂರು (ದ. ಕ.)-575 003

© ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ.

ಬೆಲೆ : ರೂ. 6-00

ಪ್ರಥಮ ಮುದ್ರಣ-1981

ಪ್ರತಿಗಳು-1000

ಮುದ್ರಕರು :

ಜನತಾ ಪ್ರಿಂಟಿಂಗ ಪ್ರೆಸ್ ವಿದ್ಯಾಗಿರಿ, ಧಾರವಾಡ- 580 004

ಹರಕೆ

ಶಿರಸಿಯ ಶ್ರೀ ಬಿ. ಎಚ್. ಶ್ರೀಧರ, ಎಂ. ಎ. ಇವರು ಪ್ರೌಢ ಪಂಡಿತರು. ಸಂಸ್ಕೃತಕ್ಕೂ–ಕನ್ನಡಕ್ಕೂ ಬಾಂಧವ್ಯ ಇದೆ, ದಾಯಾದಿತನ ಇಲ್ಲ ಎಂದು ಪ್ರತಿಪಾದಿ–ಸಿದ್ದಾರೆ ಈ ಪ್ರಬಂಧದಲ್ಲಿ. ಸಾಧಾರವಾಗಿ. ತಕ್ಕಮಟ್ಟಿನ ಸಾಕಲ್ಯದಿಂದ. ಸಾಕಲ್ಯವು ಶಕಲ–ಸಕಲವಾಗುವದಿಲ್ಲ. ಅದು ಎಕ್ಕ-ಸಕ್ಕ ಅಲ್ಲ. ಅಸ್ತವ್ಯಸ್ತವಾಗದು. 'ಹರಿ-ಹರ' ಏನೇ ಅಂದಿರಲಿ, ವ್ಯಾಸರಿಗೆ ಹರಿ-ಹರ ಸಾಮರಸ್ಯ ಕಂಡಿದೆ. ಅದು ಭಾಗವತ ಭಕ್ತಿಯೋಗ. 'ವಸಿಷ್ಠ-ಪರಾಶರ-ಶಕ್ತಿ-ವ್ಯಾಸ-ಶುಕ' ಈ ಪಂಚಕದ ಮೂಲಕ್ಕೆ 'ನಾರಾಯಣ ವಿಧಿ-(ಬ್ರಹ್ಮ)' ಇದ್ದಾರೆ. ಇದು ಶ್ರೀರಾಮ ಬ್ರಹ್ಮಚೈತನ್ಯ ದೃಷ್ಟಿ, 'ನಾಕು ತಂತಿ'ಯ ಕವನಗಳಲ್ಲಿ ಈ ತುರೀಯಾತೀತ ದರ್ಶನ ಇದೆ. 'ದೇವಾಸುರರ ದಾಯಾದಿತನ ಬೇರೆ. ತಂದೆ-ತಾಯಿಯರ ಕಂದನ-'ಆನಂದ ಗ್ರಂಥಿಯ' ಮರ್ಮ ಬೇರೆ. ಮೂರನ್ನು ಒಂದಾಗಿ ಕಾಣುವದು 'ಸಂಯಮ'. ಇದು ತುರೀಯಾತೀತದ 'ಅಂಗುಷ್ಠ' ಮಾತ್ರವಾಗಿದೆ.

ಸಂಸ್ಕೃತದಲ್ಲಿ ಆಗಮ ಮಾರ್ಗವಿದೆ. ಶೈವಾಗಮಗಳು ಸಂಸ್ಕೃತದಲ್ಲಿವೆ; ದ್ರಾವಿಡದಲ್ಲಿಲ್ಲ. ದ್ರಾವಿಡವೂ ದೇಶ್ಯವಿರಲಿಲ್ಲ, ಹೊರಗಿನಿಂದ ಬಂದದ್ದೇ. ಚೋಳ-ಚೇರ-ಪಾಂಡ್ಯ ತ್ರಿಕೂಟವು-ವರಾಹ ಧ್ವಜದ ಪ್ರತಿಪಕ್ಷಿ ಎನಿಸಿ ಮತ್ತೆ ಮತ್ತೆ ಸೋತಿದೆ. ನೈಗಮಿಕವು ಆಗಮಿಕದಿಂದ ಗ್ರಸ್ತವಾಗುತ್ತದೆ–ಅಸ್ತವಾಗುವುದಿಲ್ಲ. ಇದು ಅತ್ರಿಯ ತುರೀಯ ದರ್ಶನ. ಇದರಿಂದಾಗಿ ಋಭು ದೇವತೆಗಳು ದೇವಪಂಕ್ತಿಗೆ ಸೇರುತ್ತಾರೆ. ವಿಶ್ವಕರ್ಮ-ತ್ರಿಶಿರ-ಕುರುಕ್ಷೇತ್ರವಾಗುತ್ತಾನೆ.

ವಿಶ್ವರೂಪನು–19 ಮುಖದವನು. ಸೃಷ್ಟಿ-ಸೃಷ್ಟಾರರ ಏಕಕೂಟ ಇಲ್ಲಿದೆ. 'ಈಶಾವ್ಯಾಸಂ ಇದಂ ಸರ್ವಂ' 'ವಾಸುದೇವಃ ಸರ್ವಂ' ಧರಣಿಯು ದೇವಕಿ ವಸುದೇವರನ್ನು ಗರ್ಭೀಕರಿಸಿದ್ದಾಳೆ. 'ಧಾರಣೆಯಿಂದ ಧರ್ಮ'.

ಸಂಸ್ಕೃತ-ಪ್ರಾಕೃತ-ಅಪಭ್ರಂಶ-ಪೈಶಾಚಿ ಈ ನಾಲ್ಕರಿಂದ ಛಪ್ಪನ್ನ ದೇಶಭಾಷೆ-ಗಳಾಗಿವೆ. ಪಾಶ್ಚಿಮಾತ್ಯರಿಂದ ಹೇರಲ್ಪಡುತ್ತಿರುವ 'Cultural Anthropology' ಒಂದು ವಿವಾದ್ಯಮಾನ ಕ್ರೀಡಾ ಸಂಭ್ರಮ. ಇದು ದಾಯಾದಿತನ. ಬಾಂಧವ್ಯಕ್ಕೆ ಗಂಡಾಂತರ ಇಲ್ಲಿದೆ. "Though the United States has spent billions of dollars on foreign aid programs, It has captured neither the affection nor the esteem of the rest of the world. Much of the foreigner's animosity has been generated by the way Americans behave" ಎಂದಿದ್ದಾನೆ-ಎಡ್ವರ್ಡ. ಟಿ. ಹಾಲ್.

'ಸಂಸ್ಕೃತಿ' ಶಬ್ದವು ಕೋಶಕ್ಕೆ ಹೊರತಾದದ್ದು. ಇದು 'ಅಸಂಭವ': 'ಸಂಭೂತ್ಯಾ ಅಮೃತಮ್ ಅಶ್ನುತೇ' ಈ ಸಂಭೂತಿಗೆ. ಪ್ರತ್ಯಭಿಜ್ಞಾನದ ನೆಲೆ ಅದು. ಅದು 26- ಉತ್ಕೃತಿಯ ಗೋಪುರ-ಶಿಖರ.

ಆಗಮಿಕ ನೈಗಮಿಕ ನೆಲೆಯನ್ನು ಪಾಶ್ಚಿಮಾತ್ಯರು, ಮುಖ್ಯವಾಗಿ ಆಂಗ್ಲ ಭಾಷಾ ಪಂಚಾಯತನ ವಾದಿಗಳು ತಿಳಿದುಕೊಳ್ಳಬೇಕು. ಪಂಚಾಗ್ನಿ ಪ್ರತಿಷ್ಠೆಯು ಪರಮಾರ್ಥವೇ ಭಕ್ತಿ ಪ್ರಪಂಚ. ಹದಿನೆಂಟರ ಪಂಚಾಯತಿಯು ಸ್ವಾರ್ಥಿಗಳ ಕೋಲಾಹಲ: ಮೂರುದಿನದ ಜಾತ್ರೆ ಮಾತ್ರ. ಜೀವನ ಸಾರ್ಥಕ್ಯದ ಯಾತ್ರೆಗೆ ಭಗವಂತನೇ ತಳಹದಿ, ಅವನೇ ಗೋಪುರ. ಕನ್ನಡ ನಾಡಿನ ಆಚಾರ್ಯ ಪುರುಷರು- ಈ ಸಂಸ್ಕೃತಿಗೆ 'ಮೂಲಸ್ತಂಭ'ವಾಗಿದ್ದಾರೆ. 'ವರಾಹ'ದ ಮೂಲಾನ್ವೇಷಣೆಯಂತೆ, 'ಹಂಸ'ದ ಊರ್ಧ್ವಾನ್ವೇಷಣೆ, ಮೂಲಸ್ತಂಭದ ಆಚೆ- ಈಚೆ ಮಾತ್ರ. ಸಮೀಚೀನತ್ವದ ಹಿಮಾಲಯವು ಸೀಮಾರೇಖೆ; ಅದು ಭದ್ರ: ಸುಭದ್ರ. 'ಸಂಸ್ಕೃತ-ಕರ್ಣಾಟ'ಗಳ ಹೃದಯ ಸಂಭವವು ಸಂಜ್ಞಾನಸಿದ್ಧ. ಸಿದ್ಧವು ಅನಾದಿ ಅನಂತ. ಅದನ್ನು ದೇವಾಸುರಕ್ಕೆ ಎಳೆದರೆ. ಮಾನವನು ವಿತಂಡವಾದಕ್ಕೆ ಈಡಾಗುತ್ತಾನೆ. ಇತ್ತಂಡ ಕ್ಷೇಮವಲ್ಲ. ಮುಕ್ಕೋಟಿ ಯೋಗಸಿದ್ಧ. ಕನ್ನಡದ ಮೂಲಕ್ಕಿರುವ ಸಂಸ್ಕೃತದ ಭದ್ರತೆ ಇಲ್ಲಿದೆ. ಇಂಗ್ಲೀಷ ಭಾಷೆ ಅವಿವೇಕಕ್ಕೆ ಎಳೆದು ವಿಚಾರ ವಿಕೃತಿಗಳಿಗೆ ಮಹತ್ವ ಕೊಟ್ಟಾಗ, ಆಗಮನಿಗಮೈಕ್ಯದ ನಿವಿತ್ತು ಧೀರರ ನಿಲುವಾಗುತ್ತದೆ. ವೀರರ ಬೊಬ್ಬಾಟವಾಗುವದಿಲ್ಲ. ಭಕ್ತಿ ಪ್ರೀತಿ ಇದ್ದಲ್ಲಿ ಇದೆ-ಶಾಂತಿ. ಅದು ಪ್ರಕಾಶವಿದೆ. ಅದು ಪ್ರಾಣಭೂತ ಕನ್ನಡ !

"ಅತ್ತಿಗೆ(ಹೇಳಿಸಂಗೀತಂ ತಂಗೀತಂ ಮನಸಾಹಸಂ
ಭಾವಕೇಳೀ ಮನೋಲ್ಲಾಸಂ ನಾದಿನೀ ಬಿಸಿನೀರತಾ"

ಇದು ಕನ್ನಡ-ಸಂಸ್ಕೃತ ಹೃದಯ. ಇಲ್ಲಿ ಪದವಿವೇಕ ಬೇಕು. ಹೊಟ್ಟೆಯುರಿ ಹೊತ್ತಿಸಿದರೆ ಯಾವಲಾಭ ?

ಭದ್ರಂ-ಶುಭಂ-ಮಂಗಲಂ

'ಶ್ರೀಮಾತಾ' ಸಾಧನಕೇರಿ
ಧಾರವಾಡ - ೫೮೦೦೦೮
೧೧. ೧. ೧೯೮೧

ದ. ರಾ. ಬೇಂದ್ರೆ

---

* ಕರ್ನಾಟಕ ಕವಿಚರಿತೆ-೩ ಕನ್ನಡ. ಸಾಹಿತ್ಯ ಪರಿಷತ್ತು, ಬೆಂಗಳೂರು, ಪುಟ-೧೬೬-೧೬೭. ಮುಮ್ಮಡಿ ಕೃಷ್ಣರಾಜಸ್ತುತಿಯಲ್ಲಿ ಸಂಸ್ಕೃತ-ಕನ್ನಡ ಶೋಭೆ ಇದೆ.

ನೀನಿಲ್ಲದೆಲ್ಲಿಯದು ಬದುಕು ?

ಪೃಥಿವಿಯಾ ಪ್ರಥಮಪ್ರಭಾತದಲಿ
ಇತಿಹಾಸ ದೃಷ್ಟಿಗಸ್ಪಷ್ಟ ಅಜ್ಞಾತ ಪ್ರಾಚೀನದಲಿ
ಚಿರಧವಲ ಹಿಮಶೈಲ ಪೃಥುಲೋರುಪ್ರೇಂಖಿಹಲಿ
ನವಜಾತ ಶಿಶುವಾಗಿ ನಲಿದ ಮಂಗಲಮಯಿೞ
ಆರ್ಯಮಾತೆಯು ಮೊದಲ ತೊದಲ ನಾಗರಿಕತೆಯು
ಸಾಮಗಾನದ ವಾಣಿಯಿಂದ ಮಾಡಿದ ಮೂರ್ತಿ
ನೀನೆಲೌ ಸಂಸ್ಕೃತದ ವಾಗ್ದೇವಿ !
ಆರ್ಯರಾಗಿಹ ನಾವು ನಿನ್ನ
ಮೊಲೆವಾಲ ಸವಿಯಿಲ್ಲದೆಯೆ ಬದುಕುವೆವೆ ?
ನೀನಿಲ್ಲದೆಲ್ಲಿಯದು ಭರತಖಂಡದ ಬದುಕು
ಸಂಪತ್ತು ಸಂಸ್ಕೃತಿ ?

— ಕುವೆಂಪು

ಭಾರತವು ಸಂಸ್ಕೃತದಂಥ ಅದ್ಭುತ ಭಾಷೆಯನ್ನು ಜಗತ್ತಿಗೆ ನೀಡಿದ ಮಹಾನ್ ದೇಶ. ಆದರೆ ಈ ದೇಶದ ನೆಲದಲ್ಲೇ ಆ ಭಾಷೆಗೆ ಆಗುತ್ತಿರುವ ಅನ್ಯಾಯವನ್ನು ನಾವು ಅಮೇರಿಕನ್ನರು ಗಮನಿಸುತ್ತಿದ್ದೇವೆ. ಮುಂದೊಂದು ದಿನ ಯಾರಾದರೂ ಈ ದೇಶದಲ್ಲಿ ಸಂಸ್ಕೃತ ಕಲಿಯಬೇಕೆಂದು ಬಯಸಿದರೂ, ಕಲಿಯಲು ಅವಕಾಶವಿಲ್ಲದಂಥ ವಾತಾವರಣ ಇಲ್ಲಿ ನಿರ್ಮಾಣವಾಗಬಹುದು. ಆದರೆ ಹಾಗಾದರೆ ಅದಕ್ಕಾಗಿ ನೀವು ನಿರಾಶರಾಗಬೇಕಾಗಿಲ್ಲ. ನಿಮಗೆ ಸಂಸ್ಕೃತ ಕಲಿಯಬೇಕೆಂದು ಆಸೆಯಿದ್ದರೆ ಆಗ ನಮ್ಮ ದೇಶಕ್ಕೆ ಬನ್ನಿ. ನಾವು ನಿಮಗೆ ಕಲಿಸಿ ಕೊಡುತ್ತೇವೆ. ಅಷ್ಟು ಕಾಲ ನಾವು ಸಂಸ್ಕೃತವನ್ನು ಜೋಪಾನವಾಗಿ ಸಂರಕ್ಷಿಸಿ ಬೆಳೆಸುತ್ತಿರುತ್ತೇವೆ.

— ಪ್ರೊ. ಎಡ್ವಿನ್ ಜೆರೊ, ಚಿಕಾಗೊ

ಸಂಸ್ಕೃತವು ನಮ್ಮ ರಕ್ತದಲ್ಲಿ ಪ್ರವಹಿಸುತ್ತದೆ. ಸಂಸ್ಕೃತ ಭಾಷೆ ಮಾತ್ರವೇ ದೇಶದ ಏಕತೆಯನ್ನು ಸ್ಥಾಪಿಸಲು ಸಾಧ್ಯ —ಸಿ. ವಿ. ರಾಮನ್

ನಾನು ಸಂಸ್ಕೃತವನ್ನು ಓದಿದ್ದರಿಂದ ನನ್ನ ಕನ್ನಡ ಹೆಚ್ಚು ಸರಳವಾಗಿದೆ; ಸುಂದರವಾಗಿದೆ; ಸಮೃದ್ಧವಾಗಿದೆ. --ಖಾದ್ರಿ ಶಾಮಣ್ಣ

ಸಂಸ್ಕೃತಭಾಷೆಯ ಜ್ಞಾನವಿಲ್ಲದೇ ಕನ್ನಡದಲ್ಲಿ ಅಗತ್ಯವಾಗಿರುವ ವೈಜ್ಞಾನಿಕ ಸಾಹಿತ್ಯಸೃಷ್ಟಿ ಹೇಗೆ ಸಾಧ್ಯ ? — ಎಚ್. ವಿ. ಶ್ರೀರಂಗರಾಜು.

ಭಾರತವರ್ಷದ ಸಂಸ್ಕೃತಿಗೆ ಸಂಸ್ಕೃತವು ತಾಯಿಬೇರು. ಇತರ ಭಾಷೆಗಳಿಗೆ ಹೇಗೋ ಹಾಗೆಯೇ ಕನ್ನಡದ ಬೆಳವಣಿಗೆಗೆ ಸಂಸ್ಕೃತವು ಕೇವಲ ಆವಶ್ಯಕ.

— ಮಾಸ್ತಿ ವೆಂಕಟೇಶ ಅಯ್ಯಂಗಾರ

ಕನ್ನಡಿಗರಿಗೆ ಸಂಸ್ಕೃತವು ಅತಿಕಷ್ಟವಲ್ಲ. ಸಂಸ್ಕೃತವನ್ನು ಪಾಠಶಾಲೆಗಳ ಮೊದಮೊದಲನೆಯ ತರಗತಿಗಳಲ್ಲಿ ಅದೊಂದು ಪ್ರತ್ಯೇಕ ವಿಷಯವೆಂದು ಇಟ್ಟು-ಕೊಳ್ಳದೆ ಅದನ್ನು ಕನ್ನಡಪಾಠದ ಒಂದು ಅಂತರ್ಭಾಗವೆಂದೇ ಎಣಿಸಬೇಕು.

— ಡಿ. ವಿ. ಜಿ.

ಸಂಸ್ಕೃತ ವ್ಯಾಸಂಗವು ಕಡಿಮೆಯಾಗುವುದು ಎಳೆಯ ಮಗುವಿಗೆ ತಾಯಿಯ ಹಾಲು ಕಡಿಮೆಯಾದ ಹಾಗೆ. – ಎ. ಆರ್. ಕೃಷ್ಣಶಾಸ್ತ್ರಿ

ಸಂಸ್ಕೃತ ಮೃತಭಾಷೆಯಲ್ಲ, ಅದು ಅಮರ.

— ಕುವೆಂಪು.

ಮುಂದಿನ ಪೀಳಿಗೆಯಲ್ಲಿ ಸಂಸ್ಕೃತ ಎಲ್ಲರಿಗೂ ಬೇಕು. ಎಲ್ಲರೂ ಓದಬೇಕು.

—ದೇವುಡು.

ತಪಸ್ವಿನಿಯಾದ ಭಾರತಮಾತೆಯ ಪ್ರಭಾವಲಯದಂತಿದ್ದು ಕನ್ನಡ ಸಾಹಿತ್ಯಕ್ಕೂ ಕಾಂತಿಯನ್ನು ತುಂಬಿರುವ ಸಂಸ್ಕೃತಸಾಹಿತ್ಯವು ನಮ್ಮದೂ ಹೌದೆಂದು ಸೌಜನ್ಯ ತೋರೋಣ. — ಸಿ. ಕೆ. ವೆಂಕಟರಾಮಯ್ಯ.

ಸಂಸ್ಕೃತದಿಂದ ಕನ್ನಡದ ಬೆಳವಣಿಗೆಯು ಕುಂಠಿತವಾಗಿಲ್ಲ. ಸಂಸ್ಕೃತದ ಸಹಕಾರ-ವಿಲ್ಲದೆ ಕನ್ನಡದಲ್ಲಿ ಪ್ರಾವೀಣ್ಯವನ್ನು ಪಡೆಯುವುದು ಸುಲಭವಲ್ಲ.

— ಎಂ. ವಿ. ಸೀತಾರಾಮಯ್ಯ

ಸಂಸ್ಕೃತವು ಭಾರತವನ್ನೇ ಒಂದಾಗಿ ಬೆಸೆದಿರುವ ಭಾಷೆ: ಭಾರತೀಯ ಸಂಸ್ಕೃತಿಯ ಸಂವಾಹಕ; ಭಾರತೀಯ ಜ್ಞಾನ-ವಿಜ್ಞಾನಗಳ ಗಣಿ: ಭಾರತೀಯ ಭಾಷೆಗಳಿಗೆ ಅಕ್ಷಯಪಾತ್ರೆ. — ಸಿದ್ದಯ್ಯ ಪುರಾಣಿಕ

ಮಾತೃಭಾಷೆಯ ಜೊತೆಯಲ್ಲಿಯೇ ಸಂಸ್ಕೃತ ಭಾಷಾ ಶಿಕ್ಷಣವು ಶಿಕ್ಷಣದ ಅವಿಭಾಜ್ಯ ಅಂಗವಾಗಬೇಕು

— ಎಂ. ಸಿ. ಛಗಲಾ.

ಸಂಸ್ಕೃತವು ಪ್ರತಿಯೊಬ್ಬ ಭಾರತೀಯನ ಜೀವನದ ಅಂಗವೆನಿಸಬೇಕು.

— ಕೆ. ಎಂ. ಪಣಿಕ್ಕರ

ಅರಿಕೆ

ಪ್ರಸ್ತುತ ಗ್ರಂಥವು ಒಂದು ಚಿಕ್ಕದಾದ ಪ್ರಕರಣ ಗ್ರಂಥ; ಸಂದರ್ಭಕ್ಕಾಗಿ ಸಂಕ್ಷಿಪ್ತವಾಗಿ ಬರೆದದ್ದು. ಈ ಗ್ರಂಥಕರ್ತನ "ಜ್ಞಾನಸೂತ್ರ", "ಕಾವ್ಯಸೂತ್ರ" ಮತ್ತು "ರಾಷ್ಟ್ರಸೂತ್ರ"ಗಳೂ ಇಂಥವೇ* ಆಗಿವೆ. ಅಂದರೆ ಈಗ ಇರುವ ಪುಟ ಸಂಖ್ಯೆಯನ್ನು 10 ರಿಂದಲೋ 15 ರಿಂದಲೋ ಗುಣಿಸಿದರೆ ಗ್ರಂಥವು ಪ್ರತಿಪಾದಿಸುವ ವಸ್ತುವಿಗೆ ಸರಿಯಾದ ನ್ಯಾಯವನ್ನು ದೊರಕಿಸಿ ಕೊಟ್ಟಂತಾದೀತಂ. ಇದೊಂದು ಸಿಂಧುವನ್ನು ಬಿಂದುವಿನ ರೂಪದಲ್ಲಿ ಪ್ರಕಟಿಸಿದ ಹಾಗೆ—ಎಂಬುದಂ ತಾತ್ಪರ್ಯ.

ಕನ್ನಡವು ನನ್ನ ತಾಯ್ನುಡಿ. ಸಂಸ್ಕೃತವು ನನ್ನ ತಂದೆನುಡಿ. "ವಾಗರ್ಥಾವಿವ ಸಂಪೃಕ್ತೌ" ಆಗಿರುವುದು ಇಂದಿನ ಕನ್ನಡ: ಕನ್ನಡ ಸಾಹಿತ್ಯ ಪರಿಷತ್ತಿನ "ಕೌಸ್ತುಭ" ಹೀಗೇ ಇದೆ. ಬಾನುಲಿ, ಬೆಳ್ಳಿಹಬ್ಬಗಳೂ ಸರಿ; ಆಕಾಶವಾಣಿ, ರಜತಮಹೋತ್ಸವಗಳೂ ಸರಿ. ಏಕೆಂದರೆ, "ಹರ್ ಬಂಡರ್ ಗೀತ"ದಲ್ಲಿ ಡಾ. ದ. ರಾ. ಬೇಂದ್ರೆಯವರು-

"ಕನ್ನಡವೂ ಭಾರತವೂ ಜಗವೆಲ್ಲವು ಒಂದೇ
ಒಂದೇ ಒಂದೇ ಒಂದೇ ಕರ್ಣಾಟಕ ಒಂದೇ"

ಎಂದದ್ದು ಚಿರಸ್ಮರಣೀಯ. ಕರ್ಣಾಟಕವನ್ನು ಕರ್ನಾಟಕವೆಂದು ಬರೆಯುವುದಂ ಪಾಣಿನಿ ಹೇಳಿದ ವಿಶ್ವಸಾಮಾನ್ಯವಾದ ಸ್ಥಾನಪ್ರಯತ್ನ ವಿವೇಕವನ್ನು ಆಧರಿಸಿದ ಸ್ಥಾನಿವದಾದೇಶೋಽನಲ್ವಿಧೌ" (1–1–5); "ಸ್ಥಾನೇಽಂತರತಮಃ" (1–1–50) ಮತ್ತು "ಅಚಃ ಪರಸ್ಮಿನ್ ಪೂರ್ವ ವಿಧೌ" (1–1–57) ಮುಂತಾದ ಸೂತ್ರಗಳ ಅಂತಃಸಾರಕ್ಕೆ ವಿರುದ್ಧ. ಕರ್ಣನನ್ನು ಕರ್ನನೆಂದೂ ಸ್ವರ್ಣವಲ್ಲಿಯನ್ನು ಸ್ವರ್ನವಲ್ಲಿ ಎಂದೂ ಬರೆಯುವುದು ಪ್ರಾಕೃತವೂ ಅಲ್ಲ, ತದ್ಭವವೂ ಅಲ್ಲ, ಅದು ಅಸಹಜವಾದುದರಿಂದ ಅಶಾಸ್ತ್ರೀಯ. "ರಷಾಭ್ಯಾಂ ನೋಣಃ ಸಮಾನ ಪದೇ" (8–4–1)

---

* ಜ್ಞಾನಸೂತ್ರವು ಶಿರಸಿಯ ವಿದ್ಯಾರಣ್ಯ ಪ್ರಕಾಶನ; ಪಾಶ್ಚಾತ್ಯ–ಪೌರಸ್ತ್ಯ ತತ್ವಶಾಸ್ತ್ರಗಳ ತುಲನಾತ್ಮಕ ಗ್ರಂಥ. ಕಾವ್ಯಸೂತ್ರವೂ ಅದೇ ಪ್ರಕಾಶನದ್ದು; ಅದು ಪಾಶ್ಚಾತ್ಯ ಪೌರಸ್ತ್ಯ ಸಾಹಿತ್ಯ ಸಿದ್ಧಾಂತಗಳ ತುಲನಾತ್ಮಕ ವಿಮರ್ಶಗ್ರಂಥ. ರಾಷ್ಟ್ರಸೂತ್ರವು ಹುಬ್ಬಳ್ಳಿಯ ದಾಜೀಬಾನ ಪೇಟೆಯಲ್ಲಿರುವ ಧ್ಯಾನೇ (ಜ್ಞಾನೇ) ಶ್ವರ ಮುದ್ರಣಾಲಯದ ಪ್ರಕಾಶನ; ಅದರಲ್ಲಿ ಭಾರತೀಯ ಸಂಸ್ಕೃತಿಯ ಬೇರುಗಳನ್ನು ರಾಜ್ಯಶಾಸ್ತ್ರದ ಅಂಗವಾಗಿ ವಿವರಿಸಲಾಗಿದೆ. Dnyaneshwara ಬಹುಶಃ ಜ್ಞಾನೇಶ್ವರನೇ ಆಗಿರಬೇಕು.

ಎಂಬ ಉತ್ಸರ್ಗವು ಭಾಷಾಶಾಸ್ತ್ರ ಸಹಜ. ಆದುದರಿಂದಲೇ "ಪ್ರಬುದ್ಧ ಕರ್ಣಾಟಕ" ವಿನ್ನೂ "ಪ್ರಬುದ್ಧ ಕರ್ನಾಟಕ"ವಾಗಿಲ್ಲ. ಕನ್ನಡದ "ಜಾಯಮಾನ" ಎಂದು ಹಠ ಹಿಡಿಯುವವರು ಸ್ಥಾನ ಪ್ರಯತ್ನವಿವೇಕದ ಸ್ಥಾನಿವದಾದೇಶದ ವಿಶ್ವಸಾಧಾರಣತೆ-ಯನ್ನು ಮನವರಿಕೆ ಮಾಡಿಕೊಂಡರೆ, ಕನ್ನಡ ಭಾಷಾಭಿವೃದ್ಧಿಯನ್ನು ಸಹಜತೆಗೆ ಎರವಾಗದಂತೆ ಸಾಧಿಸಬಹುದು. ಸಂಸ್ಕೃತದ ಜ್ಞಾನ ಇಲ್ಲದವರಿಗೆ ಕನ್ನಡದ ನ್ಯಾಯ್ಯ ಬೆಳವಣಿಗೆಯು ಹೇಗಾಗಬೇಕೆಂಬುದು ಗೊತ್ತೇ ಆಗದು. ಕನ್ನಡದ ಬಹುಸಂಖ್ಯಾತ ಸ್ತ್ರೀ ಪ್ರತ್ಯಯಗಳೆಲ್ಲವೂ ಸಂಸ್ಕೃತಜನ್ಯ ಎಂಬುದನ್ನರಿಯದವರೇ ಲತಾಳು, ಸೀತಾಳು, ಅಕ್ಕಳು, ಅಮ್ಮಳು ಎಂದೂ ಕುಸುಮಾ ಶೆಟ್ಟಿ, ರಮಾಭಟ್ಟ, ರಾಧಾ ಹೆಗ್ಗಡೆ, ನಲಿನೀ ಶಾಸ್ತ್ರಿ ಎಂದೂ ಅಸಹಜ ಪ್ರಯೋಗಗಳನ್ನು ಮಾಡುವರು. ನೆಹರೂರವರು, ಕುವೆಂಪುರವರುಗಳು ಹುಟ್ಟಿದ್ದೂ ಇಂಥ "ಸೃಜನ" ಶೀಲರಿಂದಲೇ. ಹೀಗೆ ಕನ್ನಡಿಶಿಯ ಮೈಮೇಲೆ ಕೈಹಾಕುವ ಜಾರಜಾತಕದವರನ್ನು ತಿದ್ದಲೆಂದೇ ಪ್ರಸ್ತುತ ಪುಸ್ತಕವನ್ನು ರಚಿಸಲಾಗಿದೆ. ಸಂಸ್ಕೃತ ಭಾಷೆಯ ಸಂಸ್ಕಾರವನ್ನು ದ್ವೇಷಿಸುವವರು "ಪುಲಿಗೆರೆಯ ಸಾಜಮಾದ ತಿರುಳ್ಗನ್ನಡ"ದಲ್ಲಿ ಬರೆದ "ವಿಕ್ರಮಾರ್ಜುನವಿಜಯ"ವನ್ನು ಅಭ್ಯಾಸಮಾಡಬೇಕು. ಆದರದು ಆದ್ಯಂತವಾಗಿ ತಿರುಳ್ಗನ್ನಡ; ತತ್ಸಮ-ತದ್ಭವಗಳನ್ನು ಹೆಕ್ಕಿ ಬಿಸುಟು ಮಿಕ್ಕದ್ದು ಮಾತ್ರ ತಿರುಳ್ಗನ್ನಡ ಎಂಬುದು ಆದಿಕವಿ ಪಂಪನ ಅಭಿಪ್ರಾಯವಲ್ಲ; ಅಹುದೆಂದು ಸಾಧಿಸುವುದು ಹಠ. ಏಕೆಂದರೆ ಮನುಷ್ಯನಿಗೆ "ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ". ಆದುದರಿಂದ ಆದಿಪಂಪನು ತನ್ನ ವರ್ಣನೆಯನ್ನು—

"ಕದಳೀಗರ್ಭಶ್ಯಾಮಂ
ಮೃದುಕುಟಿಲಶಿರೋರುಹಂ ಸರೋರುಹವದನಂ
ಮೃದುಮಧ್ಯಮತನು ಹಿತಮಿತ
ಮೃದುವಚನಂ ಲಲಿತಮಧುರಸುಂದರವೇಷಂ"

ಎಂಬ ಇಷ್ಟಾರ್ಥ ವ್ಯವಚ್ಛಿನ್ನ ಪದಾವಲಿಯಿಂದಲೇ ಮಾಡಿಕೊಂಡಿದ್ದಾನೆ. ತತ್ಸಮ ತದ್ಭವ ರಹಿತವಾದ ಕನ್ನಡವು ಅವನಿಗೆ ಬರುತ್ತಿರಲಿಲ್ಲವೇ ? ಅವನಿಗೆ ಲಲಿತ, ಸುಲಭ, ಸರಳ ಎಂಬೆಲ್ಲವೂ ಸಂಸ್ಕೃತ ಪದಗಳೆಂಬುದು ಗೊತ್ತು. ಆದರೆ ಅವನು "ಲಭೇತ ಸಿಕತಾಸು ತೈಲಮಪಿ ಯತ್ನತಃ ಪೀಡಯನ್" ಎಂಬ ಮೂರ್ಖಪ್ರಯತ್ನಶೀಲನಾಗಿ ಕಲ್ಲಲ್ಲಿ ನಾರೆತ್ತುವಂಥ ಅತ್ಯಾಂಡಯ್ಯ ಮಾರ್ಗವನ್ನು ಹಿಡಿದು "ಕನ್ನಡ ಡಿಂಡಿಮ" ವನ್ನು ಬಾರಿಸಲಿಲ್ಲ. ಇಡಿಯ ಕೃತಿಯೊಂದರಲ್ಲಿ ಈಗಲೂ ಅಂಥ ಪ್ರಯತ್ನ ಮಾಡಿ ಯಾರೂ ಕನ್ನಡಿಗರ ಹೊಗಳಿಕೆಗೆ ಪಾತ್ರರಾಗಲಾರರು. ಅದುದರಿಂದ ವಸ್ತು ಸತ್ಯ ವೆನಿಸಿರುವ ಸುದ್ದಗನ್ನಡ+ಸಕ್ಕದಗಳ ಅವಿನಾಭಾವವನ್ನು ಸಾರಿ ಹೇಳಿ ಸಂಸ್ಕೃತದ ಸ್ಥೂಲಾಭ್ಯಾಸವಾದರೂ ಸುದ್ದಗನ್ನಡ ಲೇಖಕನಿಗೆ ಬೇಕೇ ಬೇಕು—ಎಂಬುದನ್ನು

ಪ್ರಸ್ತುತ ಗ್ರಂಥವು ಪ್ರತಿಪಾದಿಸಲು ಎತ್ತಿಕೊಂಡಿದೆ. ಅದರ "ಯುಶಾಸಯುಶ" ಕೂಡ "ಪೌರ್ವಾತ್ಯ–ಪಾಶ್ಚಿಮಾತ್ಯ" ಎಂಬ ಪದಗಳಂತೆಯೇ ಸಂಸ್ಕೃತಕ್ಕೆ ಋಣಿ.

"ಕುಲ್ಯತೇ ಸಮೀಪಂ ನೀಯತೇ ಅನೇನ ಇತಿ ಕೋಽಯಂ:" ಎಂಬ ಅತಿವಾದಕ್ಕಿಲ್ಲಿ ಎಡೆಗೊಟ್ಟಿಲ್ಲ. ಅದರೆ ಪ್ರಕ್ಷಾಳನ ಸ್ಥಳವು ಬಚ್ಚಲಾದುದನ್ನು ಮರೆತಿಲ್ಲ. ಶೆಂದಮಿಳ್ ಚಳವಳದಂತೆ ಐಕಿಲ್ ಪೆಟ್ಟನ್ನು ಬಳಸಬೇಕೆಂಬ ಆಗ್ರಹ ಇಲ್ಲಿಲ್ಲ. ಆಂಗ್ಲಭಾಷೆಯು ತನ್ನ ಬೆಳವಣಿಗೆಗೆ ಅಗತ್ಯವಾದ ಪರಿಭಾಷಾ ಪದಗಳನ್ನೂ ಪದವ್ಯಾಕರಣ ನಿಯಮ-ಗಳನ್ನೂ ಲ್ಯಾಟಿನ್-ಗ್ರೀಕ್ ಗ್ರಂಥಗಳಿಗೆ ಪ್ರಾಧಾನ್ಯವನ್ನಿತ್ತು ನ್ಯಾಯವಾಗಿ ತೆಗೆದು-ಕೊಂಡು ಬರುತ್ತಿರುವಂತೆ ನಮ್ಮ ಭಾರತೀಯ ಭಾಷೆಗಳು ನಡೆದುಬಂದ ಅದೇ ತರದ ಸ್ವಾಭಾವಿಕ ಮಾರ್ಗವನ್ನು ಅನುಸರಿಸಲು ನಿಜವಾದ ಕನ್ನಡಿಗನು ಅಡ್ಡಿ-ಯನ್ನುಂಟುಮಾಡಲಾರ; ಹಾವನೂದಿಸಿ ರಾಷ್ಟ್ರೀಯ-ಪ್ರಾಂತೀಯ ಸಾಂಸ್ಕೃತಿಕ ಆತ್ಮಹತ್ಯೆಯನ್ನು ಮಾಡಿಕೊಳ್ಳಲು ಉದ್ದೇಶಿಸಲಾರ. "ಸಂಸ್ಕೃತಭಾಷೆ" ಎಂಬ ಪದ-ವನ್ನು "ಅನ್ಯಭಾಷೆ" ಯಂತೆ ತತ್ಪುರುಷ ಸಮಾಸವೆಂದು ತಿಳಿದುಕೊಳ್ಳುವ ಹಠ-ಹಿಡಿಯಲಾರ; ಕನ್ನಡದ ಡಿಂಡಿಮವನ್ನು ಕನ್ನಡದ ~~ಗಂಟೆ~~ ಎನ್ನುವ ಅಕಾವ್ಯಮಯತೆಗೆ ಇಳಿಸಲಾರ. ತನಗೆ ಬಾರದ ಭಾಷೆಗಳೆಲ್ಲವೂ ತನ್ನ ಪಾಲಿಗೆ ಮೃತ ಎಂಬುದನ್ನರಿಯದೆ, ಸಂಸ್ಕೃತವೊಂದೇ "ಮೃತ" ಎಂದು ಬೊಬ್ಬೆಹೊಡೆದು ಅರಸಿಕತೆಯನ್ನು ಹೊರಗೆಡಹನು, ಅಜ್ಞಾನವನ್ನು ಪ್ರದರ್ಶಿಸನು. ಆದುದರಿಂದ ಅಂಥ ಪ್ರವೃತ್ತಿಯೆಲ್ಲಾದರೂ ಹೊರ-ಬಿದ್ದರೆ, ಅದನ್ನು ತಡೆಯಲು ಈ ಗ್ರಂಥವು "ಅಳಿಲು ಭಕ್ತಿ ಮಳಲು ಸೇವೆ" ಮಾಡಲು ಹೊರಟಿದೆ. ಈ ಅರಿಕೆಗೆ ಪೋಷಕವಾಗಿ—

"ಇತರ ತಾಪಶತಾನಿ ಯಥೇಚ್ಛಯಾ
ವಿತರ ತಾನಿ ಸಹೇ ಚತುರಾನನ ॥
ಅರಸಿಕೇಷು ಕವಿತ್ವನಿವೇದನಂ
ಶಿರಸಿ ಮಾ ಲಿಖ ಮಾ ಲಿಖ ಮಾ ಲಿಖ॥ " ಎಂದು

ವಾಗೀಶನನ್ನು ಪ್ರಾರ್ಥಿಸಿ—

ಕತ್ತಲಿಯುತ್ತ್ರಿ ಕನ್ನಡ
ಮಸ್ತಮಿಸಿದ ಸೂರ್ಯನಲ್ಲವಯ್ಯಾ ಜಗದೊಳ್।
ಮಸ್ತಕದಲಿ ತುರಿಯುರಿಗಳ
ನಸ್ತಿತ್ವಕೆ ತಾರದೆಂದು ಮೆಂದನುಗೆಯ್ವಂ॥

ಶಿರಸಿ, ಉ. ಕ. —ಬಿ. ಎಚ್. ಶ್ರೀಧರ
1-1-1981

ಹಾರೈಕೆ

ಉಡುಪಿಯ ಎಸ್. ಎಂ. ಎಸ್. ಪಿ. ಸಂಸ್ಕೃತ ಮಹಾಪಾಠಶಾಲೆಯ ರತ್ನೋತ್ಸವ ಸಮಾರಂಭ ಮತ್ತು ತೃತೀಯ ಅಖಿಲ ಕರ್ನಾಟಕ ಸಂಸ್ಕೃತ ಸಮ್ಮೇಳನ ಇವು ಸಂಯುಕ್ತವಾಗಿ ೧೯೮೦ ರ ಏಪ್ರಿಲ ೧೧ ರಿಂದ ೧೪ ರ ತನಕ ಉಡುಪಿಯಲ್ಲಿ ವೈಭವದಿಂದ ಜರುಗಿದವು. ನಾನಾವಿಧ ಕಾರ್ಯಕ್ರಮಗಳ ನಡುವೆ ದಿನಾಂಕ ೧೪ ರಂದು 'ಭಾಷಾ ಬಾಂಧವ್ಯ ಗೋಷ್ಠಿ' ಜರುಗಿತು. ಆ ಗೋಷ್ಠಿಯಲ್ಲಿ ಉಭಯ ಭಾಷಾ (ಸಂಸ್ಕೃತ–ಕನ್ನಡ) ಕವಿಗಳೂ ವಿಮರ್ಶಕರೂ ಆದ ಪ್ರೊ. ಬಿ. ಎಚ್. ಶ್ರೀಧರ ಅವರು 'ಸಂಸ್ಕೃತ-ಕನ್ನಡಗಳ ಭಾಂಧವ್ಯ' ದ ಕುರಿತು ತಮ್ಮ ಪ್ರಬಂಧವನ್ನು ಮಂಡಿಸಿದರು. ಅವರು ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಉಗಮ-ಕಾಲದಿಂದಲೂ ಅವು ಸಂಸ್ಕೃತದೊಡನೆ ಹೊಂದಿದ್ದ ಸಂಬಂಧವನ್ನು ಸೋದಾಹರಣ ಪ್ರತಿಪಾದಿಸಿದರು. ಅವರ ಪ್ರತಿಪಾದನೆಯನ್ನು ಮೆಚ್ಚಿದ ಅನೇಕರು ಆ ಪ್ರಬಂಧವನ್ನು ಸಮಗ್ರವಾಗಿ ಪ್ರಕಟಿಸಬೇಕೆಂದು ಇಚ್ಛೆ ಪಟ್ಟಂತೆ ನಮ್ಮ ಪರಿಷತ್ತು ತನ್ನ ಮೊದಲನೆಯ ಪ್ರಕಟನೆಯಾಗಿ ಈ ಹೊತ್ತಿಗೆಯನ್ನು ಪ್ರಕಟಿಸುತ್ತಿದೆ.

ಓದುಗರು ಇದರೊಳಗಿನ ವಿಷಯವನ್ನು ಆಳವಾಗಿ ಪರಿಶೀಲಿಸಬೇಕಾಗಿಯೂ ತಪ್ಪುಗಳಿದ್ದರೆ ಅದನ್ನು ಲೇಖಕರ ಹಾಗೂ ಪ್ರಕಾಶಕರ ಗಮನಕ್ಕೆ ತರಬೇಕಾಗಿಯೂ ವಿನಮ್ರ ಪ್ರಾರ್ಥನೆ.

ಈ ಪ್ರಬಂಧವನ್ನು ಪ್ರಕಟಿಸಲು ಅನುಮತಿ ನೀಡಿದ ಪ್ರೊ. ಶ್ರೀಧರ ಅವರಿಗೂ ಹರಕೆಯನ್ನು ಬರೆದು ಕೊಟ್ಟ ವರಕವಿ ಡಾ. ದ. ರಾ. ಬೇಂದ್ರೆಯವರಿಗೂ ಮುದ್ರಣ ಕಾರ್ಯವನ್ನು ನಿಷ್ಠೆಯಿಂದ ನೆರವೇರಿಸಿದ ಧಾರವಾಡದ ಜನತಾ ಪ್ರಿಂಟಿಂಗ ಪ್ರೆಸ್ಸಿನವರಿಗೂ ನಮ್ಮ ಕೃತಜ್ಞತೆಗಳು.

ಮಕರ ಸಂಕ್ರಮಣ, ೧೯೮೧.

ಪದಾಧಿಕಾರಿಗಳು
ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್

ಸಂಸ್ಕೃತ - ಕನ್ನಡ ಭಾಷೆಗಳ ಬಾಂಧವ್ಯ

ಉಪಕ್ರಮ

ಪರರಾಷ್ಟ್ರಗಳಲ್ಲಿ ಭಾರತಕ್ಕೆ ಮೊದಲು ಗೌರವವನ್ನು ತಂದುಕೊಟ್ಟದ್ದು ನಮ್ಮ ನಾಡಿನಲ್ಲಿ ಸಾವಿರಾರು ವರ್ಷಗಳ ಹಿಂದೆ ಸಂಸ್ಕೃತದಲ್ಲಿ ಬರೆಯಲ್ಪಟ್ಟಿದ್ದ ವೇದ, ಉಪನಿಷತ್ತು ಮತ್ತು ಇತಿಹಾಸ, ಪುರಾಣ ಹಾಗೂ ಮಹಾಕಾವ್ಯಗಳೆಂಬುದು ಜಗತ್ತಿಗೆ ತಿಳಿದ ವಿಷಯ. ಮಾನವರ ಕೊಡು-ಕೊಳ್ಳುವ ವ್ಯವಹಾರಗಳು ಹಿಂದಿನಿಂದಲೂ ಪ್ರಸಿದ್ಧ. ಭಾಷೆಯು ಇದಕ್ಕೆ ಅಪವಾದವಾಗಿಲ್ಲ. ೨೦ ನೆಯ ಶತಮಾನದಲ್ಲಂತೂ ಅಂಥ ಕೊಡು-ಕೊಳ್ಳುವ ವ್ಯವಹಾರಗಳು ಬಹಳ ವಿಸ್ತಾರವಾಗುತ್ತ ಹೋಗಿವೆ. ಅದರಿಂದಲೇ ದಿವಂಗತ ಜವಾಹರಲಾಲ ನೆಹರು ಅವರು International Interdependence ಅಂತಾರಾಷ್ಟ್ರೀಯ ಪರಸ್ಪರಾವಲಂಬನ ಎಂಬ ತತ್ವವನ್ನು ಘಂಟಾಘೋಷವಾಗಿ ಸಾರಿದರು. ಯಾವ ದೇಶವೂ ಸರ್ವತಂತ್ರ ಸ್ವತಂತ್ರವಲ್ಲ ಎಂಬುದಕ್ಕೆ ಇಂದಿನ ಪೆಟ್ರೋಲ್ ಬೇಡಿಕೆಯೊಂದು ಉದಾಹರಣೆ.

ಭಾರತವು ಕ್ರಿಸ್ತ ಪೂರ್ವಕಾಲದಿಂದಲೂ ಅನಾಕ್ರಾಮಕ ದೇಶವೆಂದು ಇತಿಹಾಸ ಹೇಳುತ್ತದೆ. ಇಲ್ಲಿದ್ದಷ್ಟು ವಿಶ್ವಜನೀನ ವೃತ್ತಿ ಪ್ರವೃತ್ತಿಗಳು ಇನ್ನೆಲ್ಲೂ ಇರಲಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ತತ್ವಜ್ಞಾನ, ನಾಟಕಾದಿ ಕಲೆ ಮುಂತಾದವುಗಳಲ್ಲಿ ಪ್ರಾಚೀನ ಗ್ರೀಸ್ ದೇಶಕ್ಕೂ ಭಾರತಕ್ಕೂ ನಡುವೆ ಅನೇಕ ಕೊಡುವ ಹಾಗೂ ಕೊಳುವ ವ್ಯವಹಾರಗಳು ನಡೆದಿದ್ದವು ಎಂದು ಇತಿಹಾಸತಜ್ಞರು ಹೇಳಿದ್ದಾರೆ. ಜ್ಯೋತಿಃಶಾಸ್ತ್ರದ ಆಧಾರದ ಮೇಲೆ ಸಂಶೋಧನೆ ನಡೆಸಿದ ದಿವಂಗತ ಬಾಲಗಂಗಾಧರ ತಿಲಕರ ಹಾಗೂ ಜರ್ಮನ್ ವಿದ್ವಾಂಸ ಯಾಕೋಬಿ ಅವರ ಅಭಿಪ್ರಾಯಗಳು ವೇದವಾಙ್ಮಯದ ಪ್ರಾಚೀನತೆಯ ಕಾಲನಿರ್ಣಯದಲ್ಲಿ ಕ್ರಿ. ಪೂ. 4500 ವರ್ಷಗಳು ಎಂಬಲ್ಲಿ ಕೂಡುತ್ತವೆ. ನಮ್ಮ ರಾಷ್ಟ್ರದ ಪ್ರಸಿದ್ಧ ವಿದ್ವಾಂಸರಾದ ದಿವಂಗತ ಡಾಕ್ಟರ್ ಶ್ರೀಕಂಠಶಾಸ್ತ್ರಿಗಳ ಹಾಗೂ ಅವರ ಶಿಷ್ಯೋತ್ತಮರಾದ ಪ್ರೊ. ಎಸ್. ಆರ್. ರಾವ್ ಅವರ ಸಂಶೋಧನೆಯ ಪ್ರಕಾರ ಪ್ರಾಚೀನವೆಂದು ಕರೆಯುತ್ತ ಬರಲಾಗಿದ್ದ ಮೊಹೆಂಜೊದಾರೋ ಮತ್ತು ಹರಪ್ಪ ಪ್ರದೇಶಗಳ ಸಂಸ್ಕೃತಿ ಮೊದ-

ಲಿಂದಲೂ ಸಂಮಿಶ್ರವಾಗಿತ್ತಲ್ಲದೆ ಕೇವಲ ಆರ್ಯ ಅಥವಾ ಕೇವಲ ದ್ರಾವಿಡ ಆಗಿತ್ತು ಎನ್ನಲು ಬರುವುದಿಲ್ಲ ವೆಂದು ತಿಳಿದು ಬಂದಿದೆ. ಸಂಸ್ಕೃತ ಭಾಷಿಕರಾದ ಭಾರತೀಯ ಆರ್ಯರೂ ಸಂಸ್ಕೃತೇತರ ಭಾಷೆಗಳನ್ನಾಡುವ ಇತರರೂ ಅಂದೇ ಸರ್ವಾಂಶಗಳಲ್ಲೂ ಸಂಮಿಶ್ರರಾಗಿದ್ದರೆಂಬುದು ಮಥಿತಾರ್ಥ.

ಇಂದು ಭಾರತದಲ್ಲಿ ಪ್ರಸಿದ್ಧವಾಗಿ ಆಡುತ್ತಿರುವ ಯಾವ ಭಾಷೆಯ ಇತಿಹಾಸವೂ ಸಂಸ್ಕೃತದ ಪೂರ್ವಜ ಎಂಬುದಕ್ಕೆ ಆಧಾರಗಳು ದೊರಕಿಲ್ಲ. ಸಂಸ್ಕೃತಕ್ಕೆ ಸಮಕಾಲೀನ ಅಥವಾ ಉತ್ತರಕಾಲೀನ ಎಂದೇ ವಿದ್ವಾಂಸರು ಹೇಳುತ್ತ ಬಂದಿದ್ದಾರೆ. ಕ್ರಿಸ್ತಪೂರ್ವ ಕಾಲದಲ್ಲಿ ಭಾರತದಲ್ಲಾದಷ್ಟು ದೊಡ್ಡಪ್ರಮಾಣದ ಮಾನವ ಕುಲಸಮನ್ವಯ ಮತ್ತೆಲ್ಲಿಯೂ ಆದಂತೆ ತೋರುವುದಿಲ್ಲ. ಇಂದಿನ ರಾಷ್ಟ್ರಮಾನ್ಯ ಭಾಷೆಗಳಲ್ಲಿ ಸಂಸ್ಕೃತವನ್ನು ಬಿಟ್ಟರೆ ತಮಿಳು, ಬಂಗಾಳಿ, ಹಾಗೂ ಕನ್ನಡ ಭಾಷೆಗಳಲ್ಲಿ ಉಪಲಬ್ಧವಾಗಿರುವ ವಾಙ್ಮಯಗಳೇ ಬಹಳ ಪುರಾತನವಾದವುಗಳೆಂದು ಪ್ರಸಿದ್ಧಿಯಿದೆ. ಅವುಗಳು ಸಂಸ್ಕೃತದಿಂದ ಏನನ್ನೂ ತೆಗೆದುಕೊಳ್ಳದೆ ಅಥವಾ ಸಂಸ್ಕೃತಕ್ಕೆ ಏನನ್ನೂ ಕೊಡದೆ ಸುಮಾರು ಕ್ರಿ. ಶ ಎರಡು ಸಾವಿರ ವರ್ಷಗಳ ವರೆಗೆ ಬೆಳೆದು ಬಂದವು ಎಂದು ಯಾವ ಇತಿಹಾಸಕಾರನೂ ಹೇಳಲಾರನು. ಶ್ರೀ ಆರ್. ಆರ್. ದಿವಾಕರರ ಪ್ರಕಾರ ಮಾನವನ ಸಮಸ್ತ ಚಟುವಟಿಕೆಗಳಿಗೂ "ಸಂಸ್ಕೃತಿ" ಎಂಬುದೊಂದೇ ಸರಿಯಾದ ಹೆಸರು. ಭಾಷೆಯು ಸಂಸ್ಕೃತಿಯ ಒಂದು ಪ್ರಧಾನವಾದ ಅಂಗ. ಭಾರತದ ಗಡಿ ಇಂದಿಗಿಂತ ಎರಡು ಪಟ್ಟು ಹಿಂದೆ ವಿಸ್ತಾರವಾಗಿತ್ತೆಂದು ಕೊಡಗಿನ ಮುತ್ತಣ್ಣನವರು ತಮ್ಮ ಗ್ರಂಥದಲ್ಲಿ* ಹೇಳಿದ್ದಾರೆ. ಇಂದಿನ ಪಾಕಿಸ್ತಾನ, ಇರಾನ, ಇರಾಕ್ ಮುಂತಾದ ಪ್ರದೇಶಗಳೆಲ್ಲವನ್ನೂ ಎತಿಯೋಪಿಯನ್ ವ್ಯಾಪಾರಿಗಳು ಭಾರತವೆಂದೇ ಗಣಿಸುತ್ತಿದ್ದರಂತೆ. ಅದು ಇಸ್ಲಾಂ ಮತ ಹುಟ್ಟುವುದಕ್ಕೂ ಪೂರ್ವದ ಕಾಲ. ಅದರಿಂದಲೋ ಏನೋ ಯೂರೋಪ್-ಅಮೇರಿಕಗಳ ಕೆಲ ವಿಶ್ವವಿದ್ಯಾನಿಲಯಗಳಲ್ಲಿ ಹೇಗೋ ಹಾಗೇ ಇಂದಿನ ಅಫಗಾನಿಸ್ತಾನದಲ್ಲೂ ಸಂಸ್ಕೃತವನ್ನು ಕಲಿಸುವ ವಿಶ್ವವಿದ್ಯಾನಿಲಯವಿದೆ.

ಉಪನ್ಯಾಸ

ಸಂಸ್ಕೃತ ಭಾಷೆಗೂ ಇಂಡೋ ಯುರೋಪಿಯನ್ ಭಾಷೆಗಳಿಗೂ ನಿಕಟ ಸಂಬಂಧವಿರುವದನ್ನು ಭಾಷಾಶಾಸ್ತ್ರವು ಮೊದಲು ಹೊರಗೆಳೆಯಿತು. ಅನಂತರ ತುಲನಾತ್ಮಕ ಸಂಶೋಧನೆಗಳಿಂದ ಭಾರತೀಯ ಭಾಷೆಗಳೆಲ್ಲವುಗಳಲ್ಲೂ ಅತ್ಯಂತ ನಿಕಟವಾದ ಸಂಬಂಧವಿರುವ ಸ್ವಾಭಾವಿಕತೆಯನ್ನು ಎತ್ತಿ ಹೇಳಲಾಯಿತು. ಉತ್ತರ

* Indo-Ethiopian Relations for centuries.

ಭಾರತದ ಪ್ರಸಿದ್ಧ ಭಾಷೆಗಳೆಲ್ಲವೂ ದಕ್ಷಿಣ ಭಾರತದ ಮರಾಠಿಯಂತೆಯೇ ಸಂಸ್ಕೃತ ವಂಶೀಯ ಎಂಬುದಿಂದು ಸರ್ವಸಂಮತ. ಉಳಿದ ಪ್ರಸಿದ್ಧ ಭಾಷೆಗಳಾದ ತಮಿಳು. ತೆಲುಗು. ಕನ್ನಡ, ಕೊಂಕಣೆ, ಮಲೆಯಾಳಿ ಭಾಷೆಗಳ ಪ್ರಾಚೀನ ಅರ್ವಾಚೀನ ಗ್ರಂಥಗಳನ್ನು ಅವಲೋಕಿಸಿದರೆ ಸಂಸ್ಕೃತದ ಮೂಲಕ ತಿಳಿದು ಬಂದಿರುವ ಅನೇಕ ಸಾಂಸ್ಕೃತಿಕ ಅಂಶಗಳನ್ನು ನಾವಿಂದು ಗುರುತಿಸಿದ್ದೇವೆ. ಸಂಸ್ಕೃತ ಹಾಗೂ ಗ್ರೀಕ್ ಭಾಷೆಗಳಲ್ಲಿಯ ನಾಟಕಗಳ ಅಂಗಗಳಲ್ಲಿ ಸಾಮ್ಯಾಂಶಗಳಿರುವುದಕ್ಕಿಂತಲೂ ಹೆಚ್ಚು ಪ್ರಮಾಣದ ಸಾಮ್ಯಾಂಶಗಳು ನಮ್ಮ ಭಾಷೆಗಳಲ್ಲಿರುವುದನ್ನು ನಾವು ಜೀವನದಲ್ಲಿ ಇಂದಿಗೂ ಕಾಣುತ್ತಿದ್ದೇವೆ."ಗಚ್ಛತ್ವಾರ್ಯ: ಪುನರ್ದರ್ಶನಾಯ" ಎಂಬ ಸಂಸ್ಕೃತದ ಬಳಕೆಗೆ "ನಾವು ಹೋಗಿ ಬರುತ್ತೇವೆ" ಎಂಬ ಕನ್ನಡ ಸತ್ ಸಂಪ್ರದಾಯವು ಸಮಾನವಾದದ್ದು. ಇದೇ ಪ್ರಕಾರ ಪದ,ಅರ್ಥ,ವಿಚಾರ,ಶಾಸ್ತ್ರ, ಕಾವ್ಯ, ಕಲೆ, ಮತಧರ್ಮ, ರೀತಿ,ನೀತಿ, ವೃತ್ತಿ, ಪ್ರವೃತ್ತಿಗಳೆಲ್ಲವುಗಳಲ್ಲೂ ಭಾರತೀಯರಾಗಿರುವ ಹಿಂದು, ಮುಸಲ್ಮಾನ, ಕ್ರೈಸ್ತ, ಪಾರಸಿಕ ಜೈನ, ಬೌದ್ಧ, ಮುಂತಾದ ಭಿನ್ನ ಜನಾಂಗಗಳೆಲ್ಲವುಗಳ ಸಂಸ್ಕೃತಿಯಲ್ಲೂ ವಿವಿಧ ಪ್ರಮಾಣಗಳಲ್ಲಿ ಬೇಕಾದಷ್ಟು ಸಾಮ್ಯಾಂಶಗಳನ್ನು ನಾವು ಕಾಣುತ್ತೇವೆ. ನಮ್ಮ ನಮ್ಮ ವೈಯಕ್ತಿಕ ಹೆಸರುಗಳಲ್ಲೇ ನೂರಕ್ಕೆ 80—90ರಷ್ಟು ಸಾಧಾರಣಾಂಶಗಳನ್ನು ನಾವು ಕಾಣಬಹುದು. ಉಪನಾಮಧೇಯಗಳಲ್ಲಿದು ಇನ್ನಷ್ಟು ಸ್ಪಷ್ಟ. ಉದಾಹರಣೆ ಚೌಧರಿ ಮುಂತಾದವುಗಳು

ಒಂದು ಮಾತನ್ನು ಈ ನಡುವೆ ಸ್ಪಷ್ಟಪಡಿಸಬೇಕಾಗಿದೆ. ಅದೇನೆಂದರೆ ಇಂಗ್ಲೀಷಿನಂತೆಯೇ ಸಂಸ್ಕೃತವೂ ಒಂದು ಭಾಷೆ. ಇಂಗ್ಲೀಷ್ ಶಬ್ದಕೋಶದಲ್ಲಿ ಆಂಗ್ಲೇತರ ಪದಗಳನ್ನು ಹೇಗೆ ಸೇರಿಸಿಕೊಂಡು ಬರಲಾಗುತ್ತದೆಯೋ ಹಾಗೇ ಸಂಸ್ಕೃತವೂ ತನ್ನ ಬೆಳವಣಿಗೆಯಲ್ಲಿ ಸಂಸ್ಕೃತೇತರ ಭಾಷೆಗಳಲ್ಲಿ ಪ್ರಮುಖವಾದವುಗಳಿಂದ ಎಷ್ಟೋ ಪದಗಳನ್ನು ತೆಗೆದುಕೊಂಡಿರಲೇಬೇಕು ಎಂಬುದನ್ನು ಗೃಹೀತವೆಂದು ತಿಳಿದುಕೊಳ್ಳಲಾಗಿದೆ. "ದೀನಾರ, ಹೋರಾ" ಮುಂತಾದ ಕೆಲವು ಪದಗಳು ಉದಾಹರಣೆಗೆ ಸಿಕ್ಕುತ್ತವೆ. ಆದುದರಿಂದ ಭಾರತೀಯವಾದ ಸಮಕಾಲೀನ ಪ್ರಮುಖ ಭಾಷೆಗಳಿಂದ ಸಂಸ್ಕೃತವು ಎಷ್ಟು ಪದಗಳನ್ನು ತೆಗೆದುಕೊಂಡಿತ್ತೆಂಬುದು ಸ್ಪಷ್ಟವಿಲ್ಲ. ಆದರದು ತೆಗೆದುಕೊಂಡೇ ಇರಬೇಕು. ಕಾಲ್ಡವೆಲ್ ಮಹಾಶಯನು ಅಕ್ಷರ ಸಂಖ್ಯೆ ಕಡಿಮೆ ಇರುವ ತಮಿಳು ಭಾಷೆಯು ಪರಭಾಷೆಗಳಿಂದ ತೆಗೆದುಕೊಂಡ ಪದಗಳನ್ನು ಗುರುತಿಸುವುದು ಅಸಾಧ್ಯವಾಗಿದೆ ಎಂದು ಹೇಳಿರುವುದಿಲ್ಲಿ ಸ್ಮರಣೀಯ. ಭಾಷಾಶಾಸ್ತ್ರಕ್ಕೆ ಕೈಮೀರಿದ ಪ್ರಕರಣಗಳೆಷ್ಟೋ ಇವೆ. ಸಂಸ್ಕೃತಕ್ಕೆ ಇತರ ಭಾರತೀಯ ಭಾಷೆಗಳ ವಾಙ್ಮಯಗಳು ಎಷ್ಟು ಋಣಿಗಳಾಗಿವೆಯೋ ಅಷ್ಟೇ ಸಂಸ್ಕೃತವು ಅವುಗಳಿಗೆ ಋಣಿಯಾಗಿದೆ ಎನ್ನಲು ಸ್ಪಷ್ಟವಾದ ಆಧಾರಗಳ ಸಂಖ್ಯೆ ಅಧಿಕವಾಗಿರದಿದ್ದರೂ ಸಂಸ್ಕೃತ ಲೇಖಕರೆಲ್ಲರೂ ಭಾರತೀಯರೇ ಆಗಿರುವುದರಿಂದ ಅವರು ತಮ್ಮ ಹಾಗೂ ತಮ್ಮ ಸುತ್ತುಮುತ್ತಲಿನ

ಇತರ ಭಾಷಿಕರಿಂದ ತಮ್ಮ ಸಂಸ್ಕೃತ ಲೇಖನಗಳಿಗೆ ಬೇಕಾದ ವಿಚಾರ, ಪದ, ಪದ-ಸಂಪತ್ತಿ ಮುಂತಾದವುಗಳನ್ನು ಪಡೆದಿರಲೇಬೇಕು ಎಂಬುದು ಸ್ವತಃ ಸಿದ್ಧ. ಪ್ರೊ ಪಾಂಡುರಂಗಿಯವರೂ ಪ್ರೊ.ಗುರುಪಾದ ಹೆಗಡೆ ಅವರೂ ತಮ್ಮ ಲೇಖನಗಳಲ್ಲಿ ಕನ್ನಡಿಗರು ಬರೆದ ಸಂಸ್ಕೃತ ಗ್ರಂಥಗಳನ್ನು ಉದಾಹರಿಸಿದ್ದಾರೆ. ಇನ್ನು. ಒಂದು ಭಾಷೆಯು ಇನ್ನೊಂದರಿಂದ ಪದಗಳನ್ನು ತೆಗೆದುಕೊಳ್ಳುವಾಗ ಉಚ್ಚಾರಗಳ ಬದಲಾವಣೆಗಳಾಗುವುದು ಅನಿವಾರ್ಯ. ಆಂಗ್ಲರ ಬಾಯಲ್ಲಿ ಚಿತ್ರದುರ್ಗವು "ಚಿಟ್ಲ್‌-ಡ್ರಗ್ "ಎಂಬುದಾಗಿಯೂ ಶ್ರೀರಂಗ ಪಟ್ಟಣವು "ಸೆರಿಂಗ ಪಟಾಮ್" ಎಂಬುದಾಗಿಯೂ ವಿಶಾಖ ಪಟ್ಟಣವು "ವಿಜಾಗ ಪಟಾಮ್ "ಎಂಬುದಾಗಿಯೂ ಧಾರವಾಡವು " ಧಾರವಾರ್ " ಎಂಬುದಾಗಿಯೂ ಪರಿವರ್ತನಹೊಂದಿದ್ದು ಸುವಿದಿತ. ಇಂಥ-ಸಾಧ್ಯತೆಯನ್ನು ಅಲ್ಲಗಳೆಯಲು ಸಾಧ್ಯವಾಗದುದರಿಂದಲೇ " ಬ್ರಹ್ಮ " ಎಂಬ ಪದದಿಂದ " ಏಬ್ರಹಾಮ್ " ಮತ್ತು "ಇಬ್ರಾಹೀಮ್" ಎಂಬ ಪದಗಳು ಹುಟ್ಟಿದವೆಂದು ಹೇಳಿದ್ದುಂಟು. ಇಂಥ ಕೆಲ ಉದಾಹರಣೆಗಳು ವಿವಾದಾಸ್ಪದವಾಗಿಯೇ ಉಳಿಯುವವು ಎನ್ನಿಸಿದರೂ ಅವಿವಾದಾಸ್ಪದವಾದ ತದ್ಭವಗಳೆಷ್ಟೋ ದೊರೆಯುವುದೂ ಅಷ್ಟೇ ಸತ್ಯವಾಗಿದೆ. ತಮಿಳಿನ "ಪಂದಲ್" ಕನ್ನಡದಲ್ಲಿ "ಹಂದರ"ಇಂಗ್ಲಿಷಿನಲ್ಲಿ"ಪೆಂಡಾಲ್" ಎಂದು ಬಳಸಲ್ಪಟ್ಟಿದೆ. ಸಂಸ್ಕೃತದಲ್ಲಿ ನೀರಿಗೆ 30ಕ್ಕೂ ಹೆಚ್ಚಿನ ಪದಗಳಿದ್ದರೂ ಕನ್ನಡದ "ನೀರ್"ಎಂಬ ಪದವನ್ನದು ತೆಗೆದುಕೊಂಡಿದೆ ಎಂಬುದು ಅನೇಕ ವಿದ್ವಾಂಸರ ಅಭಿಪ್ರಾಯ. ಕನ್ನಡದಲ್ಲಿ ನೀರಿಗೆ "ನೀರೆ"ಎಂಬುದೊಂದೇ ಶಬ್ದವಿದೆ. ಆದರೆ ಗ್ರೀಕ್ ಸಮುದ್ರ ದೇವತೆಯನ್ನು "ನೇರಿಯಸ್" ಎಂದು ಕರೆದಿರುವುದು ಪುನಃ ಸಂದೇಹಕ್ಕೆ ಎಡೆಗೊಟ್ಟಿದೆ. ಹೀಗೆ ತಳಕು ಹಾಕಿಕೊಂಡ ಭಾಷಾ ಸಮಸ್ಯೆಗಳು ಭಿನ್ನ ಭಾಷಿಕರ ನಿಕಟ ಸಂಪರ್ಕವನ್ನು ಎತ್ತಿ ತೋರಿಸುತ್ತದೆ. ಕನ್ನಡದ ಒಬ್ಬ ದೊಡ್ಡ ಕವಿಯಾದ ರಾಘವಾಂಕನು ತನ್ನನ್ನು "ಉಭಯಕವಿ ಕಮಲ ರವಿ" ಎಂದು ಬಣ್ಣಿಸಿಕೊಂಡಿರುವುದು ಅಂದಿನ ಕನ್ನಡಿಗರಲ್ಲನೇಕರ ಸವ್ಯಸಾಚಿತ್ವಕ್ಕೆ ಉದಾಹರಣೆಯನ್ನು ನೀಡುತ್ತದೆ. ಈಗಲೂ ನಮ್ಮಲ್ಲಿ ಬಹುಭಾಷಾವಿದ್ವಾಂಸರೂ ಬಹುಭಾಷಾತಜ್ಞರಾದ ಕವಿಗಳೂ ಇದ್ದಾರೆ. ಅವರಲ್ಲೂ ಕನ್ನಡ ಸಂಸ್ಕೃತಗಳ ಸಂಬಂಧವು ಕನ್ನಡ ಮತ್ತು ಇತರ ಭಾಷೆಗಳೊಳಗೆ ಇರುವ ಸಂಬಂಧಕ್ಕಿಂತ ಹೆಚ್ಚು ನಿಕಟವಾದುದೆಂಬುದನ್ನು ಈವರೆಗಿನ ಕನ್ನಡ ಗ್ರಂಥಗಳು ಉದಾಹರಿಸುತ್ತವೆ. ಕಾಕುತ್ಸ್ಥವರ್ಮನು ಬರೆಯಿಸಿದ ಹಲ್ಮಿಡಿಯ ಶಾಸನವು ಕ್ರಿ. ಶ. 450ರದ್ದು. ಅದರಲ್ಲೇ ಕನ್ನಡ ಸಂಸ್ಕೃತ ಪದಗಳ ಸಂಮಿಶ್ರಣವನ್ನು ಕಾಣಬಹುದು. ಅದಕ್ಕೂ ಹಿಂದಿನ ವಿವಾದಾಸ್ಪದವಾದ ಉದಾಹರಣೆ ಎಂದರೆ ದಿ. ಗೋವಿಂದ ಪೈಗಳು ದೊರಕಿಸಿಕೊಟ್ಟ ಗ್ರೀಕರ ಕನ್ನಡ ಪ್ರಹಸನವೊಂದು. ಅದರಲ್ಲೂ ಸಂಸ್ಕೃತಜನ್ಯವಾದ ಪದಗಳೊಂದೂ ಇಲ್ಲದಿಲ್ಲ. ಈ ಅಂಶಗಳನ್ನು ಅವಲೋಕಿಸಿದರೆ ಪದ ಭಂಡಾರದ ದೃಷ್ಟಿಯಿಂದಲೇ ಕನ್ನಡ-ಸಂಸ್ಕೃತಗಳಿಗೆ ಸಾಧಾರಣವಾದ ಅನೇಕಾನೇಕ ಪದಗಳಿಂದ ಸಂಬಂಧವೆಂದು ಸ್ಪಷ್ಟವಾಗಿ

ಅಭಿಪ್ರಾಯ ಪಡಬಹುದು. "ಗಲ್ಲ" ಎಂಬ ಪದವು ಸಂಸ್ಕೃತ–ಕನ್ನಡಗಳೆರಡಕ್ಕೂ ಸಾಧಾರಣ; ಅದರ ಅರ್ಥ ಎರಡು ಭಾಷೆಗಳಲ್ಲೂ "ಕೆನ್ನೆ" ಎಂದೇ ಆಗಿದೆ. ಆದೇ ಪ್ರಕಾರ—

ಸಂಸ್ಕೃತ	ಕನ್ನಡ	ಸಂಸ್ಕೃತ	ಕನ್ನಡ
ಗುಂಜಾ	ಗುಂಜೆ	ರಾಗ	ರಾಗ
ಗೀತಾ	ಗೀತೆ	ಧಾಟೀ	ಧಾಟಿ
ಗುಣ	ಗುಣ	ತಾಲ	ತಾಳ
ಮಣಿ	ಮಣಿ	ಧಾತು	ಧಾತು
ಮಂಚ	ಮಂಚ	ದೂರ	ದೂರ
ಪಟ್ಟ	ಪಟ್ಟ	ದಿಕ್	ದಿಕ್ಕು
ಮೇಲ	ಮೇಳ	ಜನ	ಜನ
ಲಕ್ಷ	ಲಕ್ಷ	ಜಾತಿ	ಜಾತಿ
ಲಕ್ಷಣ	ಲಕ್ಷಣ	ನೀತಿ	ನೀತಿ
ಕೋಟಿ	ಕೋಟಿ	ತಪಸ್	ತಪಸ್ಸು
ದೇವ	ದೇವ	ಜಪ	ಜಪ
ಧರ್ಮ	ಧರ್ಮ	ಪೂಜಾ	ಪೂಜೆ
ಆತ್ಮ	ಆತ್ಮ	ಹೋಲೀ	ಹೋಳಿ
ಜೀವ	ಜೀವ	ಹಠ	ಹಟ
ಪರಮಾತ್ಮ	ಪರಮಾತ್ಮ	ಕಥೆ	ಕತೆ
ರೂಪ	ರೂಪ	ಭಂಡ	ಭಂಡ
ರುಂಡ	ರುಂಡ		

ಎಂಬಂತಹ ತತ್ಸಮ ಅಥವಾ ಸಮ ಸಂಸ್ಕೃತ ಪದಗಳನ್ನು ಪರಿಶೀಲಿಸಿದರೆ ಕನ್ನಡದ ಹುಟ್ಟು (ಭೂಲೋಕದಲ್ಲಿ) ಮೊದಲಾಯಿತೋ ಸಂಸ್ಕೃತ ಹುಟ್ಟಿದ ಮೇಲಾಯಿತೋ ಎಂಬ ನಿತ್ಯಸಂದಿಗ್ಧವಾದ ಐತಿಹಾಸಿಕ ಪ್ರಶ್ನೆ ಏಳುತ್ತದೆ. ಸದ್ಯ ದ್ರಾವಿಡರನ್ನು ಮೆಡಿಟರೇನಿಯನ್ ಜನಾಂಗ ಎಂದು ಹೇಳುತ್ತಿರುವುದರಿಂದ "ಮೆಡಿಟರೇನಿಯನ್" ಅಥವಾ ಭೂಮಧ್ಯ ಸಮುದ್ರದ ದ್ರಾವಿಡ ನಾಮಧೇಯ ಯಾವುದಾಗಿತ್ತು ? ಎಂದು ಕೇಳಬೇಕಾಗುತ್ತದೆ. ಅದಕ್ಕೀಗ ಉತ್ತರ ಸಿಕ್ಕದು. ಸ್ವತಃ "ದ್ರಾವಿಡ" ಎಂಬ ಪದಕ್ಕೆ "ತಮಿಳ" ಎಂಬ ಅರ್ಥ ಮಾತ್ರ ಕನ್ನಡ ನಿಘಂಟಿನಲ್ಲಿದೆ; "ದ್ರಾವಿಡ"ವನ್ನೂ ಸಂಸ್ಕೃತ ಪದವೆಂದು ತೋರಿಸಲಾಗಿದೆ (ಕನ್ನಡ ನಿಘಂಟು-ಮಂಗಳೂರಿನ ಶಾರದಾ ಪ್ರೆಸ್ಸಿನಲ್ಲಿ 1951 ರಲ್ಲಿ ಅಚ್ಚಾದದ್ದು ಈ ಮಾತಿಗೆ ಆಧಾರ). ಎಲ್ಲರಿಗೂ ಗೊತ್ತಿರು-

ವಂತೆ ಗ್ರಂಥಸ್ಥವಾಙ್ಮಯಂಗಳಲ್ಲಿ ಋಗ್ವೇದವು ಅತಿ ಪ್ರಾಚೀನವಾದದ್ದು— ನಮ್ಮ ದೇಶವಲ್ಲಲ್ಲ— ಇಡಿ ಜಗತ್ತಿನಲ್ಲಿಯೇ. ಹೀಗಿರುವುದರಿಂದ ಮತ್ತು ನಮ್ಮ ದೇಶದಲ್ಲಿ ಶುದ್ಧ ಆರ್ಯರಾಗಲಿ, ಶುದ್ಧ ದ್ರಾವಿಡರಾಗಲಿ, ಕಾಯೇನ ವಾಚಾ ಮನಸಾ ಇಲ್ಲದಿರುವುದರಿಂದ ಸಂಸ್ಕೃತ ಕನ್ನಡಗಳ ಪ್ರತ್ಯೇಕೀಕರಣಕ್ಕೆ ಪ್ರಯತ್ನಿಸುವುದರಿಂದ ಕನ್ನಡದ ವರ್ತಮಾನ ಸಂಸ್ಕೃತಿಗೆ ಉಂಟಾಗುವ ಹಾನಿ ಅಪಾರ. ಅಲ್ಲದೆ ಅಂಥ ಪ್ರಯತ್ನವು ಅಶಕ್ಯವೂ ಹೌದು, ಅನೈಸರ್ಗಿಕವೂ ಹೌದು. ಆಂಡಯ್ಯ ಕೂಡ ತದ್ಭವ (ಪ್ರಾಕೃತ) ಪದಗಳನ್ನು ಹೊರಗಿಟ್ಟು ಕನ್ನಡದಲ್ಲಿ ಬರೆಯಲಾರದಾದದ್ದು ಸ್ಪಷ್ಟ. ತದ್ಭವಗಳ ಸಂಖ್ಯೆ ಕನ್ನಡದಲ್ಲಿ ಅಸಂಖ್ಯಾತವೆಂಬಷ್ಟಿದೆ. ಈ ಬಳಕೆಯನ್ನು ಆಧರಿಸಿದರೆ, ಸಂಸ್ಕೃತದ ಮೂಲ ಜ್ಞಾನವಿಲ್ಲದವನು ಕನ್ನಡದಲ್ಲಿ ಎಂದೂ ಪರಿಪೂರ್ಣ ವಿದ್ವಾಂಸ, ಪಂಡಿತ ಎನ್ನಿಸಿಕೊಳ್ಳಲಾರ ಎಂಬುದು ಖಚಿತವಾಗುತ್ತದೆ. 'ಆರತಿ' ಎಂಬ ಪದದ ಮೂಲ "ಆರಾತ್ರಿಕ" ಎಂಬ ಸಂಸ್ಕೃತ ಪದ ಎಂಬುದನ್ನು ಎಷ್ಟು ಜನರು ಬಲ್ಲರು ? ಲಂಡ ಎಂಬುದಕ್ಕೆ ಲದ್ದೆ ಎಂಬುದು ಮೂಲ. "ಹಾಲುಹೈನ" ಎಂಬಲ್ಲಿಯ ಹೈನದ ಮೂಲರೂಪ ಹೈಯಂಗವೀನ.

ತದ್ಭವ	ಸಂಸ್ಕೃತ	ತದ್ಭವ	ಸಂಸ್ಕೃತ
ಹರೆಯ	ಪ್ರಾಯ	ಚಕ್ಕುಲಿ	ಶಷ್ಕುಲೀ
ಬಡ್ಡಿ	ವೃದ್ಧಿ	ಸಕ್ಕರೆ	ಶರ್ಕರಾ
ಹಚ್ಚಡ	ಪ್ರಚ್ಛದ	ಬೆತ್ತ	ವೇತ್ರ
ಸೊನ್ನೆ	ಶೂನ್ಯ	ಬಸವ	ವೃಷಭ
ಸೆಜ್ಜೆ	ಶಯ್ಯಾ	ಬೇತಾಳ	ವೇತಾಲ
ಸಲಾಕೆ	ಶಲಾಕಾ	ವೇಳೆ	ವೇಲಾ
ಸನ್ನೆ	ಸಂಜ್ಞಾ	ಬೀದಿ	ವೀಥೀ
ಸಂಚಕಾರ	ಸತ್ಯಂಕಾರ	ಬಾಲ	ವಾಲ
ಸಿಕ್ಕ	ಶಿಕ್ಯ	ಬತ್ತಿ	ವರ್ತಿ
ರನ್ನ	ರತ್ನ	ಬುತ್ತಿ	ಭುಂಕ್ತಿ
ಜೋಗಿ	ಯೋಗಿ	ಭಿಡೆ	ವ್ರೀಡಾ
ಸಂಜೆ	ಸಂಧ್ಯಾ	ಬಿಕ್ಕೆ	ಭಿಕ್ಷಾ
ಮುತ್ತು	ಮುಕ್ತಾ	ಭತ್ತೆ	ಭೃತ್ಯಾ
ಮಸಿ	ಮಷೀ	ಪಯಣ	ಪ್ರಯಾಣ
ಮಲ್ಲಿಗೆ	ಮಲ್ಲಿಕಾ	ಆಣೆ	ಆಜ್ಞಾ
ಮನ್ನಣೆ	ಮಾನನ	ಹಣತೆ	ಪ್ರಣೀತಾ

ಎಂಬಂತಹ ತದ್ಭವಗಳು ಅನೇಕಾನೇಕ. ಹಾಗೆಯೇ ಇಂಗ್ಲೀಷಿನ Medium ಎಂಬುದನ್ನು ಮಾಧ್ಯಮ ಎಂದು ಪರಿವರ್ತಿಸಿ ಕೊಂಡ ಬಗೆಯೂ ಕನ್ನಡದಲ್ಲಿ ಹೇರಳವಾಗಿದೆ.

ಸಂಸ್ಕೃತ	ಕನ್ನಡ	ಅರ್ಥ
ಪುಷ್ಪಬಾಣ	ಪೂಗೋಲ	ಮನ್ಮಥ
ಮೂಷಕವಾಹನ	ಇಲಿದೇರ	ಗಣಪತಿ
ಫಾಲಾಕ್ಷ	ಪಣೆಗಣ್ಣ	ಶಿವ
ಕ್ಷೀರೋದತನಯಾ	ಇಂಗಡಲಣುಗಿ	ಲಕ್ಷ್ಮಿ
ಗೋಪಾಲ	ತುರುವಳ	ದನಗಾಹಿ
ಶಕ್ರಚಾಪ	ಇಂದಿರವಿಲ್	ಕಾಮನಬಿಲ್ಲು
ಪಂಕಜ	ಕೆಸರ್ಮಲ್ಲಿಗೆ	ತಾವರೆ
ಗಂಧವಹ	ಕಂಪುವಳ	ಗಾಳಿ
ತಾರಾಪಥ	ಮೀಂಬಟ್ಟೆ	ಆಕಾಶ
ಚತುರ್ಮುಖ	ನಾಲ್ಮೊಗ	ಬ್ರಹ್ಮ
ಷಣ್ಮುಖ	ಆರುಮೊಗ	ಸ್ಕಂದ
ಕಮಲಾಕ್ಷ	ತಾವರೆಗಣ್ಣ	ವಿಷ್ಣು
ಪಕ್ಷಿರಾಜ	ಪಕ್ಕಿಗಳಾಣ್ಮ	ಗರುಡ
ತಾರಾನಾಥ	ಮೀಂಗಳೆರೆಯ	ಚಂದ್ರ
ಕಮಲಮಿತ್ರ	ತಾವರೆಗೆಳೆಯ	ಸೂರ್ಯ
ಹೈಮವತೀ	ಐಕಿಲ್ವೆಟ್ಟಣುಗಿ	ಪಾರ್ವತಿ
ಘನೋಪಲ	ಮುಗಿಲ್ಗಲ್ಲು	ಆಲಿಗಲ್ಲು
ಫಲಿತರಸಾಲ	ಬಂದಮಾವು	ಹಣ್ಣಾದ ಮಾವಿನಮರ

ಸಂಸ್ಕೃತ-ಕನ್ನಡಗಳ ಕಾವ್ಯಸಂಬಂಧ

ಸಂಸ್ಕೃತದಲ್ಲಿರುವ ಕಾವ್ಯಗಳಿಂದ ಕಥಾವಸ್ತುಗಳನ್ನು ಆಯ್ದುಕೊಂಡು ಸ್ವಪ್ರತಿಭೆಯಿಂದ ತಕ್ಕ ಬದಲಾವಣೆಗಳನ್ನು ಮಾಡಿಕೊಂಡು, ನವ್ಯತೆಯನ್ನು ಮೆರೆದ ಕನ್ನಡ ಕವಿಗಳು ಸ್ತುತ್ಯರು. ಅಂಥ ಕವಿಗಳ ಕಾವ್ಯಗಳ ಪಟ್ಟಿ ದೊಡ್ಡದು. ಅಚ್ಚಗನ್ನಡ ಕವಿಗಳೆಂದು ಹೇಳಲ್ಪಟ್ಟಿರುವ ಹರಿಹರ-ರಾಘವಾಂಕರು ಸಹ ಈ ಬಗೆಯಿಂದಲೇ ಪ್ರಸಿದ್ಧರಾಗಿದ್ದಾರೆ, ಹರಿಹರನು "ಗಿರಿಜಾ ಕಲ್ಯಾಣ" ದ ಕಥೆಗೆ ಕಾಳಿದಾಸನ "ಕುಮಾರ ಸಂಭವ" ವನ್ನು ಆಶ್ರಯಿಸಿದನೆಂದಮೇಲೆ ಹೆಚ್ಚಿಗೆ ಹೇಳಬೇಕಾದುದೇನಿದೆ ? ಆದರೂ ಪ್ರಸ್ತುತ ಪ್ರಸಂಗದಲ್ಲಿ ಒಂದು ಚಿಕ್ಕ ಐತಿಹಾಸಿಕ ವಿವರಣೆಯನ್ನು ಕೊಡಬೇಕಾಗಿದೆ.

ಉಪಲಬ್ಧ ಕನ್ನಡ ಮಹಾಕಾವ್ಯಗಳಲ್ಲಿ ಆದಿಪಂಪನ "ವಿಕ್ರಮಾರ್ಜುನ ವಿಜಯವು" ಗಣ್ಯವಾದದ್ದು. ಇದರಲ್ಲಿ ಕವಿಯು ಪಾಂಡವರ ಜನನದಿಂದ ಕೌರವರ ವಧೆಯ ವರೆಗೆ ಸಂಸ್ಕೃತದಲ್ಲಿರುವ ವೇದವ್ಯಾಸ ಕೃತವಾದ ಮಹಾಭಾರತದ ಕಥೆಯನ್ನು ಸಂಕ್ಷೇಪವಾಗಿ ಹೇಳಿ ಕೊನೆಯಲ್ಲಿ ಅರ್ಜುನನಿಗೆ ಪಟ್ಟಾಭಿಷೇಕವಾದಂತೆ ವರ್ಣಿಸಿದ್ದಾನೆ. ಮಹಾಭಾರತದಲ್ಲಿ ಕೌರವರ ವಧೆಯ ಅನಂತರ ಪಟ್ಟಾಭಿಷೇಕವಾದದ್ದು ಧರ್ಮರಾಯನಿಗೆ, ಅದರ ಅಷ್ಟಾದಶಪರ್ವಗಳ ಪ್ರಧಾನ ರಸವು ಶಾಂತ. ಇದರ 14 ಆಶ್ವಾಸಗಳ ಮುಖ್ಯ ರಸವು ವೀರ. ಇದರಲ್ಲಿ ಕೃಷ್ಣನಿಗಿಂತ ಅರ್ಜುನ ಮುಖ್ಯ: ಅವನೇ ಕಥಾ ನಾಯಕ. ಎಲ್ಲ ಕವಿಗಳೂ ಇಂಥ ಬದಲಾವಣೆಯನ್ನು ಮಾಡಿಲ್ಲ. ರಾಘವಾಂಕನ ಶಿವಭಕ್ತಿಯು ಹರಿಶ್ಚಂದ್ರೋಪಾಖ್ಯಾನವನ್ನಾಧರಿಸಿ ಬರೆದ "ಹರಿಶ್ಚಂದ್ರಕಾವ್ಯ" ದಲ್ಲಿ ಹರಿಶ್ಚಂದ್ರನನ್ನೇ ಕಥಾ ನಾಯಕನನ್ನಾಗಿ ಉಳಿಸಿಕೊಳ್ಳಲು ವಿಘ್ನವಾಗಲಿಲ್ಲ. ಪಂಪನೊಡೆಯ ಅರಿಕೇಸರಿಯನ್ನು ಅರ್ಜುನನಲ್ಲಿ ಏಕೀಕರಿಸಿದ್ದರಿಂದ ಪಂಪ ಭಾರತಕ್ಕೆ ಅರ್ಜುನನೇ ಕಥಾನಾಯಕನಾಗಬೇಕಾಯ್ತು. ಈತನ ಕಾಲ ಸುಮಾರು ಕ್ರಿ. ಶ. 941.

ಸುಮಾರು ಕ್ರಿ. ಶ. 990 ರಲ್ಲಿದ್ದ 1 ನೆಯ ನಾಗವರ್ಮನು "ಕರ್ಣಾಟಕ ಕಾದಂಬರಿ"ಯನ್ನು ಬಾಣಭಟ್ಟನ ಸಂಸ್ಕೃತ "ಕಾದಂಬರಿ"ಯನ್ನು ಆಧರಿಸಿ ಬರೆದನು. ವರ್ಣನ ವಿಸ್ತಾರದಲ್ಲಿ ಪಂಪನಂತೆಯೇ ಇವನು ಮೂಲಕ್ಕಿಂತ ಕಡಿಮೆಯನ್ನೇ ಮಾಡಿದನೆನ್ನಬಹುದು. ಅವನ ಸ್ವತಂತ್ರ ಶೈಲಿ ಗಾಂಭೀರ್ಯ ಇವನಿಗಿಲ್ಲ: "ವಿಕ್ರಮಾರ್ಜುನ ವಿಜಯ" ದಂತೆಯೇ ಇದೂ ಚಂಪೂ ಕಾವ್ಯ. ಇವನಿಗಿಂತ ಹಿಂದಿದ್ದ ಮಹಾಕವಿ ದಂಡಿಯು ಚಂಪೂಲಕ್ಷಣವನ್ನೇನೋ ಹೇಳಿದ್ದನು. ಆದರೆ ಕಾಲಕ್ರಮದಲ್ಲಿ ಉತ್ತಮ

ಚಂಪೂ ಕಾವ್ಯ ಸಿಗುವುದು ಕನ್ನಡದಲ್ಲೇ. ಕಥಾವಸ್ತು ಮೂಲ ಕಾದಂಬರಿಯದು, ವರ್ಣನಾದಿ ಉಳಿದ ಅಂಗಗಳು ನಾಗವರ್ಮನವು ಎನ್ನಬಹುದು.

ಕನ್ನಡ ಮಹಾಕವಿ ರನ್ನನ ಕಾಲ ಕ್ರಿ.ಶ. 993. ಈತನ ಪ್ರಸಿದ್ಧಿಗೆ ಇವನು ಬರೆದ "ಸಾಹಸಭೀಮವಿಜಯ" ಅಥವಾ "ಗದಾಯುದ್ಧ" ವೆಂಬ ಗದ್ಯ ಪದ್ಯಮಯ ಚಂಪೂಕಾವ್ಯವೇ ಕಾರಣ. ಇದರ ವಸ್ತುವನ್ನು ವೇದವ್ಯಾಸನ ಮಹಾಭಾರತದಿಂದ ತೆಗೆದುಕೊಳ್ಳಲಾಗಿದೆ. ಈತನೂ ಪಂಪನಂತೆಯೇ ರಸೋಚಿತವಾದ ಬದಲಾವಣೆಗಳನ್ನು ಅಲ್ಲಲ್ಲಿ ಮಾಡಿಕೊಂಡಿದ್ದಾನೆ. ಇದರಲ್ಲಿ ಭೀಮಸೇನನೇ ಕಥಾನಾಯಕ. ಇದರ ಪ್ರಧಾನ ರಸವೂ ವೀರವೇ.ಭೀಮನಿಗೆ ಯುದ್ಧ ಮಾಡಲಿರುವ ಧರ್ಮ ಬಲವು ಕೌರವನಿಗಿಲ್ಲ. ಆದರೂ ಈ ಕವಿಯು ಕೌರವನ ಕೆಲ ಸದ್ಗುಣಗಳನ್ನೂ ಭೀಮನ ರೌದ್ರವನ್ನೂ ಎತ್ತಿ ಒತ್ತಿ ಹೇಳಿದ್ದಾನೆ. ಈ ಕವಿಯು ಕನ್ನಡ ಕಾವ್ಯದ ವಾಕ್ ಪ್ರೌಢಿಯನ್ನೂ ಗೌರೀ ಶಂಕರ ಶಿಖರಕ್ಕೇರಿಸಿದ್ದಾನೆ. ನಿಷ್ಪಕ್ಷಪಾತ ವಿಮರ್ಶಕರಾರೂ ಇದನ್ನು ಅನುಮೋದಿಸದಿರರು. ರನ್ನಗನ್ನಡವೆಂದರೆ ರನ್ನಗನ್ನಡ. ಕುಮಾರ ವ್ಯಾಸನ ಕನ್ನಡ ಎಷ್ಟೇ ಓಜೋಗುಣಯುಕ್ತವಾಗಿದ್ದರೂ ಈತನ ಕನ್ನಡದ ಓಜಸ್ಸಿನ ಅಚ್ಚುಕಟ್ಟುತನಕ್ಕೆ ಸರಿದೊರೆಯಾಗಲಾರದು. ರಾಘವಾಂಕನ ಭಾಷಾ ಶುದ್ಧಿ ಭಾಷಾ ಪರಿಪಕ್ವತೆಗಳಿಗೆ ಇವನೇ ಮೇಲ್ಪಂಕ್ತಿ ಹಾಕಿಕೊಟ್ಟನೆನ್ನಬಹುದಾಗಿದೆ. ರನ್ನನ ಠೀವಿಯೇ ಠೀವಿ; ಅವನ ರೀತಿಯೇ ರೀತಿ. ಈತನ ಕನ್ನಡ ಕನ್ನಡಸರಸ್ವತಿಯ ಮೂಗುತಿಯೆನ್ನಬಹುದು. ಮುದ್ದಣ ಆ ಮೇಲೆ ಹೇಳಿದ ಕರ್ಮಣಿ ಸರದೊಳ್ ಚೆಂಬುವಳಮಂ ಕೋದಂತೆ ತತ್ಸಮಗಳನ್ನು ತದ್ಭವ ದೇಶ್ಯಗಳೊಡನೆ ಇವನು ಬೆಸೆದಿದ್ದಾನೆ.

ಆಮೇಲೆ ಸುಮಾರು ಕ್ರಿ. ಶ. 1100 ರಲ್ಲಿದ್ದ ನಾಗಚಂದ್ರನು ಬರೆದ "ರಾಮಚಂದ್ರ ಚರಿತ ಪುರಾಣ" ವೆಂಬ ಚಂಪೂ ಮಹಾಕಾವ್ಯವು ಪ್ರಸಿದ್ಧ. ಇದರ ವಸ್ತು ವಾಲ್ಮೀಕಿಯು ಸಂಸ್ಕೃತದಲ್ಲಿ ಬರೆದ ಶ್ರೀಮದ್ರಾಮಾಯಣ ಮಹಾಕಾವ್ಯದಿಂದ ಆಯ್ದುಕೊಂಡದ್ದು. ಇಲ್ಲಿಯೂ ಕವಿಯು ಸ್ವಪ್ರಿಯ ಸಂದರ್ಭಗಳಿಗೆ ಉಚಿತವಾದ ವಸ್ತು, ಪಾತ್ರ, ಸನ್ನಿವೇಶಗಳ ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಶ್ರೀ ರಾಮಚಂದ್ರನಿಲ್ಲಿ ಕಥಾನಾಯಕ ಮತ್ತು ರಾವಣನು ಪ್ರತಿನಾಯಕ. ರನ್ನನ ಕೌರವನಂತೆ ಅಭಿನವ ಪಂಪನೆಂದು ಬಿರುದು ಪಡೆದ ಈ ಕವಿಯು ರಾವಣನು ತನ್ನ ಸ್ವಭಾವದಲ್ಲಿ ಆದಿಯಿಂದ ಅಂತ್ಯದ ವರೆಗೂ ಜನ್ಮತಃ ದುಷ್ಟ ಎನ್ನಿಸುವುದಿಲ್ಲ. ಇದು ಈ ಕವಿ ತೋರಿಸಿದ ದೊಡ್ಡ ವೈಶಿಷ್ಟ್ಯ. ಈ ಚಂಪುವಿನ 16 ಆಶ್ವಾಸಗಳೂ ಹಿಂದೆ ಹೇಳಿದ ಮಹಾಕಾವ್ಯಗಳಂತೆಯೇ

ಪರಮಬ್ರಹ್ಮಶರೀರ ಪುಷ್ಟಿ ಜನತಾಂತರ್ದೃಷ್ಟಿ ಕೈವಲ್ಯಬೋ
ಧರಮಾ ಮೌಕ್ತಿಕ ಹಾರಸೃಷ್ಟಿ ಕವಿತಾವಲ್ಲೀ ಸುಧಾವೃಷ್ಟಿ ಸ।

ರ್ವರಸೋತ್ಪಾದ ನವೀನ ಸೃಷ್ಟಿ ಬುಧಹರ್ಷಾಕೃಷ್ಟಿ ಸರ್ವಾಂಗ ಸುಂ
ದರಿ ವಿದ್ಯಾನಟಿ ನಾಟ್ಯಮಂ ನಲಿಗೆ ಮತ್ಕಾವ್ಯಸ್ಥಲೀ ರಂಗದೊಳ್॥

ಎಂಬುದು ಕನ್ನಡದ ಪ್ರಸಿದ್ಧ ಕವಿಗಳೆಲ್ಲರ ಆದರ್ಶ ಎಂದರೆ ತಪ್ಪಾಗದು. ಈ ಆದರ್ಶವನ್ನು ಮೊದಲ ಬಾರಿಗೆ ಉಗ್ಗಡಿಸಿದ ಶ್ರೇಯಸ್ಸು ನಾಗಚಂದ್ರನಿಗೆ ಸಲ್ಲುತ್ತದೆ. ಕುಮಾರವ್ಯಾಸನು "ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ" ಎಂದು ಹೇಳಿದ ಮೇಲೂ ರಾಮಾಯಣವನ್ನಾಧರಿಸಿದ ಕನ್ನಡಕಾವ್ಯಗಳು ಹೊರಬಿದ್ದದ್ದು ರಾಮಾಯಣವನ್ನು ಹೊಸ ಹೊಸದಾಗಿ ಆಕರ್ಷಕತೆಯಿಂದ ಹೇಳುವ ಕನ್ನಡ ಪ್ರತಿಭೆಗೆ ನಿದರ್ಶನ. ಆದುದರಿಂದ ಸಂಸ್ಕೃತಕವಿ ವಾಲ್ಮೀಕಿ ಕನ್ನಡಿಗನೇ ಆಗಿದ್ದಿರಬಹುದೋ ಏನೋ ಎಂದು ಯಾರಾದರೂ ಇನ್ನು ಮುಂದೆ ಸಂಶೋಧಿಸಿ ಹೇಳಿದರೆ ಆಶ್ಚರ್ಯವಾಗದು.

ಸುಮಾರು ಕ್ರಿ.ಶ. 1140 ರಲ್ಲಿದ್ದಿರಬಹುದಾದ ಕನ್ನಡಕವಿ ಕರ್ಣಪಾರ್ಯನು ಬರೆದ "ನೇಮಿನಾಥ ಪುರಾಣ"ದಲ್ಲಿ ಕೃಷ್ಣಾವತಾರದ ಕಥೆಯೂ ಪಾಂಡವರ ಕಥೆಯೂ ಭಾರತ ಯುದ್ಧದ ಕಥೆಯೂ ಬಂದಿವೆ. ಈ ಕಥೆಗಳ ಮೂಲ ಆಕರಗಳು ಸಂಸ್ಕೃತದಲ್ಲಿದ್ದದ್ದು ಸುಪ್ರಸಿದ್ಧ, ಕ್ರಿ.ಶ. 1145ರಲ್ಲಿದ್ದಿರಬಹುದಾದ ದುರ್ಗಸಿಂಹನೆಂಬ ಕನ್ನಡ ಕವಿಯು ಸಂಸ್ಕೃತ ಪಂಚತಂತ್ರವನ್ನಾಧರಿಸಿ ಪದ್ಯಕಾವ್ಯವನ್ನು ಬರೆದನು. ಇದರ ರೂಪವೂ ಚಂಪುವೇ. ಈತನಾದರೂ ವಸುಭಾಗ ಭಟ್ಟನ ಮೂಲ ಕೃತಿಯನ್ನು ಸಂಸ್ಕೃತದಿಂದ ತೆಗೆದುಕೊಂಡು ಕನ್ನಡದಲ್ಲಿ ಹೊಸತಾಗಿ ತೋರುವಂತೆ ರಚಿಸಿದನು. ಕ್ರಿ.ಶ. 1160ರಲ್ಲಿದ್ದ ಚೆನ್ನಬಸವಕವಿ ಬರೆದ ರುದ್ರಭಾರತದಲ್ಲಿ ನಡುನಡುವೆ ಸಂಸ್ಕೃತ ಶ್ಲೋಕಗಳು ಉದಾಹೃತವಾಗಿರುವುದು ರಾಘವಾಂಕನು ತಾನು "ಉಭಯ ಕವಿ ಕಮಲ ರವಿ" ಎಂದು ಕೊಂಡದ್ದನ್ನು ನೆನಪಿಗೆ ತರುತ್ತದೆ. ನಮ್ಮ ಕನ್ನಡ ಕವಿಗಳ-ನೇಕರು ಈ ವರೆಗೂ ಸಂಸ್ಕೃತ ಕನ್ನಡಗಳೆರಡನ್ನೂ ಬಲ್ಲವರಾಗಿದ್ದಾರೆ ಎಂಬುದು ಅವರ ಕನ್ನಡಶೈಲಿಯಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ಡಾ. ಕೆ. ವಿ. ಪುಟ್ಟಪ್ಪನವರ ಹಾಗೂ ಕವಿ ಪು. ತಿ. ನರಸಿಂಹಾಚಾರ್ಯರ ಕೃತಿಗಳನ್ನು ಓದಿ ಈ ಮಾತಿಗೆ ನಿದರ್ಶನಗಳನ್ನು ಕಂಡುಕೊಳ್ಳಬಹುದು. 1170ರಲ್ಲಿದ್ದ ನೇಮಿಚಂದ್ರನು ಬರೆದ "ಲೀಲಾವತಿ" ಎಂಬ ಕಾವ್ಯವು ಕಥಾನಿರೂಪಣೆಯಲ್ಲಿ ಸುಬಂಧು ಸಂಸ್ಕೃತದಲ್ಲಿ ಬರೆದ "ವಾಸವ-ದತ್ತೆ"ಯ ಕಥೆಯನ್ನು ಹೋಲುತ್ತದೆ.

ಕ್ರಿ.ಶ. 1165 ರಲ್ಲಿದ್ದ ರಾಘವಾಂಕನೆಂಬ ಪ್ರಸಿದ್ಧ ಕವಿಯು ಬರೆದ ವಾರ್ಧಕ ಷಟ್ಪದಿಯ "ಹರಿಶ್ಚಂದ್ರ ಕಾವ್ಯ" ಎಂಬ ಮಹಾಕೃತಿಗೆ ಸಂಸ್ಕೃತದ ಹರಿಶ್ಚಂದ್ರೋಪಾಖ್ಯಾನ"ವು ಆಧಾರ. ಅವನ ಕನ್ನಡ ಬಹಳ idiomatic ಸಹಜ ನುಡಿಗಟ್ಟುಗಳಿಂದ ಕೂಡಿದ್ದು ಎಂದು ಹೆಸರಾಗಿದೆ. ಆದರೂ ಅವನ ಕಾವ್ಯದ ಮೊದಲನೆಯ ಪದವು "ಶ್ರೀಪತಿಗೆ" ಎಂಬುದಾಗಿದೆ. "ಶ್ರೀಪತಿಗೆ ಸೊಬಗನ್" ಎಂದು ಅವನು

ಪ್ರಾರಂಭಿಸಿದಂತೆಯೇ ಆ ಪದ್ಯದಲ್ಲಿ (ಇಡಿ ಕಾವ್ಯದಲ್ಲಿರುವಂತೆ)100ಕ್ಕೆ 50ರಷ್ಟು ತತ್ಸಮ ಅಥವಾ ಸಂಸ್ಕೃತ ಪದಗಳನ್ನು ಬಳಸಿದ್ದಾನೆಂದು ಧಾರಾಳವಾಗಿ ಹೇಳಬಹುದು. ಅವನು ತನ್ನನ್ನು "ಉಭಯ ಕವಿ ಕಮಲ ರವಿ" ಎಂದು ಹೇಳಿಕೊಂಡಿರುವುದನ್ನು ಪರಾಮರ್ಶಿಸಿದರೆ ಸಂಸ್ಕೃತದಲ್ಲಿಯೂ ಅವನು ಕಾವ್ಯವನ್ನು ರಚಿಸಿರಬಹುದೆಂದು ಭಾಸವಾಗುತ್ತದೆ. ಹರಿಶ್ಚಂದ್ರ ಕಾವ್ಯದ ಒಂದು ಪ್ರತಿಯ ಆದಿಭಾಗದಲ್ಲಿರುವ ಗದ್ಯವು ಇಂತಿದೆ.

"ಇದು ಸಮಸ್ತಕಳಾಧರ ಕ್ರಮನಿಷ್ಠ ಸಂಕ್ರಂದನಾದಿ ಸುರನಿಕರ ಮಣಿ ಮಕುಟ ಮಯೂಖ ಮಾಲಾಪುಂಜ ರಂಜಿತ ಚರಣ ಕಿಂಜಲ್ಕ ಮಂಜರೀ ಪಿಂಜರಿತ ದಿಶಾವಲಯಂ ಸಕಲದೈವ ದೀಕ್ಷಾಕರ್ತೃ ನಿಖಿಲಸೈವ ರಕ್ಷಾದಕ್ಷ ದೈನ್ಯದೈವ ಶರಣಾಗತ ವಜ್ರಪಂಜರ ದರ್ಪಿಷ್ಠ ದೈವಸರ್ಪ ಮಯೂರ ಗರ್ವಿತಗರ್ವಶಾಪಹರಣ ಸಮಸ್ತ ದೈವ ಸಾರ್ವಭೌಮನೆನಿಪ ಪಂಪಾಧೀಶ್ವರ ವಿರೂಪಾಕ್ಷ ವರ್ಣನವಾಗೆ ಸರಸಕವಿ ಸಾರ್ವಭೌಮಂ ಚತುರ ಕವಿ ಚತುರ್ ಮುಖಂ ಭಾವಕವಿ ಭಾಳಲೋಚನಂ ವರ್ಣಕ ಕವಿ ವರ್ಣಾವತಂಸಂ ವಸ್ತುಕ ಕವಿ ಮಸ್ತಕ ನ್ಯಸ್ತಹಸ್ತಂ ಅದಟಕವಿ ಮಾನಮರ್ದನಂ ಗರ್ವಿತಕವಿ ಗಿರಿವಜ್ರದಂಡಂ ಉಭಯಕವಿ ಶರಭ ಭೇರುಂಡಂ ವರ್ತಮಾನಕವಿ ವೇಶ್ಯಾ ಭುಜಂಗಂ ಕರ್ಣಾಟಕಾವ್ಯ ಲಕ್ಷಣದೀಕ್ಷಾಚಾರ್ಯಂ ಶಿವಯೋಗ ಚಕ್ರೇಶ್ವರ ಲೋಕಾರಾಧ್ಯ ಸಾಕಾರ ಸುಧರ್ಮ ಮರ್ತ್ಯಲೋಕದ ಮಹಾದೇವನೆನಿಪ ಹಂಪೆಯ ಹರಿಹರ ದೇವರ ಕುಮಾರನೆನಿಪ ಉಭಯಕವಿ ಕಮಲಾದಿತ್ಯ ಹಂಪೆಯ ರಾಘವಾಂಕ ವರ್ಣನವಪ್ಪ ಹರಿಶ್ಚಂದ್ರ ಪ್ರಬಂಧಂ"

ಮತ್ತೊಂದು ಪ್ರತಿಯ ಗ್ರಂಥಾಂತ್ಯದಲ್ಲಿ ಈ ಗದ್ಯವಿದೆ.

"ಇಂತೀ ಪಂಪಾಪುರದ ವಿರೂಪಾಕ್ಷಲಿಂಗದಾ ಚರಣ ನೀರಜ ಗಂಧಸಿಂದೂರ ಪಾವನ ಭ್ರಮರನೆನಿಪ ಅದಟಕವಿ ಚೌದಂತ ಹಂಪೆಯ ರಾಘವಾಂಕ ವಿರಚಿತಮಪ್ಪ ಹರಿಶ್ಚಂದ್ರ ಚಾರಿತ್ರದೊಳ್"

"ಇವನ ಪ್ರಬಂಧವು ಪ್ರೌಢವಾಗಿಯೂ ಅರ್ಥಗಾಂಭೀರ್ಯಪ್ರಚುರ್ಯವಾಗಿಯೂ ದೇಶ್ಯ ಪದ ಭೂಯಿಷ್ಠವಾಗಿಯೂ ಇದೆ. ಷಟ್ಪದಿ ಗ್ರಂಥಗಳನ್ನು ಬರೆವುದಕ್ಕೆ ಈತನೇ ಆದಿಕವಿಯೆಂದು ವೀರಶೈವರ ಗ್ರಂಥಗಳಲ್ಲಿ ಹೇಳಿದೆ" ಎಂದವರು ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್ ಬಹಾದೂರ್ ಆರ್ ನರಸಿಂಹಾಚಾರ್ಯರು.

ಕ್ರಿ.ಶ. 1209 ರಲ್ಲಿದ್ದ ನೆನ್ನಲಾಗಿರುವ ಪ್ರಸಿದ್ಧ ಕನ್ನಡ ಕವಿ ಜನ್ನನು ಬರೆದ "ಯಶೋಧರ ಚರಿತೆ"ಗೆ ಸಂಸ್ಕೃತದಲ್ಲಿರುವ ವಾದಿರಾಜನ ಯಶೋಧರಚರಿತೆಯು ಆಧಾರ ಎಂದು ಪ್ರೊ ವಿ. ಸೀತಾರಾಮಯ್ಯನವರು ಹೇಳಿದ್ದಾರೆ. 1254 ರಲ್ಲಿದ್ದ ಮಹಾಬಲ ಕವಿ ಬರೆದ "ನೇಮಿನಾಥ ಪುರಾಣ" ದಲ್ಲಿ ಸಂಸ್ಕೃತ ಮೂಲದ

ಹರಿವಂಶ ಕುರುವಂಶಗಳ ಕಥೆಗಳನ್ನು ಹೇಳಲಾಗಿದೆ. 1275 ರಲ್ಲಿದ್ದ ಕನ್ನಡ ಕವಿ ಕುಮುದೇಂದುವು "ಕುಮುದೇಂದು ರಾಮಾಯಣ" ವನ್ನೂ 1300 ರಲ್ಲಿದ್ದ ಚೌಂಡರಸನು "ಅಭಿನವ ದಶಕುಮಾರಚರಿತೆ" ಯನ್ನೂ ಬರೆದರು. ಈ ಎರಡರಲ್ಲೂ ಮೂಲ ಸಂಸ್ಕೃತ ಗ್ರಂಥಗಳಲ್ಲಿಲ್ಲದ ಕನ್ನಡ ನವ್ಯತೆ ಇರುವುದು ಸಹಜವಾಯಿತು. 1410 ರಲ್ಲಿದ್ದ ದೇವ ರಾಜನೆಂಬ ಕನ್ನಡ ಕವಿಯು ಸಂಸ್ಕೃತದ ಅಮರುಕ ಶತಕದ ಭಾಷಾಂತರವನ್ನು ಪರಿವರ್ಧಿನೀ ಷಟ್ಪದಿಯಲ್ಲಿ ಮಾಡಿದನು. 1424 ರ ಕಾಲದ ಭಾಸ್ಕರ ಕವಿಯು 1000 ಭಾಮಿನೀಷಟ್ಪದಿಗಳುಳ್ಳ 18 ಸಂಧಿಗಳಲ್ಲಿ ವಾದೀಭ-ಸಿಂಹಸೂರಿ ಸಂಸ್ಕೃತದಲ್ಲಿ ರಚಿಸಿದ್ದ "ಜೀವಂಧರ ಚರಿತೆ" ಯನ್ನು ಚೆನ್ನಾಗಿ ಕನ್ನಡಿಸಿದನು. 13 ನೆಯ ಶತಮಾನಕ್ಕೆ ಸ್ವಲ್ಪ ಹಿಂದೆ ಅಥವಾ ಮುಂದೆ ಇದ್ದನೆನ್ನಲಾದ ಕುಮಾರವ್ಯಾಸನು ಸಂಸ್ಕೃತ ಭಾರತದ ಮೊದಲ 10 ಪರ್ವಗಳನ್ನು ಯಥೋಚಿತ ಬದಲಾವಣೆಗಳೊಡನೆ, ಕೃಷ್ಣನ ಪಾತ್ರಕ್ಕೆ ಅತಿಪ್ರಾಧಾನ್ಯವನ್ನು ಕೊಟ್ಟು ಭಾಮಿನೀ ಷಟ್ಪದಿಯಲ್ಲಿ ಬರೆದದ್ದು ಸುಪ್ರಸಿದ್ಧ. ಅವನಿಗೆ ಸಮಕಾಲೀನ ಎನ್ನಬಹುದಾದ ಬತ್ತಲೇಶ್ವರ ಕವಿಯು ಭಾಮಿನೀಷಟ್ಪದಿಯಲ್ಲಿ "ಕೌಶಿಕ ರಾಮಾಯಣ" ವೆಂಬ ರಾಮಾಯಣವನ್ನು ಬರೆದು ಪ್ರಸಿದ್ಧನಾದನು. ಈ ಇಬ್ಬರ ಕನ್ನಡ ಶೈಲಿಗಳೂ ನಡುಗನ್ನಡದ ಮೂಲಕ ಹಳಗನ್ನಡದ ಮೇರು ಕೃತಿಗಳ ಪ್ರಭಾವವನ್ನು ಬೀರುತ್ತವೆ. ವಾಲ್ಮೀಕಿ ರಾಮಾಯಣದ ಕಥೆಯೇ ಬತ್ತಲೇಶ್ವರ ರಾಮಾಯಣಕ್ಕೂ ಆಧಾರ. ಈತನೂ ಕುಮಾರ ವ್ಯಾಸನಂತೆಯೇ ಸಂಸ್ಕೃತದಲ್ಲಿರುವ ಮೂಲ ಗ್ರಂಥವನ್ನು ಭಾಷಾಂತರ ಮಾಡಲು ಹೋಗದೆ ತನ್ನದೇ ಆದ ವಾಕ್ ಪ್ರೌಢಿಯಿಂದ ಕಾವ್ಯರಚನೆ ಮಾಡಿದನು. 15ನೆಯ ಶತಮಾನದಲ್ಲಿ ನಾರಾಯಣ ಎಂಬ ಕನ್ನಡ ಕವಿಯು ಸಂಸ್ಕೃತ ಭಾಗವತ ಮಹಾಪುರಾಣದ ತಾತ್ಪರ್ಯವನ್ನು ನಿರೂಪಿಸುವ "ಭಾಗವತ ಸಂಹಿತಾರ್ಥ" ಎಂಬ ಗದ್ಯಕಾವ್ಯವನ್ನು ಬರೆದನು. ಅದೇ ಶತಮಾನದಲ್ಲಿ ನರಹರಿ ಎಂಬ ಕನ್ನಡ ಕವಿಯು ತೊರವೆ ರಾಮಾಯಣವನ್ನು ಬರೆದು 'ಕುಮಾರ ವಾಲ್ಮೀಕಿ' ಎಂದು ಪ್ರಸಿದ್ಧನಾದನು. ಕ್ರಿ.ಶ. 1510 ರಲ್ಲಿದ್ದ ತಿಮ್ಮಣ್ಣ ಕವಿಯು ಸಂಸ್ಕೃತ ಭಾರತದ ಉತ್ತರ ಭಾಗವನ್ನು ಎಂದರೆ ಶಾಂತಿ ಪರ್ವವನ್ನು ಮೊದಲ-ಗೊಂಡು 7 ಪರ್ವಗಳ ಕಥೆಯನ್ನು ಭಾಮಿನಿಯಲ್ಲಿ ಬರೆದು ಕೀರ್ತಿಶೇಷನಾದ. ಇದೂ ಮೂಲದ ಅಕ್ಷರಾರ್ಥದ ಭಾಷಾಂತರವಲ್ಲ. 1530 ರಲ್ಲಿದ್ದ ಚಾಟುವಿಠಲನಾಥನು ಸಂಸ್ಕೃತ ದಲ್ಲಿರುವ ಭಾಗವತ-ಭಾರತಗಳ ಸ್ವಲ್ಪ ಭಾಗಗಳನ್ನು ತನ್ನದೇ ಆದ ರೀತಿಯಿಂದ ಕನ್ನಡದಲ್ಲಿ ಬರೆದನು. "ನಿತ್ಯಾತ್ಮ ಶುಕಯೋಗಿ" ಎಂಬುದು ಇವನ ಬಿರುದು. ಇವನ ಎರಡು ಕಾವ್ಯಗಳೂ ಭಾಮಿನೀ ಷಟ್ಪದಿಯಲ್ಲಿವೆ. 1550 ರಲ್ಲಿದ್ದ-ನೆನ್ನಲಾದ ಸಾಳ್ವ ಕವಿಯು ಮಹಾಭಾರತದ 16 ಪರ್ವಗಳನ್ನು ಕನ್ನಡದ ಭಾಮಿನೀ ಷಟ್ಪದಿಯಲ್ಲಿ ಬರೆದು ಪ್ರಸಿದ್ಧನಾದನು. ಈತನೂ ಕನ್ನಡ ಪರಂಪರೆಯಂತೆ ಸ್ವತಂತ್ರ ಪ್ರತಿಭೆಯನ್ನೇ ಅದರಲ್ಲಿ ಮೂಡಿಸಿದನು. ಇವರಿಂದ ಕಂಡು ಬರುವುದೇ-

ನೆಂದರೆ "ತಿಣುಕಿದನು ಫಣಿರಾಯ ಭಾರತ ಕಥೆಯ ಭಾರದೊಳಗೆಂದು" ಎಂದು ಅಣಕವಾಡ ಬಹುದಾಗಿದೆ. ಆದರೆ ಅಂಥ ಅಣಕ ನಿಜವಾಗಿ ಒಪ್ಪದು. ಏಕೆಂದರೆ ಕನ್ನಡದ ರಾಮಾಯಣದ ಕವಿಗಳಂತೆಯೇ ಭಾರತದ ಕವಿಗಳಾದರೂ ತಮ್ಮ ವಿಶಿಷ್ಟ ವರ್ಣನಾ ವೈಖರಿಗಳಿಂದ ರಸಿಕರನ್ನು ಮೆಚ್ಚಿಸಿದ್ದಾರೆ.

ಮುಂದೆ ಕಾಣುವುದು ಚಾಯಣಿಭಾರತ. ಇದೊಂದು ಅಸಮಗ್ರಪ್ರತಿ. ವಾರ್ಧಕದಲ್ಲಿ ಚಾಯಣನು ಸುಮಾರು 1550 ರಲ್ಲಿ ಬರೆದಿರಬಹುದಾಗಿದೆ. ಇದು ಸಾಕಷ್ಟು ಪ್ರಸಿದ್ಧವಲ್ಲ. ಇವನಿಗೇನೋ "ಸುಕುಮಾರ ಭಾರತಿ" ಎಂಬ ಬಿರುದು ಅಂದು ದೊರಕಿತ್ತಂತೆ. ಅದೇ ಪ್ರಕಾರ ಮಹಾಭಾರತದ ಶಾಂತಿಪರ್ವದ ಆದಿಭಾಗದಲ್ಲಿ ಹೇಳಿರುವ ಕರ್ಣ ವೃತ್ತಾಂತವನ್ನು 1600ರಲ್ಲಿದ್ದ ಪ್ರಧಾನಿ ತಿರುಮಲಾರ್ಯನು ಸಾಂಗತ್ಯದ 4 ಸಂಧಿಗಳಲ್ಲಿ ಬರೆದಿದ್ದಾನೆ. ಸಂಸ್ಕೃತ ಮಹಾಭಾರತದ ಶಾಂತಿಪರ್ವದ ಆದಿಭಾಗವು ಇದಕ್ಕೆ ಆಕರ. 1620 ರ ಚಕ್ರಭೂಪಾಲನೂ ಭಾರತ ಕಥಾ ಸಂಗ್ರಹವನ್ನು ಬರೆದಿದ್ದಾನೆ. 1650ರಲ್ಲಿ ತಿರುಮಲೆ ವೈದ್ಯನು ಉತ್ತರ ರಾಮಾಯಣವನ್ನು ರಚಿಸಿದ್ದಾನೆ. ಅದರಲ್ಲಿ ಭಾಮಿನೀ ಷಟ್ಪದಿಯಲ್ಲಿ ಬರೆದ 10 ಸಂಧಿಗಳಿವೆ.

ಮಹಾಭಾರತಾಂತರ್ಗತವಾದ ಭಗವದ್ಗೀತೆಯನ್ನೇ ಪ್ರತ್ಯೇಕವಾಗಿ ತೆಗೆದುಕೊಂಡು 19 ಅಧ್ಯಾಯಗಳಲ್ಲಿ 737 ಭಾಮಿನೀ ಷಟ್ಪದಿಗಳಲ್ಲಿ ಬರೆದ ವಿಶೇಷವು 1650ರಲ್ಲಿದ್ದ ನಾಗರಸನ ಕಾವ್ಯದಲ್ಲಿದೆ. ಅನಂತರ ಅವನ ಸಮಕಾಲೀನನಾಗಿರ-ಬಹುದಾದ ತಿಮ್ಮರಸನು ಮಾರ್ಕಂಡೇಯ ರಾಮಾಯಣವನ್ನು ಬರೆದಿದ್ದಾನೆ. ಅದಿರುವುದು 30 ಸಂಧಿಗಳ 1500 ವಾರ್ಧಕ ಷಟ್ಪದಿಗಳಲ್ಲಿ. ಹಾಗೇ ಕನ್ನಡಕವಿ ಯೋಗೀಂದ್ರನೆಂಬಾತನು 1650ರಲ್ಲಿ ಉತ್ತರರಾಮಾಯಣವನ್ನು ಕುಸುಮ ಷಟ್ಪದಿಯಲ್ಲಿ ಬರೆದನು. ಅದಕ್ಕೆ 48 ಸಂಧಿಗಳಿವೆ. 1655ರಲ್ಲಿದ್ದ ಉಭಯಕವಿ ಷಡಕ್ಷರದೇವನು ಕನ್ನಡ ಮಹಾಕಾವ್ಯಗಳ ಜೊತೆಗೆ "ಕವಿಕರ್ಣರಸಾಯನ"ವೆಂಬ ಸಂಸ್ಕೃತ ಗ್ರಂಥವನ್ನು ಬರೆದುದಾಗಿ ಹೇಳಿಕೊಂಡಿದ್ದಾನೆ. ಈ ಕವಿಯು "ಉಭಯಕವಿ ಕಮಲರವಿ". ತತ್ಸಮ ಬಾಹುಳ್ಯದ ಶೈಲಿಯಿಂದ ಸಂಸ್ಕೃತದ ಪರಿಚಯದ ಜ್ಞಾನವಿಲ್ಲದವರು ಇವನು ಕನ್ನಡದಲ್ಲಿ ಬರೆದ "ರಾಜಶೇಖರವಿಲಾಸ" "ಬಸವರಾಜ ವಿಜಯ" ಮತ್ತು "ಶಬರಶಂಕರ ವಿಲಾಸ" ಗಳನ್ನು ಮಾತನಾಡಿಸಲಾರರೆಂಬುದು ಅಪ್ರತಿಹತ ಸತ್ಯ.

ಕ್ರಿ.ಶ.1672ರಲ್ಲಿದ್ದ ಚಿಕ್ಕುಪಾಧ್ಯಾಯನ 28 ಕನ್ನಡ ಕೃತಿಗಳಲ್ಲಿ ಸಂಸ್ಕೃತ ಮೂಲದ" ಅಮರುಕ ಶತಕ" ಸಂಗ್ರಹಿಸಿ ಬರೆದ ಶೃಂಗಾರ ಶತಕ ಮತ್ತು ವಿಷ್ಣುಪುರಾಣಗಳು ಗಣ್ಯ. ಜೊತೆಗೆ ಸಂಸ್ಕೃತದಲ್ಲಿರುವ ಬ್ರಹ್ಮಾಂಡ ಪುರಾಣದ ಪುಣ್ಯ ಕ್ಷೇತ್ರಮಾಹಾತ್ಮ್ಯವನ್ನು ಇವನು ಕನ್ನಡಿಸಿದ್ದಾನೆ. ಹಾಗೇ ಆ ಪುರಾಣದ "ಶ್ರೀರಂಗ ಮಾಹಾತ್ಮ್ಯ"ವನ್ನು ಕನ್ನಡಗದ್ಯದಲ್ಲೇ ಬರೆದನು. ಸಂಸ್ಕೃತ ಹರಿವಂಶವನ್ನಾಧರಿಸಿ ಅಶ್ವಮೇಧಿಕ ಪರ್ವದಲ್ಲಿ ಹೇಳಿದ ಶೇಷಧರ್ಮವನ್ನೂ ಈ ಕವಿಯು ಚಿಕ್ಕದೇವರಾಜನ

ಸಂತೋಷಾರ್ಥವಾಗಿ ಕನ್ನಡಿಸಿದನು. 7000 ಶ್ಲೋಕಗಳಿಂದ ಕೂಡಿದ ಜನಪ್ರಿಯ "ಶುಕ ಸಪ್ತತಿ" ಗ್ರಂಥವನ್ನು ಇವನು ಕನ್ನಡಕ್ಕಿಳಿಸಿದ್ದು ವಿಶೇಷವಾಗಿ ಉಲ್ಲೇಖನೀಯ. ಇವನ "ಪಶ್ಚಿಮ ರಂಗ ಮಾಹಾತ್ಮ್ಯ"ವೂ ಬ್ರಹ್ಮಾಂಡ ಪುರಾಣವನ್ನು ಆಕರವಾಗಿ ಉಳ್ಳದ್ದು. "ಕಮಲಾಚಲ ಮಾಹಾತ್ಮ್ಯ"ಕ್ಕೆ ಭವಿಷ್ಯೋತ್ತರ ಪುರಾಣವೂ "ಹಸ್ತಿಗಿರಿ ಮಾಹಾತ್ಮ್ಯ"ಕ್ಕೆ ಬ್ರಹ್ಮಾಂಡ ಪುರಾಣವೂ "ರುಕ್ಮಾಂಗದ ಚರಿತೆ" ಗೆ ನಾರದೀಯ ಪುರಾಣವೂ ಆಕರಗಳು. ಯಾದವಗಿರಿ ಮಾಹಾತ್ಮ್ಯದ ಸಾಂಗತ್ಯಕ್ಕೆ ನಾರದೀಯ ಪುರಾಣವೂ ಅದೇ ಪ್ರಕಾರ ಸಂಸ್ಕೃತದಲ್ಲಿರುವ ಆಕರ. 1677ರ ತಿಮ್ಮ ಕವಿಯೂ ಇದೇ ಮಾರ್ಗವನ್ನು ಅನುಸರಿಸಿದನು; ಹಾಗೇ ಮಲ್ಲಿಕಾರ್ಜುನ ಕವಿಯೂ ಸಂಸ್ಕೃತ ಪುರಾಣಗಳಿಂದ ಆಯ್ದು "ಶ್ರೀ ರಂಗ ಮಾಹಾತ್ಮ್ಯ" ವನ್ನು ಕನ್ನಡದಲ್ಲಿ ಬರೆದನು.

ಕ್ರಿ.ಶ.1680ರಲ್ಲಿದ್ದ ಸಿಂಗರಾರ್ಯನೆಂಬ ಕನ್ನಡ ಕವಿ "ಮಿತ್ರವಿಂದಾ ಗೋವಿಂದ" ಎಂಬ ಹೆಸರಿನಲ್ಲಿ ಸಂಸ್ಕೃತದ "ರತ್ನಾವಲೀ" ನಾಟಕವನ್ನು ಅನುಸರಿಸಿ ಬರೆದದ್ದು ಐತಿಹಾಸಿಕ ಪ್ರಾಮುಖ್ಯವನ್ನು ಪಡೆಯಿತು. ಇದನ್ನು ಕನ್ನಡದ ಮೊದಲ ನಾಟಕ ಎಂದರು ನರಸಿಂಹಾಚಾರ್ಯರು.

ಕನ್ನಡದ ಅತ್ಯಂತ ಜನಪ್ರಿಯ ಕವಿಗಳಲ್ಲಿ ಒಬ್ಬನಾದ ಲಕ್ಷ್ಮೀಶನು ಕ್ರಿ. ಶ. 1700 ರಲ್ಲಿ "ಜೈಮಿನಿ ಭಾರತ"ವನ್ನು ಘನ ಗಂಭೀರವಾದ ವಾರ್ಧಕ ಷಟ್ಪದಿಯಲ್ಲಿ ಬರೆದನು. ಇದಕ್ಕೆ ಸಂಸ್ಕೃತದ ಜೈಮಿನಿ ಭಾರತದ ಅಶ್ವಮೇಧಿಕ ಪರ್ವವು ಆಧಾರ. "ಪ್ರಾಯಿಕವಾಗಿ ಇದನ್ನು ಓದದ ಕನ್ನಡಿಗರೇ ಇಲ್ಲ" ಎಂದು ಕ್ರಿ.ಶ. 1919 ರಲ್ಲಿ ದಿ. ಆರ್. ನರಸಿಂಹಾಚಾರ್ಯರು ತಮ್ಮ "ಕನ್ನಡ ಕವಿ ಚರಿತೆ"ಯ ಎರಡನೆಯ ಸಂಪುಟದ ಪೀಠಿಕೆಯಲ್ಲಿ ಹೇಳಿದ್ದು ಅಂದಿನ ಐತಿಹಾಸಿಕ ಸತ್ಯ. ಇಂದದು ಸುಳ್ಳಾಗದು.

ಆಮೇಲೆ 1700 ರಲ್ಲಿದ್ದ ಬಸವ ರಾಜೇಂದ್ರ ಎಂಬ ಕನ್ನಡ ಕವಿಯ 22 ಅಧ್ಯಾಯಗಳ "ಮಹಾ ವಿಭೂತಿ ಮಹಿಮೆ"ಗೆ ಸಂಸ್ಕೃತದ ಸ್ಕಾಂದ ಪುರಾಣದ ಶಂಕರ ಸಂಹಿತೆಯ ಶಿವ ರಹಸ್ಯ ಕಾಂಡಾಂತರ್ಗತವಾದ ಉಪದೇಶಕಾಂಡವು ಆಕರ. ಅದೇ ಕಾಲದಲ್ಲಿದ್ದ ಕನ್ನಡ ಕವಿ ಕೃಷ್ಣನು ಸಂಸ್ಕೃತ ಭಾಗವತದ ದಶಮಸ್ಕಂಧದ ಕಥೆಯನ್ನು ಸುಂದರವಾದ ಕನ್ನಡ ಭಾಮಿನಿಯಲ್ಲಿ ಸ್ವತಂತ್ರವಾಗಿ ಬರೆದನು. ಹಾಗೇ ವೆಂಕಟಾಚಾರ್ಯ ಶಿಷ್ಯನೆಂಬ ಕವಿಯು ಸಂಸ್ಕೃತ ಮೂಲವುಳ್ಳ "ಯಾದವಗಿರಿ ಮಾಹಾತ್ಮ್ಯ" ವೆಂಬ ಕಾವ್ಯವನ್ನು ಬರೆದನು. ಅದೇ ಕಾಲದ ಅದ್ವೈತಾನಂದ ಕವಿಯ "ಭಗವಚ್ಚರಿತ್ರೆ"ಗೆ ಸಂಸ್ಕೃತದ ಭಾಗವತಪುರಾಣವು ಆಧಾರವೆನ್ನಬಹುದು.

ಕ್ರಿ.ಶ. 1723 ರಲ್ಲಿದ್ದ ಲಕ್ಷ್ಮಕವಿಯು ವಾರ್ಧಕ ಷಟ್ಪದಿಯಲ್ಲಿ ಸಂಸ್ಕೃತ ಭಾರತದ ಕನ್ನಡಾವತಾರವನ್ನು ಬರೆದನು. ಇವನ "ರುಕ್ಮಾಂಗದ ಚರಿತೆ "ಗೆ ನಾರದೀಯ ಪುರಾಣವು ಆಕರ. ಇದರ 953 ವಾರ್ಧಕಗಳನ್ನು 17 ಸಂಧಿಗಳಿಂದ

ವರ್ಗೀಕರಿಸಲಾಗಿದೆ. ಕನ್ನಡದ ದೇವ ಕವಿಯು 1725 ರಲ್ಲಿ ಸಂಸ್ಕೃತದ ಕ್ಷೇಮೇಂದ್ರ ಕವಿಯ ಬೃಹತ್ಕಥಾಮಂಜರಿಯ 18ನೆಯ ಲಂಬಕದ ಬತ್ತೀಸ ಪುತ್ತಳೀ ಕಥಾ ಪ್ರಬಂಧವನ್ನು ಕನ್ನಡಿಸಿದನು. ಇದೊಂದು ಸವಿಗನ್ನಡ ಗದ್ಯ. 1725 ರ ಸುಮಾರಿನಲ್ಲಿದ್ದ ವೀರಶೈವ ಮಹಾದೇವ ಕವಿಯು ಬ್ರಹ್ಮೋತ್ತರ ಖಂಡವನ್ನು ಕನ್ನಡ ಭಾಮಿನಿಯಲ್ಲಿ ಬರೆದನು. 1740 ರಲ್ಲಿ ಕಳಲೆ ನಂಜರಾಜ ಕವಿಯು ಭವಿಷ್ಯೋತ್ತರ ಪುರಾಣೋಕ್ತವಾದ ಹರದತ್ತಾಚಾರ್ಯ ಮಾಹಾತ್ಮ್ಯವನ್ನು ಕನ್ನಡಿಸಿದನು; ಸ್ಕಾಂದ ಪುರಾಣದಲ್ಲಿಯ 90 ನೆಯ ಅಧ್ಯಾಯಂದ ಭಾಷಾಂತರವನ್ನು 52 ಅಧ್ಯಾಯಂಗಳಲ್ಲಿ ಮಾಡಿ ಅದಕ್ಕೆ "ಭಕ್ತವಿಲಾಸ ದರ್ಪಣ" ವೆಂದು ಕರೆದದ್ದೂ ಅಲ್ಲದೆ, ಪದ್ಮ ಪುರಾಣಾಂತರ್ಗತವಾದ ಶಿವಗೀತೆಯನ್ನು 12 ಅಧ್ಯಾಯಂಗಳಲ್ಲಿ ಭಾಷಾಂತರಿಸಿದನು.

ಸಂಸ್ಕೃತದ ರಾಮಾಯಣ ಮಹಾಭಾರತಗಳನ್ನು ಬಿಟ್ಟರೆ ಅದರಲ್ಲಿ ಪ್ರಸಿದ್ಧವಾಗಿದ್ದ ಅಷ್ಟಾದಶ ಪುರಾಣಗಳಲ್ಲಿ ಬಂದ ಹಲವಾರು ಕಥೆಗಳನ್ನು ಭಾವಾಂತರವಾಗಿಯೋ ಭಾಷಾಂತರವಾಗಿಯೋ ಕನ್ನಡಿಸಿದ ಕರ್ಣಾಟಕಸ್ಥ ಕವಿಗಳ ಈ ವರೆಗಿನ ಪಂಕ್ತಿಗೆ "ಕಮಲಾಚಲ ಮಾಹಾತ್ಮ್ಯ" ವನ್ನು ಭವಿಷ್ಯೋತ್ತರ ಪುರಾಣದಿಂದ ಆಯ್ದು ಕನ್ನಡಿಸಿದ ಶ್ರೇಯಸ್ಸು 1740ರ ಸುಮಾರಿನಲ್ಲಿದ್ದ ಮೈಸೂರರಸರ ಬಳಗದ ಗೋಪಾಲರಾಜ ಕವಿಗೆ ಸಲ್ಲುತ್ತದೆ. 1750 ರಲ್ಲಿ ಚಂದ್ರಶೇಖರ ಮತ್ತು ಪದ್ಮನಾಭ ಎಂಬಿಬ್ಬರು ಕಬ್ಬಿಗರು ಸೇರಿ 37 ಸಂಧಿಗಳಿಂದ ಒಟ್ಟು 5268 ಪದ್ಯಗಳನ್ನುಳ್ಳ ಜೈನ ಸಾಂಪ್ರದಾಯಿಕ ಸಾಂಗತ್ಯದಲ್ಲಿ "ರಾಮಚಂದ್ರ ಚರಿತ್ರ" ಎಂಬ ರಾಮಾಯಣವನ್ನು ರಚಿಸಿದರು. ಆನುಪಮಿಂವ ರಾಮಾಯಣದ ಆಕರ್ಷಕತೆ ಕರ್ಣಾಟಕದಲ್ಲಿ ಅತಿಹೆಚ್ಚು ಎಂದರೆ ತಪ್ಪಾಗದು. ಅದೇ ಸಂಮಾರಿಗೆ, ಬಬ್ಬೂರು ರಂಗಕವಿಯು ಹಿಂದೆ ಹೇಳಿದ ವಾಲ್ಮೀಕಿ ರಾಮಾಯಣ, ಕೌಶಿಕ ರಾಮಾಯಣ ಎಂಬವುಗಳಿಂದ ಭಿನ್ನವಾದ "ಪರಶುರಾಮ ರಾಮಾಯಣ"ವನ್ನು 43 ಸಂಧಿಗಳಲ್ಲಿ 1543 ಪದ್ಯಗಳುಳ್ಳ ವಾರ್ಧಕದಲ್ಲಿ ಬರೆದನು. ಆದರಿದು ಪರಶುರಾಮ ಹೇಳಿದ ಅಥವಾ ಹೇಳಿಸಿದ ರಾಮಾಯಣವಲ್ಲ; ಇದಕ್ಕೆ "ಪರಶು ರಾಮಾಯಣ" ಎಂದು ಕರೆಯುವುದು ಉತ್ತಮ. ಇದಾದರೋ ಸಂಸ್ಕೃತ ಪುರಾಣವನ್ನೇ ವಸ್ತುವಿಗೆ ಆಕರವನ್ನಾಗಿ ತೆಗೆದುಕೊಂಡಿದೆ. ಹಾಗೇ ಭಾರತಕ್ಕೆ ವಸ್ತುಋಣಿಯಾಗಿ ಕೋನಯ್ಯ ಕವಿಯು "ಕೃಷ್ಣಾರ್ಜುನ ಸಂಗರ" ಎಂಬ ಭಾಮಿನೀ ಕಾವ್ಯವನ್ನು, 1721 ಪದ್ಯಗಳನ್ನುಳ್ಳ 27 ಸಂಧಿಗಳಲ್ಲಿ ರಚಿಸಿದನು. ಕವಯಿತ್ರಿ ಹೆಳವನ ಕಟ್ಟೆ ಗಿರಿಯಮ್ಮನು ಸಂಸ್ಕೃತದಲ್ಲಿದ್ದ ವಸ್ತುಪಾತ್ರಗಳನ್ನಾಧರಿಸಿ "ಚಂದ್ರಹಾಸನ ಕಥೆ" "ಸೀತಾ ಕಲ್ಯಾಣ" "ಉದ್ದಾಲಕನ ಕಥೆ" ಗಳೆಂಬ ಹಾಡುಗಬ್ಬಗಳನ್ನು ಬರೆದಳು. ಇದೇ ಪ್ರಕಾರ ಸಂಸ್ಕೃತ ರಾಮಾಯಣ ಗಂಗೆಯು ತಿಮ್ಮಾಮಾತ್ಯನ "ರಾಮಾಭ್ಯುದಯ ಕಥಾಕುಸುಮ ಮಂಜರಿ" ಎಂಬ ಕನ್ನಡ ರಾಮಾಯಣವನ್ನು ಕವಲು ನದಿಯನ್ನಾಗಿ ಹರಿಯಿಸಿತು. ಇದರ ಛಂದಸ್ಸು ಭಾಮಿನಿ.

19ನೆಯ ಶತಮಾನದ ಪ್ರಸಿದ್ಧ ಕವಿ ಮುದ್ದಣನು ರಚಿಸಿದ್ದು "ಶ್ರೀರಾಮ ಪಟ್ಟಾಭಿಷೇಕ" ಹಾಗೂ "ರಾಮಾಶ್ವಮೇಧ". ಇವುಗಳ ಆಕರವು ಪುನಃ ಸಂಸ್ಕೃತದಲ್ಲಿರುವ ವಾಲ್ಮೀಕಿ ರಾಮಾಯಣವು. "ರಾಮಾಶ್ವಮೇಧ"ಕ್ಕೆ "ಶೇಷರಾಮಾಯಣ" ಎಂಬ ಹೆಸರೂ ಉಂಟಂತೆ. ಮೊದಲನೆಯದು ವಾರ್ಧಕ ಕಾವ್ಯ, ಎರಡನೆಯದಂ ಮಹಾ ಗದ್ಯಕಾವ್ಯ. ಸಂಸ್ಕೃತದಲ್ಲಿ ಸುಪ್ರಸಿದ್ಧನಾಗಿದ್ದ ಜಯದೇವ ಕವಿಯ ಪಾಂಚಾಲೀ ಶೈಲಿಯ "ಗೀತ ಗೋವಿಂದ" ಕಾವ್ಯವನ್ನು ವೆಂಕಟ ಕವಿಯು ಕನ್ನಡಕ್ಕೆ ಭಾಷಾಂತರಿಸಿ "ಕರ್ಣಾಟಕಾಷ್ಟಪದಿ" ಎಂಬ ಹೆಸರಿನಿಂದ ಪ್ರಕಟಿಸಿದನು. ವೃತ್ತಗಳನ್ನು ಷಟ್‌ಪದಿಗಳಿಗೂ ಗೀತಗಳನ್ನು ಹಾಡುಗಳಿಗೂ ಇಳಿಸಿದ್ದು ಈ ಗ್ರಂಥಕರ್ತನ ಚಾತುರ್ಯ. ರಾಮಸೂರಿಯೆಂಬ ಕನ್ನಡ ಕವಿ ಅದೇ ಯುಗದಲ್ಲಿ (1750) ಭಾರತವನ್ನಾಧರಿಸಿ "ಇಂದ್ರಕೀಲ ಚೌಪದ" ಎಂಬ ಚಿಕ್ಕ ಕಾವ್ಯವನ್ನು ಚೊಕ್ಕಟವಾಗಿ ರಚಿಸಿದನು. ಚೌಪದವೆಂಬ ಚತುಷ್ಪಾದ ಛಂದಸ್ಸು ಇಂದು ಚುಟುಕುಗಳಿಗೆ ಜನಪ್ರಿಯ ಕವಚವಾಗಿದೆ. ಉದಾ: ದಿನಕರ ಚುಟುಕುಗಳು.

1081 ಸೊಲ್ಲುಗಳಿರುವ ಕನ್ನಡ "ಮಾರ್ಕಂಡೇಯ ಪುರಾಣ"ವು ಛಂದೋಬದ್ಧವಾದ (ಅರ್ಥಾತ್ ಭಾಮಿನೀ ಷಟ್‌ಪದಿಯಲ್ಲಿರುವ) ಜ್ಯೋತಿಃಶಾಸ್ತ್ರ. ಶಾಸ್ತ್ರ ಪ್ರಕರಣದಲ್ಲಿ ಮುಂದೆ ಇದರ ಉಲ್ಲೇಖ ಬರುತ್ತದೆ. ಪುರಾಣಗಳೆಲ್ಲ ಕಾವ್ಯಗಳೇನೋ ಹೌದು, ಆದರೆ ಅವುಗಳ ಉದರೋದಧಿಯಲ್ಲಿ ಶಾಸ್ತ್ರಗಳೂ ಅಡಕವಾಗಿರುವುದನ್ನು ಮರೆಯುವಂತಿಲ್ಲ. ಹರಿದಾಸ ಕವಿಯು ಭಾಮಿನೀ ಷಟ್ಪದಿಯಲ್ಲಿ ಬರೆದ "ಮೂಲಬಲ ರಾಮಾಯಣ" ಎಂಬ ಕಾವ್ಯದಲ್ಲಿ ಶ್ರೀ ರಾಮನು ರಾವಣ ಕುಂಭಕರ್ಣರ ಮೂಲಬಲವನ್ನು ಸಂಹರಿಸಿದ ಕಥೆ ಬಂದಿದೆ. ಅವನ "ಸಂಕ್ಷೇಪ ಭಾಗವತ"ದಲ್ಲಿಯ 53 ಭಾಮಿನೀ ಷಟ್‌ಪದಿಯಲ್ಲಿ ಆತ್ಮಾರಾಮ ಭಾಗವತದ ಸಂಕ್ಷಿಪ್ತ ರೂಪವಿದೆ.

ಸಂಸ್ಕೃತ ಭಗವದ್ಗೀತೆಯನ್ನೇ ಆರಿಸಿಕೊಂಡು ಅದರ ಭಾವಾನುವಾದ ಮಾಡಿದ ಎರಡನೆಯ ಕವಿ ನೈರಕ್ಷರಕುಕ್ಷಿ. ಅವನ ಕಾವ್ಯನಾಮದ ನಿರಹಂಕಾರಸೂಚಕತೆಯು ಇಂದಿನ (250 ವರ್ಷಗಳ ನಂತರದ) ಅಹಂಕಾರ ಪ್ರದರ್ಶನಕ್ಕೆ ಸವಾಲಾಗಿದೆ. ಅದು ಭಾಮಿನೀ ಷಟ್‌ಪದಿಯ 629 ನುಡಿಗಳಿಂದ ಅರ್ಥಾತ್ 3774 ಸಾಲುಗಳಿಂದ ಕೂಡಿದೆ.

ಮತ್ತೆ ಕನ್ನಡ ರಾಮಾಯಣ. 1751ರಲ್ಲಿದ್ದ ವಿಟ್ಠಲ ಕವಿ ಕನ್ನಡದಲ್ಲಿ ರಾಮಾಯಣ ಬರೆದ ಸಂಗತಿ 1929ರದು. ಈಗ ಅದು ಬಾಣದ ಚಿತ್ರಲೇಶ್ವರ ಕವಿ ಬರೆದ "ಕೌಶಿಕ ರಾಮಾಯಣ" ಎಂದು ಡಾ. ಶಿವರಾಮ ಕಾರಂತರಿಂದ ಸಿದ್ಧಮಾಡಲ್ಪಟ್ಟಿದೆ. 1770ರಲ್ಲಿ ವೆಂಕಾಮಾತ್ಯನೆಂಬ ಕವಿಯು 9865 ವಾರ್ಧಕಗಳಲ್ಲಿ ರಾಮಾಯಣವನ್ನೂ ಹನೂಮದ್ವಿಲಾಸವನ್ನೂ ಸಂಸ್ಕೃತ ಮೂಲದಿಂದ ಬರೆದ ವಾರ್ಧಕ-ಭಾಮಿನೀ ಷಟ್‌ಪದಿಕಾವ್ಯಗಳು.

1777ರ ಪರಮದೇವನು ವಾರ್ಧಕ ಷಟ್‌ಪದಿಯಲ್ಲಿ "ತುರಂಗ ಭಾರತ" ವೆಂಬ ಕನ್ನಡ ಕಾವ್ಯವನ್ನು ಬರೆದನು. ಅದರಲ್ಲಿ 96 ಸಂಧಿಗಳೂ 4720 ವಾರ್ಧಕ ಪದ್ಯಗಳೂ ಇವೆ. ಮಹಾಭಾರತವೇ ಇದಕ್ಕೂ ಕಥಾಕರ: ಯಥಾಪೂರ್ವ ಕನ್ನಡ ಸ್ವಂತಿಕೆಯಿಂದ ಕೂಡಿದೆ. ಆ ಮೇಲೆ, ದೇವಚಂದ್ರ ಜೈನನು "ರಾಮಕಥಾವತಾರ" ವನ್ನು 16 ಆಶ್ವಾಸಗಳಲ್ಲಿ ಬರೆದುದು ಪಂಪರಾಮಾಯಣದ ಅನುಕರಣ ಎಂದು ಗೊತ್ತಾಗಿದೆ. 1800ಕ್ಕೆ ಬಂದರೆ, ಬ್ರಹ್ಮಣಾಂಕನೆಂಬ ಕನ್ನಡ ಕವಿಯು "ಜಿನಭಾರತ" ಬರೆದನು. ಇದರ ಭಾಮಿನಿಯ ಸಂಖ್ಯೆ 4628.

1810ರಲ್ಲಿ ಚಂದ್ರ ಸಾಗರವರ್ಣಿಯು "ಪರಶುರಾಮ ಭಾರತ" ವನ್ನೂ "ಜಿನ ರಾಮಾಯಣ"ವನ್ನೂ ಬರೆದನು. ಇವು ಜೈನಪರಂಪರಾನುಸಾರವಾಗಿರುವುದು ಸ್ಪಷ್ಟ. ಪರಶುರಾಮ ಭಾರತಕ್ಕೆ ಪರಶುರಾಮನ ಕಥೆಯೇ ಆಧಾರ. ಇವು ಸಾಮಾನ್ಯ ಕಾವ್ಯಗಳು. ಸಂಸ್ಕೃತ ಮೂಲಗಳಲ್ಲಿರುವ ಗ್ರಂಥಗಳಲ್ಲಿ ಬರುವ ವಸ್ತು-ಪಾತ್ರ ಸನ್ನಿವೇಶ ಗಳನ್ನು ಜೈನರು ಬಹಳವಾಗಿ ಬದಲಾಯಿಸಿಕೊಂಡಿರುತ್ತಾರೆ. 1794-1868ರ ನಡುವೆ ಇದ್ದ ಮುಮ್ಮಡಿ ಕೃಷ್ಣರಾಜನು ಅಧ್ಯಾತ್ಮ ರಾಮಾಯಣ, ಉತ್ತರರಾಮ-ಚರಿತೆ, ಕಾದಂಬರಿ, ಕಾಶೀಖಂಡ, ಕೃಷ್ಣ ಕಥಾ ರತ್ನಾಕರ, ಕೃಷ್ಣಕಥಾ ಸಾರಸಂಗ್ರಹ ದಶಕುಮಾರಕಥಾಕಲಾನಿಧಿ, ನಳೋಪಾಖ್ಯಾನ, ಪಂಚತಂತ್ರ, ಭಗವದ್ಗೀತೆ, ಭಾಗವತ, ಭಾರತ, ಪಾಳ ವಿಕಾಗ್ನಿಮಿತ್ರೀಯ, ರತ್ನಾವಳಿ ಅಥವಾ ವತ್ಸರಾಜನ ಕಥೆ ರಾಮಕಥಾ ಕಲ್ಪವೃಕ್ಷ, ವಿಕ್ರಮೋರ್ವಶೀಯ, ಶಂಕರ ಸಂಹಿತೆ, ಶಕುಂತಲೋ ಪಾಖ್ಯಾನ, ಹರಿವಂಶ, ಹರಿಶ್ಚಂದ್ರೋಪಾಖ್ಯಾನ ಮುಂತಾದ 49 ಕನ್ನಡ ಕೃತಿ-ಗಳನ್ನು ಸಂಸ್ಕೃತ ಪರಂಪರೆಗೆ ಅನುಗುಣವಾಗಿ ಬರೆದಿದ್ದಾನೆ. ಈತನ "ಭಾರತ"ದ ಆರಂಭದ ಗದ್ಯದ ಮಾದರಿ ಹೀಗಿದೆ:

"ಶ್ರೀಮತ್ ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಲ ದೇಶಾ ವತಂಸ ಕರ್ಣಾಟಕ ಜನಪದಾಧಿಷ್ಠಾನ ಭೂತ ಶ್ರೀ ಮಹೀಶೂರ ಮಹಾಸಂಸ್ಥಾನ ಮಧ್ಯ ದೇದೀಪ್ಯಮಾನ ಅವಿಕಲ ಕಲಾನಿಧಿ ಕುಲಕ್ರಮಾಗತ ರಾಜಕ್ಷಿತಿಪಾಲ ಪ್ರಮುಖ ನಿಖಿಲ ರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂಡಲಾನುಭೂತ ದಿವ್ಯ ರತ್ನಸಿಂಹಾಸನಾರೂಢ ಶ್ರೀ ಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢ ಪ್ರತಾಪ ಅಪ್ರತಿಮ ವೀರನರಪತಿ ಬಿರುದೆಂತೆಂಬರಗಂಡ ಲೋಕೈಕವೀರ ಯದುಕುಲ ಪಯಃಪಾರಾವಾರ ಕಳಾನಿಧಿ ಶಂಖಚಕ್ರಾಂಕಿತ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ ಗರುಡ ಕಂಠೀರವಾದ್ಯನೇಕ ಬಿರುದಾಂಕಿತ ಶ್ರೀ ಚಾಮರಾಜ ಮಹೀಪಾಲ ಧರ್ಮಪತ್ನೀ ಕೆಂಪನಂಜಾಂಬಾ ಗರ್ಭ ಸುಧಾಂಬುಧಿ ರಾಕಾ ಸುಧಾಕರಾಯಮಾಣ ಶ್ರೀ ಚಾಮುಂಡಿಕಾಂಬಾ ವರ ಪ್ರಸಾದೋತ್ಪನ್ನರಾದ ಆತ್ರೇಯಸಗೋತ್ರ ಆಶ್ವಲಾಯನ ಸೂತ್ರ ಋಕ್ ಶಾಖಾನು

ವರ್ತಿಗಳಾದ ಶ್ರೀ ಮನ್ಮಹೀಶೂರ ಪುರವರಾಧೀಶ್ವರ ಶ್ರೀ ಕೃಷ್ಣರಾಜ ಒಡೆಯರವರು ಲೋಕಪ್ರಸಿದ್ಧವಾದ ಶ್ರೀ ಮನ್ಮಹಾಭಾರತವನ್ನು ಬುಧಜನ ಸಂಮತಿಯಿಂದ ಕರ್ಣಾಟಕಭಾಷಾವಚನ ರಚನೆಯುಳ್ಳ "ಶ್ರೀಮತ್ ಕೃಷ್ಣರಾಜ ವಾಣೀವಿಲಾಸ" ವೆಂಬ ಅಂಕಿತದಿಂದ ವಿಸ್ತರಿಸುವುದರಲ್ಲಿ ಆದಿಪರ್ವವನ್ನು ವಿವರಿಸುವರದೆಂತೆನೆ"

1823ರಲ್ಲಿ ಕೆಂಪುನಾರಾಯಣನೆಂಬ ಕನ್ನಡ ಕವಿಯು "ಮುದ್ರಾರಾಕ್ಷಸ" ವೆಂಬ ಸಂಸ್ಕೃತನಾಟಕದ ಕನ್ನಡ ಭಾಷಾಂತರವನ್ನು ಮಾಡಿದನು. ಇದು ಒಳ್ಳೆಯ ಕನ್ನಡ ಗದ್ಯವೆಂದು ಹೇಳಲ್ಪಡುತ್ತದೆ. 1830ರಲ್ಲಿದ್ದ ಗುರುಕೃಷ್ಣ ಕವಿಯು "ಕೃಷ್ಣ ಬಾಲಲೀಲೆ" ಎಂಬ ಕನ್ನಡ ಚೌಪದಿ ಕಾವ್ಯಕ್ಕೆ ಸಂಸ್ಕೃತ ಭಾಗವತ ಪುರಾಣವು ಆಧಾರ. ಮೈಸೂರಿನ "ಅಳಿಯ ಲಿಂಗರಾಜ" ಎಂಬ ಕವಿಯ (1823-1874) 47 ಕನ್ನಡಕೃತಿಗಳೆಲ್ಲವುಗಳೂ ಸಂಸ್ಕೃತ ಮೂಲವನ್ನುಳ್ಳವುಗಳು.

1857ರಲ್ಲಿದ್ದ ವೆಂಕಟರಮಣಯ್ಯನೆಂಬ ಕನ್ನಡ ಕವಿಯು ಸಂಸ್ಕೃತ-ಕನ್ನಡ ಗಳಲ್ಲದೆ" ಸಂಸ್ಕೃತಾಂಧ್ರಕರ್ಣಾಟಕ" ಭಾಷೆಗಳಲ್ಲಿ ಸರಳ ಕವಿಸಾರ್ವಭೌಮನೆನ್ನಿಸಿದ್ದು ಸ್ಮರಣೀಯ. 1857ರಲ್ಲಿ ಅವನು 1141 ಪದ್ಯಗಳ "ಗಯೋಪಾಖ್ಯಾನ" ಎಂಬ ಚಂಪೂಮಹಾಕಾವ್ಯವನ್ನು ರಚಿಸಿದ್ದು ಉಲ್ಲೇಖನೀಯ. 1860ರಲ್ಲಿ ನ್ಯಾಪತಿ ಲಕ್ಷ್ಮೀ ನರಸಿಂಹನು ರಾಮ"ಕಥಾರಂಜನ"ವನ್ನು ಕನ್ನಡದಲ್ಲಿ ಬರೆದನು. 1867ರಲ್ಲಿ ಈ ಗ್ರಂಥದ ಸುಂದರಕಾಂಡವು ಅಚ್ಚಾಗಿದೆ.

ಕ್ರಿ. ಶ. 1870ರಲ್ಲಿ ಗಂಗಾಧರ ಮಡಿವಾಳೇಶ್ವರನು ಕಾದಂಬರೀ ಕಥೆಯನ್ನು ಬರೆದನು. ಸಂಸ್ಕೃತದ ಬಾಣಭಟ್ಟನ ಮಹಾಕಾವ್ಯವಾದ ಕಾದಂಬರಿ ಇದಕ್ಕೆ ಮೂಲ. ಈ ಕವಿ ಹೇಳಿದ ಒಂದು ಮಾತು ನಿತ್ಯ ಮನನೀಯ :

ಲಕ್ಷಣದಿ ಪದವನುಸಿರ್ದೊಡೆ
ರಕ್ಷಿಪುದಾಕೃತಿಯು ಪೇಳ್ದ ಕವಿಯುಂ ಸತತಂ।
ಲಕ್ಷಣದಪ್ಪಿದೊಡಾಕೃತಿ
ಭಿಕ್ಷವ ಬೇಡಿಪುದು ಜಗದೊಳಿದು ಸಿದ್ಧಾಂತಂ॥

ಚಿರಸ್ಥಾಯಿಯಾಗದ ಬರೆಹಗಳ ಕರ್ತಾರರ ಗತಿಗಿದು ಒಂದೇ ತಲೆಮಾರಿನಲ್ಲಲ್ಲದಿದ್ದರೂ ಮುಂದೆ ಅಥವಾ ಪುನರ್ಜನ್ಮದಲ್ಲಿ ಒದಗತಕ್ಕದ್ದು ನಾಗರಿಕತೆಯಲ್ಲಿ ಸಿದ್ಧ.

ವೆಂಕಟವರದಾಚಾರ್ಯನು ಮಹಾಭಾರತದ ಆದಿಪರ್ವದ ಆಧಾರದಿಂದ "ತಪತೀಪರಿಣಯ" ಎಂಬ ನಾಟಕವನ್ನು 1875ರಲ್ಲಿ ಬರೆದನು. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿದ್ದ ಬಸವಪ್ಪಶಾಸ್ತ್ರಿಯು ಸಂಸ್ಕೃತ ಮೂಲಗಳಿಂದ ಸಾವಿತ್ರೀ ಚರಿತ್ರೆ, ಭರ್ತೃಹರಿ ಸುಭಾಷಿತ, ನೀತಿಸಾರ ಸಂಗ್ರಹ, ದಮಯಂತೀ ಸ್ವಯಂವರ, ಶಾಕುಂತಲ, ಚಂಡಕೌಶಿಕ, ಉತ್ತರರಾಮಚರಿತ ಮುಂತಾದ ಕನ್ನಡ ಕೃತಿ

ಗಳನ್ನು ರಚಿಸಿ ಪ್ರಸಿದ್ಧನಾದನು. ಎಸ್.ಜಿ. ನರಸಿಂಹಾಚಾರ್ಯನು "ಅಜನೃಪಚರಿತೆ" ಮತ್ತು "ದಿಲೀಪಚರಿತೆ"ಗಳನ್ನು "ರಘುವಂಶ" ಮಹಾಕಾವ್ಯದಿಂದ ಕನ್ನಡಕ್ಕೆ ಪರಿವರ್ತಿಸಿದನು. ಇವು ಷಟ್ಪದಿಗಳಲ್ಲಿವೆ. ನಂಜನಗೂಡಿನ ಅನಂತನಾರಾಯಣ ಶಾಸ್ತ್ರಿಯು ಸಂಸ್ಕೃತ ಮೂಲದಿಂದ ನಾಗಾನಂದ ನಾಟಕವನ್ನೂ ಕರ್ಪೂರ ಮಂಜರೀ ಪರಿಣಯ ನಾಟಕವನ್ನೂ ಸತ್ಯವತೀ ಚರಿತೆಯನ್ನೂ ಕನ್ನಡದಲ್ಲಿ ಬರೆದನು. ಹಾಗೇ ಅಂಬಳೆ ಲಕ್ಷ್ಮೀ ನರಸಿಂಹ ಶಾಸ್ತ್ರಿಯು "ವಿದುರನೀತಿ" ಯನ್ನು ರಚಿಸಿದನು. ಸಿ. ಆರ್. ಚೆಲ್ಲಮ್ಮನು ರುಕ್ಮಿಣೀ ಪರಿಣಯ, ಪಾರಿಜಾತಾಪಹರಣ, ದ್ವಾದಶ ಮಂಜರೀ ಸ್ತೋತ್ರ ಮುಂತಾದ ಕನ್ನಡ ಕೃತಿಗಳನ್ನು ಸಂಸ್ಕೃತ ಪರಂಪರೆಯನ್ನಾಧರಿಸಿ ಬರೆದಳು. ಗೊರೂರು ನರಸಿಂಹಾಚಾರ್ಯನು ಕನ್ನಡ ವಿಶ್ವಗುಣಾದರ್ಶ, ಕನ್ನಡ ಭರ್ತೃಹರಿ ಶತಕ, ಕನ್ನಡ ಕೃಷ್ಣ ಚರಿತಾಮೃತ ಮುಂತಾದ ಕಾವ್ಯಗಳನ್ನು ಅದೇ ಪ್ರಕಾರ ರಚಿಸಿದನು.ನಂಜನಗೂಡು ಸುಬ್ಬಾಶಾಸ್ತ್ರಿಯೂ ಹಾಗೇ ಸೀತಾಚರಿತ್ರೆ, ಉತ್ತರ ಸೀತಾ ಚರಿತ್ರೆ ಎಂಬ ಕಾವ್ಯಗಳನ್ನು ಷಟ್ಪದಿಯಲ್ಲಿ ಬರೆದನು.

ಮುಳಬಾಗಿಲಿನ ಧೊಂಡೋ ನರಸಿಂಹನು ಸಂಸ್ಕೃತ ಮೂಲಗಳಿಂದ ಕಥಾವಸ್ತುವನ್ನಾಯ್ದುಕೊಂಡು ಹಿತೋಪದೇಶ ಉತ್ತರ ರಾಮಚರಿತ ನಾಟಕ, ಮಾಳವಿಕಾಗ್ನಿಮಿತ್ರ, ಮೃಚ್ಛಕಟಿಕೆ, ವೇಣೀಸಂಹಾರಗಳನ್ನು ಕನ್ನಡಿಸಿದನು. ಗರಣಿ ಕೃಷ್ಣಾಚಾರ್ಯನು ಮೃಚ್ಛಕಟಿಕೆ, ನಾಗಾನಂದ ನಾಟಕ ಕಥೆ, ನೀತಿಶತಕಗಳನ್ನು ಕನ್ನಡದಲ್ಲಿ ರಚಿಸಿದನು. ಜಯರಾಮಾಚಾರ್ಯನು ಚಂಡಕೌಶಿಕ ನಾಟಕ, ಮದಾಲಸಾ ಪರಿಣಯ, ವೇಣೀಸಂಹಾರ ನಾಟಕಗಳನ್ನು ಕನ್ನಡಿಸಿದನು.

ಈ ಮಹಾಶಯರಲ್ಲದೆ ಇತರ ನೂರಾರು ಕವಿಗಳು ಸಂಸ್ಕೃತ ಮೂಲಗಳನ್ನಾಧರಿಸಿ ಕಥೆ, ಹಾಡು, ಕೀರ್ತನ, ಯಕ್ಷಗಾನ ಪ್ರಸಂಗ ಮುಂತಾದವುಗಳನು ಇಂದಿನವರೆಗೂ ಕನ್ನಡದಲ್ಲಿ ಬರೆಯುತ್ತ ಬಂದಿದ್ದಾರೆ. ಇದರಿಂದ ಗೊತ್ತಾಗುವದಿಷ್ಟು:

1. ಸಂಸ್ಕೃತವು ಭಾರತೀಯೇತರರ ಅಥವಾ ಕನ್ನಡೇತರರ ಭಾಷೆಯಲ್ಲ.
2. ಸಂಸ್ಕೃತ ಕವಿಗಳಲ್ಲನೇಕರ ಮಾತೃ ಭಾಷೆಯು ಸಂಸ್ಕೃತ ಭಾಷೆಯಾಗಿರಲಿಲ್ಲ.
3, ಕನ್ನಡಿಗರು ಸಂಸ್ಕೃತ-ಕನ್ನಡಗಳೆರಡರಲ್ಲೂ ಉತ್ತಮ ಕೃತಿಗಳನು ರಚಿಸಿದ್ದುಂಟು.
4. ಸಂಸ್ಕೃತ-ಕನ್ನಡ ಕಾವ್ಯರಚನಾ ಪರಂಪರೆಗಳಲ್ಲಿ ಸಾಧಾರಣಾಂಶಗಳು ನೂರಕ್ಕೆ ತೊಂಬತ್ತರಷ್ಟು.

5. "ಇದು ಕನ್ನಡಕ್ಕೆ ಸಂಸ್ಕೃತದ ಕೊಡುಗೆ" ಎಂದು ಹೇಳುವಾಗ ಯಾರೂ ಸಂಸ್ಕೃತ ಕೃತಿಕಾರರೆಲ್ಲರೂ ಕನ್ನಡೇತರರು ಅಥವಾ ಭಾರತೀಯೇತರರು ಎಂದು ತಿಳಿದುಕೊಳ್ಳಲು ಆಧಾರವಿಲ್ಲ.

6. ಇಂಗ್ಲೀಷ್ ಕಾವ್ಯದ ಪರಂಪರೆಗೂ ಭಾರತೀಯ ಕಾವ್ಯ ಪರಂಪರೆಗೂ ಇರುವಷ್ಟು ವ್ಯತ್ಯಾಸವು ಸಂಸ್ಕೃತ ಕಾವ್ಯ ಪರಂಪರೆಗೂ ಕನ್ನಡ ಕಾವ್ಯ ಪರಂಪರೆಗೂ ನಡುವೆ ಇರುವುದಿಲ್ಲ.

7. ಕನ್ನಡ-ಸಂಸ್ಕೃತ ಸಂಸ್ಕೃತಿಗಳು ಎರಡಾಗಿ ನಡೆದು ಬಂದಿಲ್ಲ; ಒಂದಾಗಿಯೇ ನಡೆದು ಬಂದಿವೆ.

8. ವ್ಯಕ್ತಿ ಪ್ರತಿಭಾ ವೈಶಿಷ್ಟ್ಯವು ಸಂಸ್ಕೃತದಲ್ಲಿರುವಂತೆಯೇ ಕನ್ನಡ ಸಾಹಿತ್ಯದಲ್ಲಿಯೂ ಉದಾಹೃತವಾಗಿದೆ.

9. ಸಂಸ್ಕೃತ-ಕನ್ನಡ ಭಾಷೆಗಳ ಮತ್ತು ಆ ಭಾಷೆಗಳಲ್ಲಿ ಬರೆದ ಸಾಹಿತ್ಯ ಕೃತಿಗಳ ಸಂಬಂಧವು ಆಂಗ್ಲ ಪ್ರಭಾವವು ಅನೈಸರ್ಗಿಕವಾಗಿ ಬೀಸುವ ಇತ್ತೀಚಿನ ಕಾಲದವರೆಗೆ ಸೌಹಾರ್ದದ ಸೌಂದರ್ಯದಿಂದ ಕೂಡಿತ್ತು.

10. ಈ ಮಾತಿಗೆ ಪದ, ವಾಕ್ಯ, ಪ್ರಮಾಣ, ಲಕ್ಷಣ, ಛಂದೋವ್ಯಾಕರಣಾದಿ ಶಾಸ್ತ್ರಗಳ ಭಾಷಾಂತರ-ಭಾಷಾಂತರಗಳ ನಿದರ್ಶನಗಳನ್ನು ಮುಂದೆ ನೋಡಬಹುದು. ಮುನ್ನಿನ ಮಾತಿನಲ್ಲಿ ಹೇಳುವುದಾದರೆ, ಕವರ್ಣಿಸೆ ಸರಸೊಳ್ ಜೆಂಬವಳಿಯುಂ ಕೋಡಂತೆ ಇರುವುದು ಕನ್ನಡ ಶೈಲಿಯಲ್ಲಿ ಮೊದಲಿನಿಂದ ಈ ಪರಿಗೆ ನಡೆದು ಬಂದ ಹಾದಿ. ಕಾವ್ಯವೊಂದು ಕಲೆಯಾದುದರಿಂದ ಭಾಷಾಗತವಾದ ಪದವರಣ-ಪದಮಿಶ್ರಣಗಳು ದಂಡಿಹೇಳಿದಂತೆ, ಉದ್ವೇಗಕರವಾಗದಿದ್ದರೆ ಸರಿ. ಅದರ ಔಚಿತ್ಯಕ್ಕೆ ಮತ್ತಾವ ಒರೆಗಲ್ಲೂ ಬೇಕಾಗಿಲ್ಲ. ಕಲಾಮೌಲ್ಯಗಳ ನಿಕಷಗಳು ಭಾರತಸಾಧಾರಣ: ಅವು ವಿಶ್ವಸಾಧಾರಣವಾದರೂ ಆಶ್ಚರ್ಯಪಡಬೇಕಾಗಿಲ್ಲ— ವಿಶ್ವಮಾನ್ಯ ಕೃತಿಗಳಲ್ಲಿಯು ಹಲವು ಅಂಶಗಳಲ್ಲಿ ಇದು ಸತ್ಯ.

ಸಂಸ್ಕೃತ — ಕನ್ನಡಗಳಲ್ಲಿ ರಚಿತವಾದ ಶಾಸ್ತ್ರಗ್ರಂಥಗಳ ಐತಿಹಾಸಿಕ ಮತ್ತು ಸಾಂಸ್ಕೃತಿಕ ಸಂಬಂಧ

ಕಾವ್ಯಕಲೆಗೆ ಅತಿನಿಕಟವರ್ತಿಯಾದದ್ದು ವಿಮರ್ಶಶಾಸ್ತ್ರ. ಅದನ್ನು ನಮ್ಮ ದೇಶವು "ಅಲಂಕಾರ ಶಾಸ್ತ್ರ" ಎಂದು ಕರೆಯುತ್ತ ಬಂದಿದೆ. ವಾಙ್ಮಯದಲ್ಲಿ ಕಾವ್ಯ ಮತ್ತು ಶಾಸ್ತ್ರ ಎಂದು ನಮ್ಮ ದೇಶದವರು ಸಾವಿರಾರು ವರ್ಷಗಳಿಂದ ಪರಿಚ್ಛೇದಿಸಿ ಹೇಳಿದ್ದು ಅಪ್ರತಿಹತವಾದ ವ್ಯವಹಾರ ಸತ್ಯ. ಅದು ತರ್ಕ ಶುದ್ಧ. ವಿಮರ್ಶೆಯು ಶಾಸ್ತ್ರವಲ್ಲವೆಂಬವರೇಕೆ ಇಂದು ಸೌಂದರ್ಯವನ್ನು ಸೌಂದರ್ಯಶಾಸ್ತ್ರ (Aesthetics) ಎಂದು ನಾಚಿಕೆ ಇಲ್ಲದೆ ಒಪ್ಪಿಕೊಳ್ಳುತ್ತಾರೆ? ಆಂಗ್ಲರೂಢಿಗಳೆಲ್ಲವೂ ಭಾರತೀಯ ರೂಢಿಗಳಷ್ಟು ಈ ಕ್ಷೇತ್ರದಲ್ಲಿ ತರ್ಕಶುದ್ಧವಾಗಿಲ್ಲ ಎಂಬುದನ್ನು ಕನ್ನಡ "ಕಾವ್ಯಸೂತ್ರ" ಓದಿ ತಿಳಿದುಕೊಳ್ಳಬಹುದು.

ಅಲಂಕಾರಶಾಸ್ತ್ರವು ಸಾಧಾರಣ ಲಕ್ಷಣಗಳನ್ನೂ ನಿಯಮಗಳನ್ನೂ ಆಯಾ ದೇಶದ ಸಾಂಸ್ಕೃತಿಕ ಪರಂಪರೆಗನುಗುಣವಾಗಿ ಹೇಳಬಹುದು; ಅಥವಾ ವೈಯಕ್ತಿಕ ಕೃತಿಗಳ ವಿಮರ್ಶೆಯನ್ನೂ ಅವುಗಳನ್ನು ಅನ್ವಯಿಸಿ ಮಾಡಬಹುದು. ಈ ಉಭಯ-ಮುಖತ್ವವು ಅಲಂಕಾರ ಅಥವಾ ವಿಮರ್ಶೆಯ ವಿಶಾಲ ಲಕ್ಷಣ. ಸಂಸ್ಕೃತ ಕಾವ್ಯಗಳ ವ್ಯಾಖ್ಯಾನಗಳು ವೈಯಕ್ತಿಕ ಗ್ರಂಥಗಳ ವಿಮರ್ಶೆಗಳಾದರೆ, ಸಂಸ್ಕೃತ ಅಲಂಕಾರ ಶಾಸ್ತ್ರಗ್ರಂಥಗಳು ಕಾವ್ಯಶಾಸ್ತ್ರಗಳು, ಕಾವ್ಯಕಲಾ ತಂತ್ರ ವಿವರಣೆಗಳು. ವ್ಯವಹಾರ ಮೊದಲು, ಕಲೆ ಆಮೇಲೆ, ಶಾಸ್ತ್ರ ಅನಂತರ ಎಂಬುದು ಲೋಕದ ಎಲ್ಲ ಭಾಷೆಗಳ ಸಾಮಾನ್ಯ ಕಾಲಾನುಕ್ರಮ. ವ್ಯಾವಹಾರಿಕ ಭಾಷೆಯೊಂದು ಕಾವ್ಯಭಾಷೆಗೂ ಜನಕ, ಶಾಸ್ತ್ರಭಾಷೆಗೂ ಜನಕ. ಸಂಸ್ಕೃತ-ಕನ್ನಡ ಭಾಷೆಗಳಲ್ಲಿ ಶಬ್ದಾಕ್ಷರಶಃ ಯಮಳತ್ವ-ವಿರುವುದನ್ನು ಮಹಾಕವಿ ಪಂಪನೂ ಕುವೆಂಪುಗಳೂ ನಿದರ್ಶಿಸಿರುವುದರಿಂದ ಅದು ವಾದಗ್ರಸ್ತ ವಿಷಯವಾಗಿ ಉಳಿದಿಲ್ಲ.

ಕ್ರಿ. ಶ. 814—877ರ ನಡುವೆ ಇದ್ದ ನೃಪತುಂಗನು "ಕವಿರಾಜಮಾರ್ಗ" ಎಂಬ ಅಲಂಕಾರ ಗ್ರಂಥವನ್ನು ಮೊದಲು ಕನ್ನಡದಲ್ಲಿ ಬರೆದನು. ಇವನು ಸಂಸ್ಕೃತದಲ್ಲಿಯೂ ವಿದ್ವಾಂಸನಾಗಿದ್ದನು. ಇವನ ಹಿಂದಿನ ಸಂಸ್ಕೃತ ಆಲಂಕಾರಿಕರು ದಂಡಿ ಮತ್ತು ಭಾಮಹ. ಆದುದರಿಂದ ಇವನ ಗ್ರಂಥದ ಮೂರು ಪರಿಚ್ಛೇದಗಳಾದ (1) ದೋಷಾನುವರ್ಣನ ನಿರ್ಣಯ, (2) ಶಬ್ದಾಲಂಕಾರ, ಮತ್ತು (3) ಅರ್ಥಾಲಂಕಾರಗಳಲ್ಲಿ ದಂಡಿಯ ಅಭಿಪ್ರಾಯಗಳ ಪ್ರಭಾವ ಬಿದ್ದಿದೆ. ದಂಡಿಯು ಬರೆದದ್ದು (ಸಂಸ್ಕೃತ) "ಕಾವ್ಯಾದರ್ಶ" ಎಂಬ ಅಲಂಕಾರ ಗ್ರಂಥ. ಈತನ ದಶಕುಮಾರಚರಿತೆಯನ್ನೋದಿ-

ದವರಿಗೆ (ಗಂಜಿ ಊಟ, ಕೋಳಿ ಅಂಕ ಅಥವಾ ಕೋಳಿ ಪಡೆಗಳನ್ನು ಉಲ್ಲೇಖಿಸಿರುವುದರಿಂದ) ಇವನು ಕಡಲುಗನ್ನಡ ಸೀಮೆಯವನೆಂದು ಅಥವಾ ದಾಕ್ಷಿಣಾತ್ಯನೆಂದು ಊಹಿಸಲು ಸಾಧ್ಯವಿದೆ. ಕಾವ್ಯಾದರ್ಶವೊಂದು ಪ್ರಸಿದ್ಧ ಅಲಂಕಾರ ಲಕ್ಷಣ ಗ್ರಂಥವಾಗಿರುವುದನ್ನು ಒಪ್ಪಲು "ರಸಗಂಗಾಧರ"ವನ್ನು ಓದಿದರೆ ಕಾರಣಗಳು ಸಿಕ್ಕುವವು. ಇಷ್ಟು ಘನ ವಿದ್ವಾಂಸನಾದ ದಂಡಿಯ ವಿಮರ್ಶದೃಷ್ಟಿಕೋನವನ್ನು "ಕವಿರಾಜಮಾರ್ಗ" ದಲ್ಲಿ ನಾವು ಕಂಡರೆ ಆಶ್ಚರ್ಯವಾಗದು. ಸಂಸ್ಕೃತದ ಅಲಂಕಾರ ಪ್ರಸ್ಥಾನಕ್ಕೂ ಕನ್ನಡ ಅಲಂಕಾರ ಪ್ರಸ್ಥಾನಕ್ಕೂ ನಿಕಟ ಸಂಬಂಧವಿರುವುದು ಇದರಿಂದ ಸಹಜ. "ಇಷ್ಟಾರ್ಥವ್ಯವಚ್ಛಿನ್ನ ಪದಾವಲಿಯು ಕಾವ್ಯ" ಎಂಬ ದಂಡಿಯ ಮತವು ನೃಪತುಂಗಗ್ರಾಹ್ಯ. ಡಾ. ರೆನೆವೆಲೆಕ್ ಮತ್ತು ಆಸ್ಟಿನ್ ವಾರೆನ್ನರು ಬರೆದ "Theory of Literature ಸಾಹಿತ್ಯ ಸಿದ್ಧಾಂತ" ಎಂಬ ಆಧುನಿಕ ಗ್ರಂಥವಾದರೂ "ಕಾವ್ಯವು ವಿಶಿಷ್ಟ ಶೈಲಿಯಲ್ಲಿ ಬರೆದ ವಾಕ್ಯ ಸಮೂಹ"-ಎಂಬ ಅಭಿಪ್ರಾಯವನ್ನು ಪ್ರತಿಪಾದಿಸುತ್ತದೆ. ಗದ್ಯದ ಅಥವಾ ಪದ್ಯದ ಇಲ್ಲವೆ ಅವೆರಡರ ಮಿಶ್ರಣದ ವಾಕ್ಯಗಳಲ್ಲದೆ ಶಾಸ್ತ್ರೇತರವಾದ (ವ್ಯವಹಾರೇತರವಾದ) ಸಾಹಿತ್ಯದಲ್ಲಿ (ಕಾವ್ಯಕಲೆಯಲ್ಲಿ) ಈಗಲಾದರೂ ಇನ್ನೇನಿದೆ? ಅಂಥ ವಾಕ್ಯಗಳು ಸೌಂದರ್ಯ ಅಥವಾ ರಸ (ಈ ವಿಶಾಲಾರ್ಥಕ್ಕೆ ಪ್ರೊ. ಹಿರಿಯಣ್ಣನವರ "Art Experience" ಎಂಬ ಗ್ರಂಥವನ್ನು ಓದಿರಿ) ವನ್ನು ದ್ಯೋತಿಸುತ್ತಿದ್ದರೆ ಸರಿ-ಅಷ್ಟೆ. ಈ ಸಾರ್ವಕಾಲಿಕ ತತ್ವವು ಸಾರ್ವದೇಶಿಕವಾಗಲು ಯಾವ ಅಡ್ಡಿಯಿದೆ? ಟೀ. ಎಸ್. ಎಲಿಯಟ್ಟನ ಭಾಷೆಯಲ್ಲಿ ಈ ರಸ = Art-Emotion ಕಲಾಭಾವನೆ; ಇದು Life-Emotion ಜೀವನದ ವ್ಯಾವಹಾರಿಕ ಸತ್ಯಪ್ರಜ್ಞೆಯ ಭಾವನೆಯಿಂದ ಭಿನ್ನ. ಆದುದರಿಂದ ವ್ಯವಹಾರ-ಶಾಸ್ತ್ರಗಳ ಭಾಷಾಶೈಲಿಗಳಿಂದ ಕಾವ್ಯ (ಸಾಹಿತ್ಯ) ಭಾಷಾಶೈಲಿಯು ಭಿನ್ನ ಎಂಬುದನ್ನು ಯಾರೂ ಯಾವಾಗಲೂ ಖಂಡಿಸಲಾರರು. ಇಂಥ ಆಲೋಚನೆಗಳು ಸಂಸ್ಕೃತ - ಕನ್ನಡಗಳಿಗೆ ಸಾಧಾರಣ. "ಕವಿರಾಜಮಾರ್ಗ" ವನ್ನು ನೃಪತುಂಗನೇ ಸ್ವತಃ ಬರೆದಿರಲಿ ಅಥವಾ ಶ್ರೀವಿಜಯನೇ ಬರೆದಿರಲಿ–ಅದರ ವಿಚಾರಸರಣಿಗಳು ಸಂಸ್ಕೃತದ ಆಲಂಕಾರಿಕ ವಿಚಾರಸರಣಿಗಳ ಮುಖ್ಯಾಂಶಗಳಿಂದ ಭಿನ್ನವಾಗಿಲ್ಲ–ಎಂಬುದು ಈ ಉಭಯ ಸರಸ್ವತಿಗಳ ಸಾಮ್ಯಕ್ಕೆ ಪ್ರಮಾಣ.

ಕ್ರಿ. ಶ. 1150 ರಲ್ಲಿದ್ದ ಉದಯಾದಿತ್ಯನೆಂಬ ಕನ್ನಡ ವಿಮರ್ಶಶಾಸ್ತ್ರಜ್ಞನು "ಉದಯಾದಿತ್ಯಾಲಂಕಾರ" ಎಂಬ ಕನ್ನಡ ಅಲಂಕಾರ ಗ್ರಂಥವನ್ನು ಬರೆದನು. ಇದರಲ್ಲಿ (1) ಕಾವ್ಯಭೇದ, (2) ರೀತಿ, (3) ರಸ, (4) ಕಾವ್ಯಗುಣಗಳು ಮತ್ತು (5) ಅಲಂಕಾರಗಳ ಬಗೆಗೆ ವಿವರಣೆ – ಉದಾಹರಣೆಗಳನ್ನು ಕೊಡಲಾಗಿದೆ. ಈ ಗ್ರಂಥಕ್ಕೆ ಸಂಸ್ಕೃತದ "ಚಂದ್ರಾಲೋಕ" ಮತ್ತು "ಕಾವ್ಯಾದರ್ಶ"ಗಳು ಆಕರಗಳು. "ಸಂಸ್ಕೃತದಲ್ಲಿ ಸಲ್ಲುವುದು ಕನ್ನಡದಲ್ಲಿಯೂ ಸಲ್ಲುವುದು" ಎಂಬ ಮಾತಿಗಿದು ನಿದರ್ಶನ.

ಕ್ರಿ. ಶ. 1145 ರಲ್ಲೀ 2ನೆಯ ನಾಗವರ್ಮನು "ಕಾವ್ಯಾವಲೋಕನ" ಎಂಬ ಕನ್ನಡ ಅಲಂಕಾರ ಗ್ರಂಥವನ್ನು ಬರೆದಿದ್ದನು. ಅವನಿಗೂ ಪೂರ್ವದ ಸಂಸ್ಕೃತ ಸೂರಿಗಳೇ ಗುರುಗಳು.

ಉದಯಾದಿತ್ಯ

ಉದೆಗನೊಳಾಂಪರಾರ್ ಮುಳಿದೊಡಂತಕನಾಂತೊಡೆ ಕಂಡದಿಂಡೆಯಂ
ಕೆದರುವನೊಡ್ಡಿದಾನೆಗಳ ನಿರ್ಕಡಿ ಮಾಡುವನಾತನೊಳ್ಜಸಂ ।
ಬೆದರಿಸದಾರ ನೋಡಿಸದದಾರಸದಾರನುದಾತ್ತ ದೈನ್ಯದೊಳ್
ಪುದಿಯಿಸದಾರ ನಾಗಿಸದು ತಾಪಸವೃತ್ತಿಯನಬ್ಜಲೋಚನೇ ॥

ಇದು ವೀರರಸಕ್ಕೆ ಉದಾಹರಣೆ.

ನಾಗವರ್ಮ

ಇದು ಸೌಂದರ್ಯಗುಣ ಪ್ರಕಾಶಮಿದು ತಾನಗ್ರಾಮ್ಯತಾಧಾನಮಿಂ
ತಿದು ಭಾಸ್ವತ್ ಪರಭಾಗರಮ್ಯಮಿದು ಬಂಧಾಶೇಷವಿಚ್ಛಿತ್ತಿಗಾ ।
ಸ್ಪದಮೆಂತಿಂದು ಚಿತಪ್ರಯೋಗವಿಧಿಯಿಂ ಸಯ್ತಿರ್ಪಿನಂ ಕಿರ್ದಿಪೇ
ಳ್ವುದು ಪೂಮಾಲೆಯನಿಂಬಿನಿಂ ಸಮೆವವೋಲ್ ಸತ್ಕಾವ್ಯಮಂ ಕಬ್ಬಿಗಂ॥

ಇದು ಕಾವ್ಯಕ್ಕಿರಬೇಕಾದ ಅಂಗಗಳನ್ನು ಎತ್ತಿ ಹೇಳುತ್ತದೆ. ಈ ಎಲ್ಲ ಅಂಗಗಳನ್ನೂ ಸಂಸ್ಕೃತದ ಅಲಂಕಾರಪ್ರಸ್ಥಾನ, ರೀತಿ ಪ್ರಸ್ಥಾನ, ರಸ (ಧ್ವನಿ) ಪ್ರಸ್ಥಾನಗಳು ಆಗಲೇ ಪ್ರಸಿದ್ಧ ಮಾಡಿವೆ. ಅಣ್ಣನ ಸುಭಾಷಿತವನ್ನು ತಮ್ಮನು ಅನುಸರಿಸಿದರೆ ಹೇಗೆ ಅದು ದಾಸ್ಯವೆನ್ನಿಸದೋ ಹಾಗೇ ಸಂಸ್ಕೃತ ವಿಮರ್ಶೆಯ ತತ್ವಗಳನ್ನು ಕನ್ನಡವು ಪ್ರತಿ-ಪಾದಿಸಿದರೆ ಅದು ಎರವಲೆಂದಾಗದು. ಸಂಸ್ಕೃತ ಭಾಷಿಕರೂ ಕನ್ನಡ ಭಾಷಿಕರೂ ಭಿನ್ನಜನಾಂಗದವರಲ್ಲ, ಭಿನ್ನಕುಲದವರಲ್ಲ, ಭಿನ್ನನಾಗರಿಕತೆ–ಸಂಸ್ಕೃತಿಗಳಿಗೆ ಸೇರಿ-ದವರಲ್ಲ ಎಂಬುದೇ ಉಕ್ತ ಅಭಿಪ್ರಾಯಕ್ಕೆ ಆಧಾರ. ನಾಗವರ್ಮನೂ ದಂಡಿಯ ಅನುಯಾಯಿ.

ಈ ನಡುವೆ 1200 ರಲ್ಲಿ ಕವಿಕಾಮನು ಬರೆದ 'ಶೃಂಗಾರರತ್ನಾಕರ' ಅಥವಾ 'ರಸವಿವೇಕ' ಎಂಬ ಅಲಂಕಾರ ಗ್ರಂಥವೂ ಉಲ್ಲೇಖನೀಯ.

ಸುಮಾರು ಕ್ರಿ. ಶ. 1500 ರಲ್ಲಿ ಮಾಧವನೆಂಬ ಕನ್ನಡ ಕಾವ್ಯಶಾಸ್ತ್ರಕಾರನು "ಮಾಧವಾಲಂಕಾರ" ಎಂಬ ವಿಮರ್ಶಶಾಸ್ತ್ರ ಗ್ರಂಥವನ್ನು ರಚಿಸಿದನು. ಇದು ಮಹಾಕವಿ ದಂಡಿಯ ಸಂಸ್ಕೃತ "ಕಾವ್ಯಾದರ್ಶ"ದ ಕನ್ನಡಭಾಷಾಂತರ : 3 ಆಶ್ವಾಸಗಳಾಗಿ ವಿಭಾಗಿಸಲ್ಪಟ್ಟಿದೆ. ಉದಾಹರಣೆ :

ಮೂಲ

ಆದಿರಾಜಯಶೋಬಿಂಬಮಾದರ್ಶಂ ಪ್ರಾಪ್ಯ ವಾಙ್ಮಯಂ ।
ತೇಷಾಮಸನ್ನಿಧಾನೇಽಪಿ ನ ಸ್ವಯಂ ಪಶ್ಯ ನಶ್ಯತಿ॥

ಭಾಷಾಂತರ

ನುತಪೂರ್ವ ರಾಜಕೀರ್ತಿ । ಪ್ರತಿಬಿಂಬ ಶಬ್ದಮುಕುರದೊಳ್ ನೆಲೆಗೊಂಡಾ ।
ಕ್ಷಿತಿಪಾಲರಳಿದೊಡೇಂ ಕೇ । ಡತಿಶಯದಿಂ ಕೀರ್ತಿಬಿಂಬಮಾಕಲ್ಪಾಂತಂ ॥

ಇದಕ್ಕೂ ಮೊದಲು 1200 ರಲ್ಲಿ ಕವಿಕಾಮನು "ರಸವಿವೇಕ" ಎಂಬ ವಸ್ತು-ವನ್ನು "ಶೃಂಗಾರ ರತ್ನಾಕರ" ಎಂಬ ಕನ್ನಡ ಅಲಂಕಾರ ಶಾಸ್ತ್ರಗ್ರಂಥದಲ್ಲಿ ವಿವರಿಸಿದ್ದನು. ಇದರ ಪರಿಚ್ಛೇದಗಳು ನಾಲ್ಕು: (1) ನವರಸವ್ಯಾವರ್ಣನ, (2) ಭಾವಭೇದ ನಿರ್ಣಯ, (3) ನಾಯಕ ನಾಯಿಕಾ ವಿಕಲ್ಪವಿಸ್ತರ ಮತ್ತು (4) ಸಖಿ ಸಖೀ ಸಂಭೋಗ ವಿಪ್ರಲಂಭ ಪ್ರೇಮಾವಸ್ಥಾದಿವಿಸ್ತರ. ಕನ್ನಡದಲ್ಲಿ ರಸಪ್ರಕರಣವನ್ನು ವಿಸ್ತಾರವಾಗಿ ಪ್ರತಿಪಾದಿಸುವ ಗ್ರಂಥಗಳಲ್ಲಿ ಇದೇ ಮೊದಲನೆಯದು. ಸಂಸ್ಕೃತದಲ್ಲಿ ರಸಧ್ವನಿಯನ್ನು ಎತ್ತಿ ಹೇಳಿದ ಕಾವ್ಯಶಾಸ್ತ್ರಕಾರನೆಂದರೆ 9 ನೆಯ ಶತಮಾನದಲ್ಲಿದ್ದ ಧ್ವನಿಕಾರ ಆನಂದವರ್ಧನ. ನಾಟ್ಯಾಚಾರ್ಯನಾದ ಭರತನು ರಸದ ಬಗ್ಗೆ ಸಂಸ್ಕೃತದಲ್ಲಿ ಕ್ರಿ. ಪೂ. 2 ನೆಯ ಶತಮಾನದಲ್ಲಿ ನಾಟಕ (ರೂಪಕ) ಗಳಿಗೆ ಪರಿಸೀಮಿತವಾಗಿ ಹೇಳಿದ್ದನು. ಅವನು ಹೇಳಿದ ರಸಗಳ ಪಟ್ಟಿಯಲ್ಲಿ ಶಾಂತೇತರವಾದ 8 ರಸಗಳಿವೆ. ಆಲಂಕಾರಿಕ ಆನಂದವರ್ಧನನ ಕಾವ್ಯರಸಗಳ ಸಂಖ್ಯೆ ಶಾಂತವನ್ನು ಸೇರಿಸಿಕೊಂಡು 9.

ಕನ್ನಡ ಕವಿ ಸಾಳ್ವನು 1550 ರಲ್ಲಿ "ರಸರತ್ನಾಕರ" ಎಂಬ ಅಲಂಕಾರ ಅಥವಾ ವಿಮರ್ಶಗ್ರಂಥವನ್ನು ಬರೆದನು. ರಸಪ್ರಕ್ರಿಯೆಯು ಇದರ ಪ್ರತಿಪಾದ್ಯ-ವಸ್ತು. ಶೃಂಗಾರ ಪ್ರಪಂಚ, ರಸವಿವರಣ, ನಾಯಕ ನಾಯಿಕಾ ವಿವರಣ ಮತ್ತು ಭಾವಾಧಿಕರಣ ಎಂಬ 4 ಅಧ್ಯಾಯಗಳಿದರಲ್ಲಿವೆ. 10 ನೆಯ ಶತಮಾನದಲ್ಲಿ ಅಭಿನವ ಗುಪ್ತನೆಂಬ ಸಂಸ್ಕೃತ ವಿದ್ವಾಂಸನು ರಸವಸ್ತುವನ್ನು ವಿಸ್ತಾರವಾಗಿ ವ್ಯಾಖ್ಯಾನಿ-ಸಿದ್ದನು. ಅನಂತರ ಸಂಸ್ಕೃತದಲ್ಲಿ ರಾಜಶೇಖರನ ಕಾವ್ಯಮೀಮಾಂಸೆ, ಧನಂಜಯ ಮತ್ತು ಧನಿಕರ "ದಶರೂಪಕ", ಕುಂತಕನ "ವಕ್ರೋಕ್ತಿಜೀವಿತ", ಕ್ಷೇಮೇಂದ್ರನ "ಔಚಿತ್ಯವಿಚಾರ ಚರ್ಚೆ", ಭೋಜನ "ಸರಸ್ವತೀಕಂಠಾಭರಣ", ಮತ್ತು "ಶೃಂಗಾರ-ಪ್ರಕಾಶ," ಮಹಿಮಭಟ್ಟನ "ವ್ಯಕ್ತಿವಿವೇಕ", ಮಮ್ಮಟನ "ಕಾವ್ಯಪ್ರಕಾಶ" ವಿರುಯ್ಯಕನ "ಅಲಂಕಾರಸರ್ವಸ್ವ", ಹೇಮಚಂದ್ರನ "ಕಾವ್ಯಾನುಶಾಸನ", ಒಂದನೆಯ ಮತ್ತು ಎರಡನೆಯ ವಾಗ್ಭಟರ "ವಾಗ್ಭಟಾಲಂಕಾರ" ಹಾಗೂ "ಕಾವ್ಯಾನುಶಾಸನ", ಜಾಯೇಂದ್ರನ "ಚಂದ್ರಾಲೋಕ", ವಿದ್ಯಾನಾಥನ "ಪ್ರತಾಪರುದ್ರೀಯ," ವಿದ್ಯಾ-ಧರನ "ಏಕಾವಲಿ", ವಿಶ್ವನಾಥನ "ಸಾಹಿತ್ಯದರ್ಪಣ", ಶಾರದಾತನಯನ "ಭಾವ-ಪ್ರಕಾಶ" ಸಿಂಗಭೂಪಾಲನ "ರಸಾರ್ಣವಸುಧಾಕರ" ಮತ್ತು ಭಾನುದತ್ತನ "ರಸ-ಮಂಜರಿ" ಮತ್ತು "ರಸತರಂಗಿಣಿ" (14 ನೆಯ ಶತಮಾನ) ಮತ್ತು ಕೇಶವಮಿಶ್ರನ "ಅಲಂಕಾರಶೇಖರ" ಎಂಬ ಗ್ರಂಥಗಳು ಪ್ರಕಟವಾಗಿದ್ದವು. ಸಂಸ್ಕೃತದ ಅಖಿಲ-ಭಾರತತೆಯ ದೆಸೆಯಿಂದ ಈ ಗ್ರಂಥಗಳಲ್ಲಿ ಕೆಲವಾದರೂ ಸಾಳ್ವನ ಅಭಿಪ್ರಾಯವನ್ನು-

ರೂಪಿಸಲು ಪ್ರೇರಿಸಿರಲೇ ಬೇಕು. ಆದರೆ ಅದು ಎಷ್ಟರಮಟ್ಟಿಗೆ ಎಂಬುದು ಸಂಶೋಧನೀಯ.

"ಶಾರದಾವಿಲಾಸ" ಎಂಬುದು ಕನ್ನಡದ ಮೊದಲನೆಯ ಧ್ವನಿವಿಷಯಕವಾದ ಗ್ರಂಥ. ಇದರ ಪ್ರಥಮಾಶ್ವಾಸ ದೊರೆತಿಲ್ಲ. ಇದರ ಕರ್ತನೂ ಸಾಳ್ವನೇ. ಉಪಲಬ್ಧವಾಗಿರುವುದು "ಧ್ವನಿವ್ಯಂಗ್ಯವಿವರಣ" ಎಂಬ (ಇದರ) 2 ನೆಯ ಆಶ್ವಾಸ ಮಾತ್ರ. ಈ ಗ್ರಂಥದಲ್ಲಿ ಕಾವ್ಯಪ್ರಕಾಶಿಕೆ. ಸಾಹಿತ್ಯಸುಧಾರ್ಣವ ಎಂಬ ಪ್ರಾಚೀನ ಗ್ರಂಥಗಳನ್ನು ಉಲ್ಲೇಖಿಸಲಾಗಿದೆ. ಭಾರತದ ಆಧುನಿಕ ಭಾಷೆಗಳಲ್ಲಿರುವ ದೇಶೀಯ ಮೂಲದ ಶಾಸ್ತ್ರ ವಾಙ್ಮಯದ ಐತಿಹಾಸಿಕ ಆಕರಗಳು ಪ್ರತ್ಯಕ್ಷಾಪ್ರತ್ಯಕ್ಷವಾಗಿ ಸಂಸ್ಕೃತವಷೇ ಆಗಿರುವುದರಿಂದ, ಸಂಸ್ಕೃತದಲ್ಲಿ "ಧ್ವನ್ಯಾಲೋಕ"ವನ್ನು ಬರೆದವನು ಆನಂದವರ್ಧನನೇ ಆಗಿರುವುದರಿಂದ ಆ ಗ್ರಂಥದ ಧ್ವನಿಪ್ರತಿಪಾದನೆಯು ತರ್ಕ-ವಿತರ್ಕಗಳಿಂದ ಸಾಳ್ವನಲ್ಲಿ ಸ್ಫೂರ್ತಿಯನ್ನು ಪಡೆದಿರಲೇ ಬೇಕು– ಎಂಬುದರಲ್ಲಿ ಸಂದೇಹವಿಲ್ಲ. 20 ನೆಯದಕ್ಕಿಂತ ಹಿಂದಿನ ಶತಮಾನಗಳಲ್ಲಿ ಸಂಸ್ಕೃತ ಬಾರದ ಭಾರತೀಯನಿಗೆ ಪಾಂಡಿತ್ಯ, ಶಾಸ್ತ್ರಜ್ಞಾನ, ವಿದ್ವತ್ತೆ, ಇತ್ತೆಂಬುದನ್ನು ಭಾರತದಲ್ಲಿ (ಹಾಗೇ ಕರ್ನಾಟಕದಲ್ಲಿ) ಯಾರೂ ಒಪ್ಪುತ್ತಿರಲಿಲ್ಲ. ಈಗ ಆ ಪರಿಸ್ಥಿತಿ ಬದಲಾಗಿದೆ ಎನ್ನಲು ಭಾಷಾ ಸಂಬಂಧಿ ಶಾಸ್ತ್ರಗಳ ಕ್ಷೇತ್ರದಲ್ಲಂತೂ ಸಾಧ್ಯವೇ ಇಲ್ಲ. ಸಂಸ್ಕೃತಕ್ಕೆ ಭಾರತೀಯ ಭಾಷೆಗಳೆಲ್ಲವುಗಳ ಸಂಬಂಧ ಮಾತ್ರವಲ್ಲ– ಯೂರೋಪಿನ ಭಾಷೆಗಳೆಲ್ಲವುಗಳ ಸಂಬಂಧವೂ ವ್ಯುತ್ಪತ್ತಿ ಶಾಸ್ತ್ರಾನುಸಾರವಾಗಿ ಈಗಲೂ ಇದೆ. ಇಲ್ಲಿ ಅದು ಸರ್ವಪ್ರಾಂತಗಳಲ್ಲೂ ವಿದ್ಯಾವಂತರ ಭಾಷೆಯಾಗಿತ್ತು. ಆದುದರಿಂದ ಅದರಲ್ಲಿ ಮೊದಲು ಬರೆದ ಪ್ರಸಿದ್ಧವಾದ ಗ್ರಂಥಗಳ ಪ್ರಭಾವವು ಕಿಂಚಿತ್ತಾದರೂ ಬೀಳದ ದೇಶಭಾಷಾವಾಙ್ಮಯವೇ ಇಲ್ಲ ಎಂದರೆ ಅತಿಶಯೋಕ್ತಿಯಾಗಲಾರದು.

ಕ್ರಿ. ಶ. 1600 ರಲ್ಲಿದ್ದ ತಿಮ್ಮನು "ಅಲಂಕಾರ ರಸ ಸಂಗ್ರಹ" ಎಂಬ ಗ್ರಂಥವನ್ನು ಬರೆದನು. ಅದಕ್ಕೆ "ನವರಸಾಲಂಕಾರ" ಎಂಬ ಇನ್ನೊಂದು ಹೆಸರೂ ಉಂಟು. ಸಾಳ್ವನ "ರಸರತ್ನಾಕರ" ದಿಂದ ಈತನು ಸೂತ್ರಗಳನ್ನೂ, ವಾಕ್ಯಗಳನ್ನೂ ಉದಾಹರಿಸಿದ್ದಾನೆ. ಈ ಗ್ರಂಥ ಚಂಪೂರೂಪದಲ್ಲಿದೆ. ಇದರ ಪ್ರತಿಪಾದ್ಯವಿಷಯವು ರಸಪ್ರಕ್ರಿಯೆ. ನಾಯಕ–ನಾಯಿಕಾ ಲಕ್ಷಣಗಳೂ ವ್ಯಭಿಚಾರಿ ಅಥವಾ ಸಂಚಾರಿ ಭಾವಾದಿಗಳೂ ಇದರಲ್ಲಿ ವಿವರಿಸಲ್ಪಟ್ಟಿವೆ. ಕವಿಕಾಮನ ಮತ, ನಾಗವರ್ಮನ ಮತ ಎಂದು ಆ ವಿದ್ವಾಂಸರ ಗ್ರಂಥಗಳಿಂದಲೂ ಸೂತ್ರಗಳು ಅನುವಾದಿಸಲ್ಪಟ್ಟಿವೆ. ಉದಾಹರಣ ಪದ್ಯಗಳೆಲ್ಲವೂ ಪಂಪ, ಪೊನ್ನ, ನಾಗಚಂದ್ರ, ನೇಮಿಚಂದ್ರ ಮೊದಲಾದ ಪ್ರಾಚೀನ ಕನ್ನಡ ಮಹಾಕವಿಗಳ ಕಾವ್ಯಗಳಿಂದ ಆಯ್ದು ಕೊಡಲ್ಪಟ್ಟಿವೆ. ಸಂಸ್ಕೃತ ಭಾರತದ ರಸಸಿದ್ಧಾಂತದ ಜಯಭೇರಿಗಿದೂ ಒಂದು ಉದಾಹರಣೆ

ಇದಕ್ಕೆ ಸ್ವಲ್ಪ ಮೊದಲು–ಅಂದರೆ–ಕ್ರಿ. ಶ. 1500 ರಂದು ಕನ್ನಡದ ಈಶ್ವರ ಕವಿಯು "ಕವಿಜಿಹ್ವಾಬಂಧನ" ಎಂಬ ತನ್ನ ಛಂದೋಗ್ರಂಥದಲ್ಲಿಯ 4 ನೆಯ ಪರಿಚ್ಛೇದದಲ್ಲಿ ಭಾವ, ಅಲಂಕಾರ ಮುಂತಾದವುಗಳನ್ನು ವಿವರಿಸಿದ್ದಾನೆ: 2 ನೆಯ ಪರಿಚ್ಛೇದದಲ್ಲಿ ಪ್ರಾಸ–ವಡಿಗಳನ್ನು ವಿವರಿಸಿದ್ದಾನೆ. ಅಲಂಕಾರ, ಭಾವ ಮುಂತಾದ ಕಲ್ಪನೆಗಳ ಆಕರ ಪೂರ್ವಿಕರ ಸಂಸ್ಕೃತ–ಕನ್ನಡ ಗ್ರಂಥರಾಶಿ.

1645–1706 ರ ನಡುವೆ ಇದ್ದ ಕನ್ನಡ ಪಂಡಿತ ತಿರುಮಲಾರ್ಯನು ತನ್ನ "ಅಪ್ರತಿಮವೀರ ಚರಿತೆ" ಎಂಬ ಗ್ರಂಥದಲ್ಲಿ ಕಾವ್ಯಲಕ್ಷಣ, ಶಬ್ದಗುಣ, ಅರ್ಥಗುಣ (ಸಂಸ್ಕೃತದಲ್ಲಿ ವಾಮನನ ಅಲಂಕಾರ ಗ್ರಂಥವನ್ನು–ರೀತಿಪ್ರಸ್ಥಾನವನ್ನು–ನೋಡಿರಿ), ರೀತಿ, ಶಯ್ಯೆ, ಪಾಕ, ವೃತ್ತಿ, ಶಬ್ದಾಲಂಕಾರ, ಅರ್ಥಾಲಂಕಾರ, ರಸಾಲಂಕಾರಗಳು ವಿವೃತವಾಗಿವೆ. ಇದರಲ್ಲಿ "ಚಂದ್ರಾಲೋಕ", "ವಾಮನವೃತ್ತಿ", "ಕಾವ್ಯಪ್ರಕಾಶ" ಮೊದಲಾದ ಸಂಸ್ಕೃತ ಗ್ರಂಥಗಳಿಂದ ಲಕ್ಷಣಗಳನ್ನು ತೆಗೆದುಕೊಂಡು ಅವುಗಳಿಗೆ ಕನ್ನಡದಲ್ಲಿ ವೃತ್ತಿಯನ್ನು ಬರೆದು ಉದಾಹರಣೆಗಳನ್ನು ಈ ಶಾಸ್ತ್ರಕಾರನು ಕೊಟ್ಟಿದ್ದಾನೆ. ಇವನಿಂದ 17 ನೆಯ ಶತಮಾನದಲ್ಲಿ ತಮಿಳಿನ ಪ್ರಸಿದ್ಧ ವಿದ್ವಾಂಸನಾದ ಅಪ್ಪಯ್ಯದೀಕ್ಷಿತನು "ಕುವಲಯಾನಂದ" ವೆಂಬ ವಿಮರ್ಶೆಗ್ರಂಥವನ್ನು 1549–1613 ರ ನಡುವೆಯೇ ಬರೆದು ಪ್ರಸಿದ್ಧನಾಗಿದ್ದನು. ಈ ಸಂಸ್ಕೃತ ಅಲಂಕಾರ ಗ್ರಂಥವು ಈಗಲೂ ಪಾಠಶಾಲೆಗಳಲ್ಲಿ ಜನಪ್ರಿಯವಾಗಿದೆ. ತಮಿಳುನಾಡು ನಮ್ಮ ನೆರೆಯನಾಡೆಂಬುದು ಇಲ್ಲಿ ಸ್ಮರಣೀಯ. ಹಾಗೇ ಆಂಧ್ರಪ್ರದೇಶದವನಾಗಿದ್ದ ಜಗನ್ನಾಥ ಪಂಡಿತರಾಜನೂ ಸಂಸ್ಕೃತದಲ್ಲಿ ಅತಿ ಪ್ರಸಿದ್ಧವಾದ "ರಸಗಂಗಾಧರ" ಎಂಬ ಅಲಂಕಾರ ಗ್ರಂಥವನ್ನು 1659 (?) ರ ಹೊತ್ತಿಗೆ ಬರೆದು ಪ್ರಸಿದ್ಧನಾಗಿದ್ದನು. ಈತನು ನಮ್ಮ ನೆರೆನಾಡಿನ ತೆಲುಗು ವಿದ್ವಾಂಸ, ದಂಡಿಯಂತೆಯೇ ಈತನು ಉದ್ದಾಮ ಸಂಸ್ಕೃತ ಕವಿ.

ಈ ಹಿನ್ನೆಲೆಯಲ್ಲಿ 1867 ರಲ್ಲಿದ್ದ ಲಿಂಗರಾಜನೆಂಬ ಕನ್ನಡ ಪಂಡಿತನು "ನರಪತಿವಿಜಯ" ಎಂಬ ಗ್ರಂಥವನ್ನು ಬರೆದು ಅದರಲ್ಲಿ ಸಂಸ್ಕೃತಕ್ಕೆ ಸಾಧಾರಣವಾದ ಶಬ್ದಾಲಂಕಾರ, ಅರ್ಥಾಲಂಕಾರಗಳನ್ನು (Figures of Speech) ವಿವರಿಸಿದನು. ಇದಕ್ಕೆ ಆಧಾರ ಸಂಸ್ಕೃತದ "ಚಂದ್ರಾಲೋಕ". 1734 ರಲ್ಲಿದ್ದ ಜಾಯೇಂದ್ರನು "ಕರ್ಣಾಟಕ ಕುವಲಯಾನಂದ" ಮತ್ತು "ರಸಮಂಜರಿ" (ಇಂದಿನ ಆಕಾಶವಾಣಿಯ "ರಸಮಂಜರಿ" ಅಲ್ಲ) ಎಂಬೆರಡು ಕನ್ನಡ ವಿಮರ್ಶೆ ಗ್ರಂಥಗಳನ್ನು ಬರೆದನು. ಕರ್ಣಾಟಕ ಕುವಲಯಾನಂದವು ಸಂಸ್ಕೃತ ಕುವಲಯಾನಂದದ ಕನ್ನಡ ಭಾಷಾಂತರ. ಅದೊಂದು ಷಟ್‌ಪದಿ ಗ್ರಂಥ. ಅದರಲ್ಲಿ ಸೋದಾಹರಣವಾಗಿ 101 ಅಲಂಕಾರಗಳು (Figures of Speech) ವಿವೃತವಾಗಿವೆ. ಸೂತ್ರಗಳು ಶರಷಟ್ಪದಿ ಅಥವಾ ಸಾಂಗತ್ಯ ಛಂದದಲ್ಲಿವೆ. ಉದಾಹರಣೆಗಳನ್ನು ಹೆಚ್ಚಾಗಿ ಕನ್ನಡದ ಸೌಂದರಪುರಾಣ,

ಉದ್ಭಟಕಾವ್ಯ, ಜಾಮುಣಿ ಭಾರತ, ಚಿತ್ರಭಾರತ, ಭಿಕ್ಷಾಟನ ಕಾವ್ಯ, ಚೇರಮ ಕಾವ್ಯ, ಭಾವ ಚಿಂತಾರತ್ನ, ಜೈಮಿನಿ ಭಾರತ ಮೊದಲಾದ ಕನ್ನಡ ಷಟ್‌ಪದಿ ಗ್ರಂಥಗಳು ಇವುಗಳಿಂದ ಕೊಡಲಾಗಿದೆ. ಈ ಉದಾಹರಣೆಗಳು ಅನುವಾದಗಳು ಅಥವಾ ಉದ್ಧಾರ ಪದ್ಯಗಳು. ಒಂದೊಂದು ಅಲಂಕಾರವನ್ನು ವಿವರಿಸಲು ಮೂರು ಮೂರು ಉದಾಹರಣೆಗಳನ್ನು ಉದ್ಧರಿಸಿ ಕೊಡಲಾಗಿದೆ. ಈ ವಿಮರ್ಶಕನ "ರಸಮಂಜರಿ" ಎಂಬ ಕಾವ್ಯಶಾಸ್ತ್ರ ಗ್ರಂಥದ ಇನ್ನೊಂದು ಹೆಸರು "ಶೃಂಗಾರ ತಿಲಕ". ಇದೂ ಒಂದು ಕನ್ನಡ ಷಟ್‌ಪದಿ ಗ್ರಂಥ. ದಿ. ಎಂ.ಎಸ್. ಬಸವಲಿಂಗಯ್ಯನವರ ಪ್ರಕಾರ ಕನ್ನಡ ಕಾವ್ಯಶಾಸ್ತ್ರ ಗ್ರಂಥಗಳಲ್ಲಿ (ಈ ವರೆಗೆ ಹೇಳಿದವುಗಳಲ್ಲಿ) ನಾಗವರ್ಮನ "ಕಾವ್ಯಾವಲೋಕನ"ವು ಕಾವ್ಯಾಭ್ಯಾಸಿಗಳಿಗೆ ಅತ್ಯಂತ ಅವಶ್ಯವಾದ ಅಭ್ಯಸನೀಯ ಗ್ರಂಥ.

ಸಾಹಿತ್ಯ ವಿಮರ್ಶೆಯ ಅನಂತರ ವ್ಯಾಕರಣಾದಿ ಶಾಸ್ತ್ರಗಳಲ್ಲಿ ಸಂಸ್ಕೃತಕ್ಕೂ ಕನ್ನಡಕ್ಕೂ ಇರುವ ಸಂಬಂಧವನ್ನು ಪರಿಶೀಲಿಸೋಣ.

ಶಾಸ್ತ್ರ ಅಥವಾ ವಿಜ್ಞಾನ ಎಂಬ ಬೌದ್ಧಿಕ ಚಟುವಟಿಕೆಗಳ ಕ್ರೋಢೀಕರಣದಲ್ಲಿ ಪಾರಿಭಾಷಿಕ ಪದಗಳು ಜಗತ್ತಿನ ಎಲ್ಲ ಭಾಷೆಗಳಲ್ಲೂ ಅಗತ್ಯ ಎಂಬುದು ತಿಳಿದ ಸಂಗತಿ. ಉದಾಹರಣೆಗಾಗಿ ವ್ಯಾಕರಣ ಶಾಸ್ತ್ರವನ್ನು ತೆಗೆದುಕೊಂಡರೆ ಕರ್ತೃ, ಕರ್ಮ, ಕ್ರಿಯೆ, ನಾಮ, ಧಾತು, ಉಪಸರ್ಗ, ನಿಪಾತ, ಪ್ರಕೃತಿ, ಪ್ರತ್ಯಯ, ಲಿಂಗ, ವಚನ, ವಿಭಕ್ತಿ, ಪದ, ಅರ್ಥ, ಸಂಧಿ, ಸಮಾಸ, ಪ್ರಕೃತಿಭಾವ ಮುಂತಾದ ವಿವಿಧ ವೈಯಾಕರಣ ಪಾರಿಭಾಷಿಕಗಳು ಸಂಸ್ಕೃತಕ್ಕೂ ಕನ್ನಡಕ್ಕೂ ಒಂದೇ ಆಗಿವೆ. ಅವುಗಳನ್ನು ಸಂಸ್ಕೃತೇತರವಾದ ಶುದ್ಧ ಕನ್ನಡಕ್ಕೆ ಈವರೆಗೆ ಯಾರೂ ಪರಿವರ್ತಿಸಲಿಲ್ಲ. ಪರಿವರ್ತಿಸುವ ಅವಶ್ಯಕತೆಯೂ ಇಲ್ಲ. ಪಾರಿಭಾಷಿಕವಾಗಿ ವಾಕ್ಯ (Sentence) ಮತ್ತು ವಾಕ್ಯೋಚ್ಚಯ ಅಥವಾ ಮಹಾವಾಕ್ಯ ಎನ್ನಲು ಕೂಡ ಕನ್ನಡವು ಶುದ್ಧ (ತದ್ಭವ-ತತ್ಸಮ ಭಿನ್ನವಾದ)ವಾಗಿ ತನ್ನದೇ ಆದ ಪರ್ಯಾಯ ಪದಗಳನ್ನು ಸಿದ್ಧಗೊಳಿಸಲಿಲ್ಲ.

ಸಂಸ್ಕೃತದಲ್ಲಿ ಪಾಣಿನಿಗಿಂತಲೂ ಹಿಂದೆ ಶಾಕಲ್ಯ, ಆಪಿಶಲಿ, ವ್ಯಾಡಿ ಮುಂತಾದ ವ್ಯಾಕರಣಕಾರರಿದ್ದರೆಂದು ಗೊತ್ತಾಗಿದೆ. ಪಾಣಿನಿಯ ಕಾಲವು ಕ್ರಿ. ಪೂ. 56 ನೆಯ ಶತಮಾನ ಎಂದು ಸಂಶೋಧಕರ ಮತ. ಕ್ರಿ. ಪೂ. ಯುಗದಲ್ಲಿ ಯಾವ ಕನ್ನಡ ವ್ಯಾಕರಣವಿದ್ದಿತೋ ದೇವರೇ ಬಲ್ಲ. ಮಾನವರಿಗಿನ್ನೂ ಉಪಲಬ್ಧವಾಗಿಲ್ಲ. ಉಪಲಬ್ಧ ಕನ್ನಡ ವ್ಯಾಕರಣ ಗ್ರಂಥಗಳಲ್ಲಿ ನಯಸೇನ ಕೃತವಾದ ಒಂದು ವ್ಯಾಕರಣ ವಿದ್ದಂತೆ ತಿಳಿಯುತ್ತದೆ. ಅದು ದೊರೆತಿಲ್ಲ. ಉಪಲಬ್ಧ ಪ್ರಾಚೀನ ಕನ್ನಡ ವ್ಯಾಕರಣ ಗ್ರಂಥಗಳಲ್ಲಿ ಶಬ್ದಸ್ಮೃತಿ, ಶಬ್ದಮಣಿದರ್ಪಣ, ಭಾಷಾಭೂಷಣ ಮತ್ತು ಶಬ್ದಾನುಶಾಸನ ಎಂಬ ನಾಲ್ಕೇ ಗ್ರಂಥಗಳು ಗಣ್ಯ—ಎಂದಿದ್ದಾರೆ ಕನ್ನಡ ಕವಿ ಚರಿತ

ಕಾರರು. ಆದರೆ "ಶಬ್ದಸ್ಮೃತಿ"ಯ ವಿವರಗಳನ್ನವರು ಕೊಟ್ಟಿಲ್ಲ. ಸುಮಾರ ಕ್ರಿ. ಶ. 1260 ರಲ್ಲಿದ್ದ ಕೇಶಿರಾಜನ "ಶಬ್ದಮಣಿದರ್ಪಣ" ವನ್ನು ಅವರು ವಿವರಿಸಿದ್ದಾರೆ. ಅದರಲ್ಲಿ ಸಂಧಿ, ನಾಮ, ಸಮಾಸ,ತದ್ಧಿತ, ಆಖ್ಯಾತ, ಧಾತು, ಅಪಭ್ರಂಶ, ಅವ್ಯಯ ಎಂಬ ಎಂಟು ವಿಭಾಗಗಳಿವೆ. ಕೊನೆಯಲ್ಲಿ "ಪ್ರಯೋಗ ಸಾರವೆಂಬ ತಬ್ದಾರ್ಥನಿರ್ಣಯಂ" ಎಂಬ ಒಂಬತ್ತನೆಯ ವಿಭಾಗವೊಂದಿದೆ. ಕೇಶಿರಾಜ ಕನ್ನಡಕ್ಕೆ ವಿಶಿಷ್ಟವಾದ ಅಂಶಗಳು ಅವನ ಪ್ರಕಾರ ಇಷ್ಟೇ:

"ಗಮಕ ಸಮಾಸದಿಂ ಱಳಕುಳಕ್ಷಳದಿಂ ಶ್ರುತಿಸಪ್ಯಸಂಧಿಯಿಂ।
ಸಮುಚಿತಮಾಗಿ ಬರ್ಪ ಸತಿ ಸಪ್ತಮಿಯಿಂ ಸಮಸಂಸ್ಕೃತೋಕ್ತಿಯಿಂ
ಮನುಸಪಕ್ಷೀವದಿಂ ವಿರಹಿತಾನ್ವಯ ಸಂಸ್ಕೃತ ಲಿಂಗದಿಂ ಪದೋ
ತ್ತಮ ಶಿಥಿಲತ್ವದಿಂ ಯತಿವಿಲಂಘನದಿಂದರಿವಲ್ತೆ ಕನ್ನಡಂ॥"

ಮಿಕ್ಕ ಅಂಶಗಳೆಲ್ಲವೂ ಸಂಸ್ಕೃತ ಭಾಷೆಗೂ ಕನ್ನಡ ಭಾಷೆಗೂ ಒಂದೇ ಎಂದಾಯಿತು. ಆ ಅಂಶಗಳ ಬಹುಸಂಖ್ಯಾತತೆಯ ದೆಸೆಯಿಂದ ವ್ಯಾಕರಣದಲ್ಲಿ—ಅದರ ಮೂಲಭೂತ ನಿಯಮಗಳಲ್ಲಿ—ಕನ್ನಡವು ಸಂಸ್ಕೃತ ಮೂಲವ್ಯಾಕರಣಗಳನ್ನು ಬಿಟ್ಟಿರಲಾರದು-ಎಂಬುದು ಸ್ಪಷ್ಟವಾಗುತ್ತದೆ.

ನೃಪತುಂಗನು ಕವಿರಾಜಮಾರ್ಗದಲ್ಲಿ ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದ ಕೆಲವಂಶಗಳನ್ನು ಅಲ್ಲಲ್ಲಿ ಹೇಳಿದ್ದರೂ ಕರ್ಣಾಟಕ ವ್ಯಾಕರಣವನ್ನು ಕ್ರಮವಾದ ಅನು ಪೂರ್ವಿಯೊಡನೆ ಗ್ರಂಥರೂಪದಲ್ಲಿ ಮೊದಲು ಬರೆದವನು ನಾಗವರ್ಮನು. ಅತನು ಈ ಶಾಸ್ತ್ರವನ್ನು ಕಾವ್ಯಾವಲೋಕನದ ಮೊದಲನೆಯ ಅಧ್ಯಾಯವಾದ ಶಬ್ದ ಸ್ಮೃತಿಯಲ್ಲಿನ ಸಂಗ್ರಹವಾಗಿಯೂ ಭಾಷಾಭೂಷಣದಲ್ಲಿ ಅದಕ್ಕಿಂತ ಸ್ವಲ್ಪ ವಿಸ್ತಾರ ವಾಗಿಯೂ ಉಪಪಾದಿಸಿದ್ದಾನೆ. ನಾಗವರ್ಮನ ಶಬ್ದಸ್ಮೃತಿಯನ್ನೇ ಅನುಸರಿ-ಸಿದರೂ ಕೇಶಿರಾಜನು ಕೆಲವು ಹೊಸ ವಿಷಯಗಳನ್ನು ಸೇರಿಸಿ ವಿಸ್ತರಿಸಿ ಮೇಲೆ ಹೇಳಿದ ತನ್ನ ವ್ಯಾಕರಣ ಗ್ರಂಥವನ್ನು ರಚಿಸಿದನು. ನಾಗವರ್ಮನ ಗ್ರಂಥದಲ್ಲಿ ಉದಾಹೃತವಾದ ಪದ್ಯಗಳೇ ಹೆಚ್ಚಾಗಿ "ಶಬ್ದಮಣಿದರ್ಪಣ"ದಲ್ಲಿ ಉದಾಹೃತವಾಗಿವೆ. ಕನ್ನಡ ಭಾಷೆಯಲ್ಲಿ ಕರ್ಣಾಟಕ ಶಬ್ದಶಾಸ್ತ್ರವನ್ನು ಪ್ರತಿಪಾದಿಸುವ ಗದ್ಯಗ್ರಂಥ ಇದೊಂದೇ ಎಂಬುದು ಕವಿಚರಿತಕಾರರ ಮತ. ನಾಗವರ್ಮನ ಕಾಲ ಸುಮಾರು ಕ್ರಿ. ಶ. 1145. "ಶಬ್ದಸ್ಮೃತಿ" ಯೆಂಬ ವಿಭಾಗದಲ್ಲಿ ಸಂಧಿ. ನಾಮ, ಸಮಾಸ ತದ್ಧಿತ, ಆಖ್ಯಾತ ಎಂಬ ಐದು ಅಧ್ಯಾಯಗಳಿವೆ. ಕಾವ್ಯಾವಲೋಕನದ "ಕಾವ್ಯ-ಮಲವ್ಯಾವೃತ್ತಿ" ಎಂಬ ವಿಭಾಗದಲ್ಲಿ ಪದಪದಾರ್ಥಸಂಧಿದೋಷನಿಶ್ಚಯ, ವಾಕ್ಯ-ವಾಕ್ಯಾರ್ಥದೋಷ ಅನುಕೀರ್ತನ ಎಂಬ ಎರಡು ಪ್ರಕರಣಗಳಿವೆ.

ನಾಗವರ್ಮನ "ಕರ್ಣಾಟಕ ಭಾಷಾಭೂಷಣ" ಎಂಬ ಗ್ರಂಥದಲ್ಲಿ ಸೂತ್ರ ಗಳನ್ನೂ ವೃತ್ತಿಯನ್ನೂ ಸಂಸ್ಕೃತ ಭಾಷೆಯಲ್ಲಿ ಬರೆದು ಪೂರ್ವಕವಿಗಳ ಕನ್ನಡ

ಗ್ರಂಥಗಳಿಂದ ಉದಾಹರಣೆಗಳನ್ನು ಕೊಟ್ಟಿದ್ದಾನೆ. ಗ್ರಂಥದ ಪರಿಚ್ಛೇದಗಳು ಇಂತಿವೆ : ಸಂಜ್ಞೆ, ಸಂಧಿ, ವಿಭಕ್ತಿ, ಕಾರಕ, ಶಬ್ದರೀತಿ, ಸಮಾಸ, ತದ್ಧಿತ, ಆಖ್ಯಾತನಿಯಮ, ಅವ್ಯಯನಿರೂಪಣ ಮತ್ತು ನಿಪಾತನಿರೂಪಣ. ಅವನು ರಚಿಸಿದ "ವಸ್ತುಕೋಶ" ಎಂಬ ಗ್ರಂಥವು ಕನ್ನಡಿಗರಿಗೆ ಸಂಸ್ಕೃತದ ಜ್ಞಾನವು (ವ್ಯಾಕರಣ ಸಮೇತವಾಗಿ) ಎಷ್ಟು ಅವಶ್ಯಕ ಎಂಬುದನ್ನು ಸಿದ್ಧಮಾಡಿದೆ ಅದು ಕನ್ನಡದಲ್ಲಿ ಉಪಯೋಗಿಸುವ ಸಂಸ್ಕೃತಪದಗಳಿಗೆ ಅರ್ಥವನ್ನು ಹೇಳುವ ಪದ್ಯರೂಪದ ಸಂಸ್ಕೃತಕರ್ಣಾಟಕ ನಿಘಂಟು, ಆ ಗ್ರಂಥದಲ್ಲಿ ಏಕಾರ್ಥಕಾಂಡ, ನಾನಾರ್ಥಕಾಂಡ, ಸಾಮಾನ್ಯಕಾಂಡ– ಎಂದು ಮೂರು ಕಾಂಡಗಳಿವೆ.

ನಾಗವರ್ಮನ "ಭಾಷಾಭೂಷಣ" ವನ್ನನುಸರಿಸಿಯೇ ಭಟ್ಟಾಕಳಂಕನು ಕ್ರಿ. ಶ. 1604 ರಂದು "ಕರ್ಣಾಟಕ ಶಬ್ದಾನುಶಾಸನ" ಎಂಬ ಕನ್ನಡ ವ್ಯಾಕರಣ ಗ್ರಂಥವನ್ನು ಸಂಸ್ಕೃತಭಾಷೆಯಲ್ಲಿ ಬರೆದನು. ಇದರಲ್ಲಿ 4 ಪಾದಗಳಿವೆ, 592 ಸೂತ್ರಗಳಿವೆ; ಭಾಷಾಮಂಜರಿಯೆಂಬ ವೃತ್ತಿಯೂ ಮಂಜರೀ ಮಕರಂದವೆಂಬ ವ್ಯಾಖ್ಯಾನವೂ ಇವೆ. ಪೂರ್ವ ಕವಿಗಳ ಕನ್ನಡ ಗ್ರಂಥಗಳಿಂದ ಉದಾಹರಣೆಗಳನ್ನು ಕೊಡಲಾಗಿದೆ. ಇದು "ಕರ್ಣಾಟಕ ಭಾಷಾಭೂಷಣ"ಕ್ಕಿಂತ ಹೆಚ್ಚು ವಿಸ್ತಾರವಾಗಿಯೂ ಪ್ರೌಢವ್ಯಾಖ್ಯಾನ ಸಮೇತವಾಗಿಯೂ ಇದೆ: "ಶಬ್ದಮಣಿದರ್ಪಣ" ಕ್ಕಿಂತಲೂ ಹೆಚ್ಚು ವಿಷಯಗಳನ್ನು ಒಳಗೊಂಡಿದೆ. ಕನ್ನಡ ಭಾಷೆಗೆ ಇದು ಅತ್ಯುತ್ತಮ ವ್ಯಾಕರಣ ಗ್ರಂಥ ಎಂದಿದ್ದಾರೆ ರಾ. ಬ. ಆರ್. ನರಸಿಂಹಾಚಾರ್ಯರು.

ಸುಮಾರು 1830 ರಲ್ಲಿ ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯನು ಹಳಗನ್ನಡ ನುಡಿಗನ್ನಡಿ, ಶಬ್ದಮಂಜರಿ, ಧಾತುಮಂಜರಿ–ಎಂಬ ಗ್ರಂಥಗಳನ್ನು ಬರೆದನು. ಹೊಸಗನ್ನಡ ನುಡಿಗನ್ನಡಿಯನ್ನು 1838 ಕ್ಕೆ ಹಿಂದೆಯೇ ಅತ ಬರೆದಿದ್ದೇನೆ ಎಂದು ಹೇಳಿದ್ದಾನೆ. 20 ನೆಯ ಶತಮಾನದಲ್ಲಿ ಪಿ. ತೀ. ನಂ ಶ್ರೀಕಂಠಯ್ಯನವರ ಕನ್ನಡ ವ್ಯಾಕರಣವು ಪ್ರಚುರ. ಈ ನಡುವೆ "ಕನ್ನಡ ಲಘುವ್ಯಾಕರಣ"ವನ್ನು ಬರೆದ ವೆಂಕಟರಂಗೋ ಕಟ್ಟಿಯೂ "ಕನ್ನಡ ವ್ಯಾಕರಣ"ವನ್ನು ಬರೆದ ಕೇರಿಯೂ "ವ್ಯಾಕರಣ ಬೋಧಿನಿ" ಯನ್ನು ಬರೆದ ಮೇಬನ್ನನೂ "ಕನ್ನಡ ವ್ಯಾಕರಣ"ವನ್ನು ಬರೆದ ಕಿಟ್ಟೆಲ್ಲನೂ ಸ್ಮರಣೀಯರು. ಹಾಗೇ ಕೆರೆಲ್ಲನ "ಕರ್ಣಾಟಕವ್ಯಾಕರಣ"ವೂ ಉಲ್ಲೇಖ-ನೀಯ.

ಕ್ರಿ. ಶ. 1927 ರಲ್ಲಿ "ಕನ್ನಡ ಕೈಪಿಡಿ" ಎಂಬ ಗ್ರಂಥವು ಬಿ. ಎಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಪ್ರಕಟವಾಯಿತು. ಅದರ ಒಂದನೆಯ ಭಾಗದಲ್ಲಿ ಹಳಗನ್ನಡದ ವ್ಯಾಕರಣವೂ ಎರಡನೆಯ ಭಾಗದಲ್ಲಿ ಕರ್ಣಾಟಕ ಛಂದಸ್ಸೂ ಮೂರನೆಯ ಭಾಗದಲ್ಲಿ ಅಲಂಕಾರ ಅಥವಾ ಸಾಹಿತ್ಯವಿಮರ್ಶ ಸೂತ್ರ ಗ್ರಂಥಗಳ ವಿವರಣೆಯೂ ನಾಲ್ಕನೆಯ ಭಾಗದಲ್ಲಿ ಕನ್ನಡ ಭಾಷೆಯ ಚರಿತ್ರೆಯೂ ಐದನೆಯ

ಭಾಗವಲ್ಲಿ ಕನ್ನಡಸಾಹಿತ್ಯದ ಚರಿತ್ರೆಯೂ ಬರೆಯಲ್ಪಟ್ಟಿವೆ, ವ್ಯಾಕರಣ ವಿಭಾಗದಲ್ಲಿ ಸಂಜ್ಞಾಪ್ರಕರಣ. ಸಂಧಿಪ್ರಕರಣ, ನಾಮಪದ ಪ್ರಕರಣ, ಕ್ರಿಯಾಪದ ಪ್ರಕರಣ, ಅವ್ಯಯ ಪ್ರಕರಣ, ತದ್ಧಿತಪ್ರಕರಣ. ಕೃದಂತಪ್ರಕರಣ, ಸಮಾಸಪ್ರಕರಣ ತದ್ಭವಪ್ರಕರಣ, ಪ್ರಯೋಗಪ್ರಕರಣ, ಕರ್ಣಾಟಕಧಾತುಗಳು ಮತ್ತು ತತ್ಸಮ ತದ್ಭವಗಳು ಎಂಬ ವಿಷಯಗಳು ಬಂದಿವೆ.

ತತ್ಸಮ– ತದ್ಭವಗಳನ್ನು ಬಿಟ್ಟರೆ ಕನ್ನಡಭಾಷೆಯು ವ್ಯವಹಾರ್ಯವೇ ? ಎಂಬುದಕ್ಕೆ ದಿ. ಆರ್ ನರಸಿಂಹಾಚಾರ್ಯರೆಂದುದನ್ನು ಕೇಳೋಣ: "ಕನ್ನಡದಲ್ಲಿ ಸಾಮಾನ್ಯ ವ್ಯವಹಾರಕ್ಕೆ ಸಾಕಾಗುವಷ್ಟು ದೇಶ್ಯಶಬ್ದಗಳು ಇವೆ. ಆದರೂ ಶಾಸ್ತ್ರ ವಿಚಾರಗಳನ್ನು ಅಚ್ಚಗನ್ನಡ ಪದಗಳಿಂದಲೇ ನಿರ್ವಹಿಸುವುದು ಸಾಧ್ಯವಲ್ಲ; ಸಂಸ್ಕೃತ ಶಬ್ದಗಳ ಸಹಾಯವು ಬೇಕಾಗುತ್ತದೆ.......ಸಂಸ್ಕೃತ ಶಬ್ದಗಳು ವಿಕಾರ ವಿಲ್ಲದೆ ಕನ್ನಡಕ್ಕೆ ಸೇರಿರುವುದು ಮಾತ್ರವಲ್ಲದೆ ಅವು ವಿಕಾರವನ್ನು ಹೊಂದಿ ತದ್ಭವ ಗಳೆಂಬ ಹೆಸರಿನಿಂದಲೂ ಹೇರಳವಾಗಿ ಬಂದು ಸೇರಿವೆ......ದ್ರಾವಿಡ ಭಾಷೆಗಳಿಗೆ ಸಂಸ್ಕೃತ ಶಬ್ದಗಳೂ ಪ್ರಾಕೃತ ಶಬ್ದಗಳೂ ಬಂದು ಸೇರಿರುವಂತೆ ಸಂಸ್ಕೃತ ಭಾಷೆಗೂ ಕೆಲ ಕೆಲವು ದ್ರಾವಿಡ ಶಬ್ದಗಳು ಹೋಗಿ ಸೇರಿ ಸಂಸ್ಕೃತ ಪದಗಳೆಂದೇ ಭಾವಿಸಲ್ಪಟ್ಟಿವೆಯೆಂದೂ ಅಂಥ ಶಬ್ದಗಳಿಗೆ ಸಂಸ್ಕೃತದಲ್ಲಿ ವ್ಯುತ್ಪತ್ತಿಯನ್ನು ಹೇಳ ಲಿಕ್ಕಾಗದಿರುವುದೇ ಮೊದಲಾದ ಕಾರಣಗಳಿಂದ ಅವು ಸಂಸ್ಕೃತ ಶಬ್ದಗಳಲ್ಲವೆಂದೂ ಕೆಲವರು......ಅಭಿಪ್ರಾಯ ಪಡುತ್ತಾರೆ." ಆದರೆ ದ್ರಾವಿಡ ಭಾಷೆಗಳಲ್ಲಿಯ ಎಲ್ಲ ಸಂಸ್ಕೃತ ಸಂಬಂಧರಹಿತವಾದ ಪದಗಳಿಗೆ ವ್ಯುತ್ಪತ್ತಿಯನ್ನು ಹೇಳಲು ಸಾಧ್ಯವಾಗಿರದುದೂ ತಿಳಿದುಕೊಳ್ಳಬೇಕಾದ ಸಂಗತಿ. ಸತ್ಯವು ಇಲ್ಲಿ ಎತ್ತ ಬೇಕಾದರೂ ಒಲೆದಿರಲಿ—ಈಗ ಕನ್ನಡವು ಸಂಸ್ಕೃತ—ಕನ್ನಡ ವ್ಯಾಕರಣ ಗಳೆರಡನ್ನೂ ಸರಿಯಾಗಿ ಬಳಸಿಕೊಳ್ಳುವುದು ಪ್ರಯೋಗಕ್ಕೆ (ಅಂದರೆ ಸರಿಯಾಗಿ ಅರ್ಥವಾಗಬೇಕಾದರೆ) ಅಗತ್ಯ. ಇದಕ್ಕೆ ಒಂದು ಪತ್ರಿಕೆಯ ಸುದ್ದಿಯ ಪ್ರಕಟಣೆ ಯಿಂದ ನಿದರ್ಶನವನ್ನು ಪರೀಶೀಲಿಸೋಣಃ

"ಬರುವ ವರ್ಷದ ಆರ್ಥಿಕ ಮುನ್ನೋಟ ಆಶಾದಾಯಕವಾಗಿರುವದಿಲ್ಲ.ಕಳೆದ ವರ್ಷ 13 ಕೋಟಿ 30 ಲಕ್ಷ ಟನ್ನುಗಳಷ್ಟು ಆಹಾರ ಉತ್ಪಾದನೆಯಾಗಿ ಹೊಸ ವಿಕ್ರಮ ಸ್ಥಾಪಿಸಲ್ಪಟ್ಟಿತ್ತು. ಅದು ಬರುವ ವರ್ಷ 12 ಕೋಟಿ 30 ಲಕ್ಷ ಟನ್ನು ಗಳಿಗೆ ಇಳಿಯಲಿದೆ. ದೇಶದ ವಿವಿಧ ಭಾಗಗಳಲ್ಲಿ ಅಭಾವ ಸ್ಥಿತಿ ಉಂಟಾಗಿರುವದೇ ಇದಕ್ಕೆ ಕಾರಣ. ಆಹಾರ ಧಾನ್ಯ ಸಂಗ್ರಹ ಸಾಕಷ್ಟು ಇದೆಯಾದರೂ ಸರಿಯಾದ ವ್ಯವಸ್ಥಾಪಕತ್ವದ ಅಭಾವದಿಂದಾಗಿ ಇದೊಂದೇ ಬೆಲೆ ಏರಿಕೆಯನ್ನು ತಡೆಯದು. ಅಲ್ಲದೆ ಬೇಳೆಕಾಳು ಮುಂತಾದ ಬೆಳೆಗಳ ಸಂಗ್ರಹವೂ ವಿಪುಲವಾಗಿರುವುದಿಲ್ಲ...... ಸಕ್ಕರೆ ಬೆಲೆ ಇಳಿದಿರುವುದರಿಂದ ಬರಲಿರುವ ವರ್ಷ ಅದರ ಉತ್ಪಾದನೆಯು ಕಳೆದ ವರ್ಷದ 59 ಲಕ್ಷ ಟನ್ನುಗಳಿಂದ 45.48 ಟನ್ನುಗಳಿಗೆ ಇಳಿವ ಸಾಧ್ಯತೆ ಉಂಟಾಗಿದೆ.

ಇದೇ ಕಾಲಕ್ಕೆ ಮಾಸಿಕ ಬಳಕೆಯು 6 ಲಕ್ಷ ಟನ್ನುಗಳಿಗೆ ಏರಿದ್ದು ಬರಲಿರುವ ವರ್ಷ ಇದರಲ್ಲಿ ಕಡಿತ ಮಾಡಬೇಕಾಗಬಹುದು. ಇದರಿಂದ ಬಳಕೆದಾರನಿಗೆ ತೊಂದರೆ ಖಂಡಿತ." ಈ ಅನುಚ್ಛೇದದ ತಿದ್ದಿದ ರೂಪ:

"ಬರುವ ವರ್ಷದ ಆರ್ಥಿಕ ಮುನ್ನೋಟವು ಆಶಾದಾಯಕವಾಗಿಲ್ಲ. ಕಳೆದ ವರ್ಷ 13 ಕೋಟಿ 30 ಲಕ್ಷ ಟನ್ನುಗಳಷ್ಟು ಆಹಾರವು ಉತ್ಪಾದಿಸಲ್ಪಟ್ಟುದರಿಂದ ಹೊಸ ವಿಕ್ರಮವನ್ನು ಸ್ಥಾಪಿಸಲು ಸಾಧ್ಯವಾಯಿತು. ಅದು ಬರುವ ವರ್ಷ 12 ಕೋಟಿ 30 ಲಕ್ಷ ಟನ್ನುಗಳಿಗೆ ಇಳಿಯಲಿದೆ. ದೇಶದ ವಿವಿಧ ಭಾಗಗಳಲ್ಲಿ ಅಭಾವ ಸ್ಥಿತಿ ಉಂಟಾಗಿರುವದೇ ಇದಕ್ಕೆ ಕಾರಣ. ಆಹಾರಧಾನ್ಯ ಸಂಗ್ರಹ ಸಾಕಷ್ಟು ಇದೆಯಾದರೂ ಸರಿಯಾದ ವ್ಯವಸ್ಥಾಪಕತ್ವದ ಅಭಾವದಿಂದಾಗಿ ಇದೊಂದೇ ಬೆಲೆ ಯೇರಿಕೆಯನ್ನು ತಡೆಯಲಾರದು. ಅಲ್ಲದೆ, ಬೇಳೆಕಾಳು ಮುಂತಾದ ಬೆಳೆಗಳ ಸಂಗ್ರಹವೂ ವಿಪುಲವಾಗಿರುವುದಿಲ್ಲ......ಸಕ್ಕರೆಯು ಬೆಲೆ ಇಳಿದಿರುವುದರಿಂದ ಬರಲಿ ರುವ ವರ್ಷ ಅದರ ಉತ್ಪಾದನೆಯು ಕಳೆದವರ್ಷದ 59 ಲಕ್ಷ ಟನ್ನುಗಳಿಂದ 45 (ದಶಮಾಂಶ).48 ಟನ್ನುಗಳಿಗೆ ಇಳಿಯುವ ಸಂಭವ ಉಂಟಾಗಿದೆ. ಇದೇ ಕಾಲಕ್ಕೆ ಮಾಸಿಕ ಬಳಕೆಯು 6 ಲಕ್ಷ ಟನ್ನುಗಳಷ್ಟು ಏರಿರುವುದರಿಂದ ಬರಲಿರುವ ವರ್ಷ ಇದರಲ್ಲಿ ಕಡಿತ ಮಾಡಬೇಕಾಗಬಹುದು. ಇದರಿಂದ ಬಳಕೆಗಾರನಿಗೆ ತೊಂದರೆ ಖಂಡಿತ."

ಇದರಲ್ಲಿ 31 ಪದಗಳು ತತ್ಸಮ: 5 ಸಲ ಬಳಸಲಾದ ಟನ್ನು ಎಂಬ ಶಬ್ದವು ಆಂಗ್ಲಸಮ; ಸುಮಾರು 40 ದೇಶ್ಯಪದಗಳಿವೆ; ಸಕ್ಕರೆ ಎಂಬ ಒಂದೇ ಒಂದು ತದ್ಭವ ಶಬ್ದವಿದೆ. ಇಲ್ಲಿರುವ ವಾಕ್ಯಗಳ ರಚನಾಕ್ರಮವು ಕರ್ತೃ-ಕರ್ಮ-ಕ್ರಿಯೆ ಎಂಬ ವ್ಯಾಕರಣ ನಿಯಮವನ್ನು ಅನುಸರಿಸಿದೆ. ಇದು ಸಂಸ್ಕೃತ–ಕನ್ನಡ ಭಾಷೆಗಳೆರಡಕ್ಕೂ ಸಾಧಾರಣವಾದ ಉತ್ಸರ್ಗನಿಯಮ: ಸಂಸ್ಕೃತ ವ್ಯಾಕರಣದ ಕಾರಕ ಪ್ರಯೋಗ ವಿಧಾನವನ್ನಿದು ಬಿಟ್ಟಿಲ್ಲ—ವಿಭಕ್ತಿಗಳೆಲ್ಲವೂ ಯಥಾರ್ಥವಾಗಿ ಬಳಸಲ್ಪಟ್ಟಿವೆ. ಕನ್ನಡ ವ್ಯಾಕರಣದ ಪ್ರತ್ಯೇಕ ವೈಶಿಷ್ಟ್ಯವಿಲ್ಲಿಲ್ಲ.

ದಿನಾಂಕ 22-10-79 ರಂದು ಬಳಸಿದ ಕನ್ನಡದ ಸ್ವರೂಪವು ಈ ಬಗೆಯು ದಾದರೆ, ಇದರಲ್ಲಿ ತತ್ಸಮ ಅಥವಾ ಸಮಸಂಸ್ಕೃತ ಪದಗಳು ನೂರಕ್ಕೆ ಸುಮಾರು 40 ರಷ್ಟು ಇವೆ: ಸಮಾಂಗ್ಲ ಪದಗಳು ನೂರಕ್ಕೆ 6 ರಷ್ಟು ಇವೆ. ಮಿಕ್ಕ ದೇಶ್ಯಗಳು ಸುಮಾರು 54 ರಷ್ಟೆನ್ನಬಹುದು. ಅಂದರೆ ಸಂಸ್ಕೃತ–ಇಂಗ್ಲೀಷುಪದಗಳು ಹೆಚ್ಚು ಕಡಿಮೆ ಅರ್ಧದ ಹತ್ತಿರಕ್ಕೆ ಬರುತ್ತವೆ, ಪದಗಳ ಇಂಥ ಬಳಕೆಯಲ್ಲಿದೆ ವ್ಯಾಕರಣ ನಿಯಮಗಳತ್ತ ಲಕ್ಷ್ಯ ಹಾಕಿದರೆ ಅವು ನೂರಕ್ಕೆ ನೂರು ಎಂಬಷ್ಟು ಸಂಸ್ಕೃತ ವ್ಯಾಕರಣ ನಿಯಮಗಳಂತಿವೆ. ಇಂಗ್ಲೀಷು ಭಾಷೆಯು ವ್ಯಾಕರಣ ನಿಯಮಗಳಲ್ಲಿ ತಮ್ಮ ಯಾವ ವೈಶಿಷ್ಟ್ಯವನ್ನೂ ಮೂಡಿಸಿಲ್ಲ. ಆದುದರಿಂದ ಕೋಶ-ವ್ಯಾಕರಣಗಳ ದೃಷ್ಟಿಯಿಂದ

ಇಂದಿನ ಆಧುನಾತನವಾದ ಕನ್ನಡವು ಸಂಸ್ಕೃತಕ್ಕಲ್ಲದೆ ಇತರ ಯಾವ ಭಾಷೆಗೂ ಅಷ್ಟು ನಿಕಟವರ್ತಿಯಾಗಿಲ್ಲ ಎಂದು ಧಾರಾಳವಾಗಿ ಹೇಳಬಹುದು. ತುಳು, ಮಳೆಯಾಳ, ತಮಿಳು, ತೆಲುಗುಗಳಿಗೆ ದೇಶ್ಯಗಳಲ್ಲಿ ಕೆಲವು ಹೋಲಬಹುದು—ಅಷ್ಟೆ; ಅದೂ ಪದಗಳ ವ್ಯುತ್ಪತ್ತಿಯ ದೃಷ್ಟಿಯಿಂದ. ಆ ಭಾಷೆಗಳ ಮೂಲಭೂತ ವ್ಯಾಕರಣ ನಿಯಮಗಳೂ ಬಹುಮಟ್ಟಿಗೆ ಸಂಸ್ಕೃತದವುಗಳಿಗೇ ಹೆಚ್ಚು ನಿಕಟವರ್ತಿಗಳಾಗಿವೆ.

ದ್ರಾವಿಡ ಭಾಷೆಗಳು ಸಂಸ್ಕೃತ ಕುಲದವುಗಳಲ್ಲವೆಂದು ಒಪ್ಪಿಕೊಂಡರೂ ಅವುಗಳಿಗೆ ಸಂಸ್ಕೃತದ ಸಾವಿರಾರು ವರ್ಷಗಳ ಸಹವಾಸದ ಪರಿಣಾಮವಾಗಿ ಕೋಶ, ವ್ಯಾಕರಣ, ಛಂದಸ್ಸು, ಅಲಂಕಾರ, ವೈದ್ಯವಿದ್ಯೆ, ಜ್ಯೋತಿಃಶಾಸ್ತ್ರ, ಪಾಕವಿಜ್ಞಾನ, ತತ್ವಶಾಸ್ತ್ರ ಮುಂತಾದವುಗಳಲ್ಲಿ ಸಂಸ್ಕೃತ ಸಾಧಾರಣತೆ ಸುಮಾರು ಅರ್ಧಕ್ಕೂ ಹೆಚ್ಚಾಗಿದೆ ಎಂಬುದು ಇಂದು ಸ್ಪಷ್ಟಪಟ್ಟಿದೆ. ಇಂಥ ಶಾಸ್ತ್ರಗಳ ವಿಸ್ತಾರವನ್ನು ಸಂಕ್ಷಿಪ್ತವಾಗಿ ಮುಂದೆ ಕೊಡಲಾಗುವುದು. ಈ ಅಂಶವು ಸಂಸ್ಕೃತಾಭ್ಯಾಸವು ಕನ್ನಡಕ್ಕೆ ನಿಯತ ಸಾಹಚರ್ಯವುಳ್ಳದ್ದೆಂಬುದು ವಿದಿತವಾಗುತ್ತದೆ. ಏಕೆಂದರೆ, ಕನ್ನಡಕ್ಕೆ ಸಂಸ್ಕೃತ ನಿಯಮಗಳನ್ನು ಅನ್ವಯಿಸಬಹುದು; ಆದರೆ ಸಂಸ್ಕೃತಕ್ಕೆ,ಕನ್ನಡಕ್ಕೆ ವಿಶಿಷ್ಟವಾದ ವ್ಯಾಕರಣ ನಿಯಮಗಳನ್ನು ಅನುಸರಿಸಲು ಅಥವಾ ಅನ್ವಯಿಸಲು ಸಾಧ್ಯವಿಲ್ಲ. ಭಾಷಾಶರೀರದ ಕಥೆ ಇಂತಾದರೆ ಅದರ ಹೂರಣವಾದ ವಿಚಾರ ಸಂಪತ್ತು ಇನ್ನಷ್ಟು ಸಮಸಂಸ್ಕೃತವಾಗಿದೆ. ಕನ್ನಡದ "ಕಲ್ಪನೆ" ಅಥವಾ "ವಿಚಾರ" ("ಆಲೋಚನೆ") ದಲ್ಲಿ ಮೊದಲೇ ಸಂಸ್ಕೃತದಲ್ಲಿದ್ದ ಐತಿಹಾಸಿಕಾಂಶಗಳ ಒಲವು ಅಪ್ರತಿಹತವಾದುದು. ಆಂಗ್ಲ ವಿಚಾರಗಳ ಆಯಾತವು ಅಲ್ಪ, ಪ್ರಶ್ನಾರ್ಹ ಅಥವಾ ವಿತತ್ಸಮಾನ ಎನ್ನಿಸಿರುವ ಉದಾಹರಣೆಗಳು ಹಲವಾರಿವೆ.

ಛಂದಃ ಶಾಸ್ತ್ರದಲ್ಲಿರುವ ಕನ್ನಡ–ಸಂಸ್ಕೃತಗಳ ಸಂಬಂಧವನ್ನು ಅವಲೋಕಿಸುವುದಿನ್ನು ಕ್ರಮಪ್ರಾಪ್ತ.

ಒಂದನೆಯ ನಾಗವರ್ಮನು ಸುಮಾರು ಕ್ರಿ.ಶ. 990 ರಲ್ಲಿ "ಛಂದೋಂಬುಧಿ" ಎಂಬ ಗ್ರಂಥವನ್ನು ರಚಿಸಿದನು. ಕನ್ನಡ ಛಂದಸ್ಸಿಗೆ ನಮಗೆ ದೊರೆತಿರುವ ಲಕ್ಷಣ ಗ್ರಂಥಗಳಲ್ಲಿ ಇದೇ ದೊಡ್ಡ ಪುರಾತನ ಕನ್ನಡ ಗ್ರಂಥ. ಈಶ್ವರನು ಉಮೆಗೆ ಉಪದೇಶ ಮಾಡಿದ ಛಂದಸ್ಸು ಪಿಂಗಳನಿಂದ ಭೂಲೋಕದಲ್ಲಿ ವಿಸ್ತೃತವಾದಂತೆಯೂ ಅದನ್ನು ತಾನು ಕಲಿತು ತನ್ನ ಹೆಂಡತಿಗೆ ಉಪದೇಶ ಮಾಡಿದಂತೆಯೂ ಹೇಳಿರುವುದರಿಂದ ಈ ಕವಿ ಪಿಂಗಳನನ್ನು ಅನುಸರಿಸಿದನೆಂದು ಗೊತ್ತಾಗುತ್ತದೆ. ಆದರೆ ಸಂಸ್ಕೃತಪಿಂಗಳ ಪ್ರಾಕೃತಪಿಂಗಳ ಎಂದು ಇಬ್ಬರು ಪಿಂಗಳರು ಇದ್ದರೆಂದು ಕೆಲವರು ಹೇಳಿದ್ದಾರೆ. ಆದರೆ ಒಬ್ಬ ಪಿಂಗಳನೇ ಸಂಸ್ಕೃತ ಛಂದಸ್ಸನ್ನೂ ಪ್ರಾಕೃತಛಂದಸ್ಸನ್ನೂ ಬರೆದಂತೆ ಪ್ರತೀತಿಯಿದೆ. ಈ ಕವಿ ಈ ಯೆರಡು ಲಕ್ಷಣಗ್ರಂಥಗಳನ್ನೂ ಅನುಸರಿಸಿ

ವಂತೆ ತೋರುತ್ತದೆ. ಆದರೆ ಆನುಪೂರ್ವಿಯಲ್ಲಿಯೂ ವೃತ್ತಗಳ ಹೆಸರಿನಲ್ಲಿಯೂ ಪಿಂಗಳ ಛಂದಸ್ಸಿಗೂ ಇವನ ಗ್ರಂಥಕ್ಕೂ ವ್ಯತ್ಯಾಸಗಳಿವೆ. ವೃತ್ತರತ್ನಾಕರ, ಶ್ರುತ-ಬೋಧ ಎಂಬ ಗ್ರಂಥಗಳಲ್ಲಿರುವಂತೆಯೇ ವೃತ್ತದ ಲಕ್ಷಣಗಳನ್ನು ಹೇಳುವ ಪದ್ಯವೇ ಆ ವೃತ್ತಕ್ಕೆ ಲಕ್ಷ್ಯವಾಗುವಂತೆ ಹೇಳಿದ್ದಾನೆ. ಈ ಗ್ರಂಥವು ಆರು ಆಶ್ವಾಸಗಳಾಗಿ ಭಾಗಿಸಲ್ಪಟ್ಟಿವೆ. ಪೀಠಿಕಾನಂತರ ಸಂಜ್ಞಾಧಿಕಾರ ಮತ್ತು ಸಮವೃತ್ತ ವಿವರಣಗಳಿವೆ. ಪ್ರಾಸಗಳ ವಿಷಯವನ್ನು ಮೊದಲ ಅಧಿಕಾರದಲ್ಲಿ ಹೇಳುವಾಗ ಹೆಚ್ಚಾಗಿ ನೃಪ-ತುಂಗನು ಕೊಟ್ಟ ಉದಾಹರಣ ಪದ್ಯಗಳನ್ನೇ ಎತ್ತಿ ಹೇಳಿದ್ದಾನೆ. ಭಾಷೆಗಳ ವಿಷಯದಲ್ಲಿ—

“ಸಂಸ್ಕೃತಂ ಪ್ರಾಕೃತಮಪಭ್ರಂಶಂ ಪೈಶಾಚಿಕವೆಂಬ ಮೂರುವರೆ ಭಾಷೆಗಳೊಳ್ ಪುಟ್ಟುವ ದ್ರವಿಡಾಂಧ್ರ ಕರ್ಣಾಟಾದಿ ಷಟ್‌ಪಂಚಾಶತ್ ಸರ್ವವಿಷಯದ ಭಾಷಾಜಾತಿಗಳಕ್ಕುಂ” ಎಂದು ಉದ್ಧರಿಸಿದ್ದಾನೆ. ಆನಂತರ ಕನ್ನಡಕ್ಕೆ ವಿಶಿಷ್ಟವಾ ಜಾತಿ”ಗಳನ್ನು —

“ಮದನವತಿಯಕ್ಕರಂ ಚೌ
ಪದಿ ಗೀತಿಕೆ ಯೇಳೆ ತಿವದಿಯುತ್ಸಾಹಂ ಷ।
ಟ್ಪದಿಯಕ್ಕರಿಕೆ ಕರಂ ಚೆ
ಲ್ವೊದವಿದೆ ಛಂದೋವತಂಸಮಬ್ಜದಳಾಕ್ಷೀ ॥”

ಎಂಬ ಪದ್ಯದಲ್ಲಿ ಹೇಳಿದ್ದಾನೆ. ಸಮವೃತ್ತ ವಿವರಣವೆಂಬ ಎರಡನೆಯ ಅಧಿಕಾರದಲ್ಲಿ ಉಕ್ತೆಯಿಂದ ಉತ್ಕೃತಿಯ ವರೆಗೆ 26 ಛಂದಸ್ಸುಗಳನ್ನು ಈ ಕವಿ ವಿವರಿಸಿದ್ದಾನೆ, ಮೂರನೆಯ ಆಶ್ವಾಸದಲ್ಲಿ ಇತರ ಸಮವೃತ್ತಗಳನ್ನೂ ಅರ್ಧಸಮ ಮತ್ತು ವಿಷಮ ವೃತ್ತಗಳನ್ನೂ ಮಾತ್ರಾಛಂದಸ್ಸುಗಳನ್ನೂ ಮಾತ್ರಾಗಣ ಛಂದಸ್ಸುಗಳನ್ನೂ ನಾಗವರ್ಮನು ಚಿತ್ರಿಸಿದ್ದಾನೆ. ನಾಲ್ಕನೆಯ ಆಶ್ವಾಸ (ಅಧಿಕಾರ) ದಲ್ಲಿ ಇತರ ಮಾತ್ರಾಗಣಛಂದಸ್ಸುಗಳನ್ನೂ ಐದನೆಯದರಲ್ಲಿ ಕನ್ನಡ ಮಾತ್ರಾಗಣ ಛಂದಸ್ಸುಗಳನ್ನೂ ಆರನೆಯ ಆಶ್ವಾಸದಲ್ಲಿ ಷಟ್ ಪ್ರತ್ಯಯಗಳನ್ನೂ ವಿವರಿಸಿದ್ದಾನೆ ಕನ್ನಡ ಚಂಪೂಕಾವ್ಯಗಳಲ್ಲಿ ವಿಶೇಷವಾಗಿ ದೊರಕುವ ಷಡ್ವಿಧವೃತ್ತಗಳನ್ನು ಕಂಡು ಹಿಡಿಯುವ ಸುಲಭೋಪಾಯವನ್ನೂ ಈತ ತಿಳಿಸಿದ್ದಾನೆ:

“ಗುರುವೊಂದಾದಿಯೊಳುತ್ಪಲಂ ಗುರು ಮೊದಲ್ಮೂರಾಗೆ ಶಾರ್ದೂಲಮಾ
ಗುರು ನಾಲ್ಕಾಗಿರಲಂತು ಸ್ರಗ್ಧರೆ ಗುರುದ್ವಂದ್ವಂ ಲಘುದ್ವಂದ್ವಮಾ।
ಗಿರೆ ಮತ್ತೇಭಮದೊಂದೆ ನಾಲ್ಕುಲಘುವಿಂದಾ ಚಂಪಕಂ ಮತ್ತಮಾ
ಹರಿಣೀ ವೃತ್ತಮದಕ್ಕುಮಯ್ದುಲಘುವಿಂ ಪಂಕೇಜ ಪತ್ರೇಕ್ಷಣೇ ॥”

ಎಂದಲ್ಲದೆ, ಅಂತ್ಯದಲ್ಲಿ—

"ಗಿರಿಬಾಣಾನಲ ಚಂದ್ರವಿಗ್ರಹಬಿರಾಂಭೋರಾಶಿಯುಗ್ಮಂಗಳಂ
ಬರೆ ದಟ್ಟಿಲ್ ತೆಗೆದಾಗಳಪ್ಪ ಗುಣ ರತ್ನಾದ್ರಿದ್ವಯಂ ದ್ರವ್ಯಘಃ।
ಶರಮೆಂಬೀಕ್ರಮದಿಂದ ಮೋಜಿಯೊಳ್ ಕೇಳ್ ಪಂಜ್ಯ್ರಕ್ರಮಂ ತಪ್ಪದಿಂ
ಶಿರವೋದಲ್ ಸಲೆಗೂಢ ಲೇಖನಮಿದುಂ ಪಂಕೇಜ ಪತ್ರೇಕ್ಷಣೇ॥"

ಎಂದು ನಾಗವರ್ಮನು ಮುಗಿತಾಯಗೊಳಿಸಿದ್ದಾನೆ.

ಈ ಗ್ರಂಥದಿಂದ ಛಂದಃಶಾಸ್ತ್ರದಲ್ಲಿ ವೃತ್ತಗಳ ದೆಸೆಯಿಂದ ಕನ್ನಡ ಪರಿಪುಷ್ಟವಾದುದನ್ನು ಕಾಣುತ್ತೇವೆ. ಚಂಪೂವು ಕನ್ನಡದ ಕೊಡುಗೆಯೆಂದು ಹೇಳಲು ಉದಾಹರಣೆಗಳ ಕಾಲವು ಸಾಕ್ಷಿ. ಜಾತಿಯು ಸಂಸ್ಕೃತಕ್ಕೆ ಹೋದುದಕ್ಕೆ ಉದಾಹರಣೆಯಿದೆ. ಇದೊಂದು ಸಂಸ್ಕೃತದ ರಗಳೆ (ಲಲಿತರಗಳೆ); ಇದಂತಿದೆ :

"ವಿಕಚಕರ್ಣೋತ್ಪಲಸ್ಪರ್ಧಿತರಲೇಕ್ಷಣಾಃ
ಕೇಲಿತಾಲಕ್ವಣತ್ ಕನಕಮಯಕಂಕಣಾಃ।
ಸರಸನಖರಾಜಿಪಿಚ್ಛುರಿತಭುಜಮಂಡಲಾಃ
ಕಾಂಚಿಕೋಲ್ಲಾಸಪಶದರ್ಶಿತೋರುಸ್ಥಲಾಃ ॥
ಸ್ವೈರಸಂಜಲ್ಪನಸ್ಮೇರಬಿಂಬಾಧರಾಃ
ಕರ್ಣಕಂಡೂಮಿಷದ್ವಲಿತಕಕ್ಷಾಂತರಾಃ।
ಪೃಥುನಿತಂಬ ಸ್ಖಲಲ್ಲುಟಹಗತಿವಿಕ್ರಮಾಃ
ಸಹಜಶೃಂಗಾರರಸ ಭರಿತಮುಖವಿಭ್ರಮಾಃ ॥
ಪೀನಕುಚಕುಂಭದರ್ಪತ್ರುಟತ್ ಕಂಚುಕಾಃ
ಶಾಲಿ ವಪ್ರೇಷುಯಾಂತ್ಯಃ ಕ್ಷಣಂ ಗೋಪಿಕಾಃ।
ಪಾಂಥಸಾರ್ಥೇಷು ಸಮುನ್ಮೋತ್ಸವಂ ಕುರ್ವತೇ
ಯತ್ರ ತಾಪಂ ಪ್ರಸಕ್ತಿರ ಮುಪಾತನ್ವತೇ ॥"

ಡಾಕ್ಟರ್ ಎ. ವೆಂಕಟಸುಬ್ಬಯ್ಯನವರ ಗ್ರಂಥದಲ್ಲಿ ಈ ಉದಾಹರಣೆಯಿದೆ. ಇದರಿಂದ ಸಂಸ್ಕೃತಕ್ಕೂ ಕನ್ನಡದ ಕೊಡುಗೆ ಇದೆ ಎಂಬುದು ದೃಢವಾಗುತ್ತದೆ. ಇನ್ನು "ಛಂದೋಂಬುಧಿ"ಯು ಸಂಸ್ಕೃತ ಕೊಟ್ಟ ವೃತ್ತ ದಾನವನ್ನು ವಿಸ್ತಾರವಾಗಿ ಕನ್ನಡದಲ್ಲಿ ವಿವರಿಸಿಬಿಟ್ಟಿದೆ.

ಕ್ರಿ. ಶ. 1500 ರಲ್ಲಿದ್ದ ಈಶ್ವರ ಕವಿಯು "ಕವಿಜಿಹ್ವಾಬಂಧನ" ದಲ್ಲಿ ನಾಲ್ಕುಪರಿಚ್ಛೇದಗಳ ಮೂಲಕ ಗಣಗಳೂ ಪ್ರಾಸಾವಿಗಳೂ ಅಕ್ಷರಗಳೂ ಛಾವ, ಅಲಂಕಾರ, ಕಂದ, ಷಟ್ಪದಿಗಳ ಲಕ್ಷಣಗಳನ್ನು ಹೇಳಿದ್ದು ಸ್ಮರಣೀಯ.

ಕ್ರಿ. ಶ. 1650 ರಲ್ಲಿ ದ್ದಿರಬಹುದಾದ ಗುಣಚಂದ್ರನು ತನ್ನ "ಛಂದಃಸಾರ"ದಲ್ಲಿ (1) ಸಂಜ್ಞಾಪ್ರಕರಣ, (2) ಮಾತ್ರಾಛಂದೋಲಕ್ಷಣ, (3) ಸಮವೃತ್ತ ಪ್ರಕರಣ, (4) ಸಂಕೀರ್ಣ ಪ್ರಕರಣ, (5) ತಾಳವೃತ್ತಾದಿ ಎಂಬ 5 ಅಧ್ಯಾಯಗಳಲ್ಲಿ ಛಂದಃಶಾಸ್ತ್ರವನ್ನು ವಿವರಿಸಿದನು. ಸಂಕೀರ್ಣ ಪ್ರಕರಣದಲ್ಲಿ ದಂಡಕ, ಷೋಡಶಮಾತ್ರಾ-ದ್ವಿಪಾದ, ಷೋಡಶ ಮಾತ್ರಾಚತುಷ್ಪಾದ, ಪಾದಪಾದ ಭಿನ್ನ ಮಾತ್ರ ದ್ವಿಪಾದಿ, ಅರ್ಧಸಮವೃತ್ತ, ವಿಷಮವೃತ್ತ, ಪ್ರಸ್ತಾರ, ನಷ್ಟ, ಉದ್ದಿಷ್ಟ, ಲಗಕ್ರಿಯೆ, ಸಂಖ್ಯಾನ ಎಂಬ ಅಂಶಗಳನ್ನು ವಿವರಿಸಲಾಗಿದೆ. ಎರಡನೆಯ ನಾಗವರ್ಮನ ಗ್ರಂಥಕ್ಕಿಂತಲೂ ಗುಣಚಂದ್ರನ ಗ್ರಂಥ ದೊಡ್ಡದಲ್ಲವಾದರೂ ಕನ್ನಡ ಛಂದೋಗತಿಯ ಪುರಾತನತೆಯ ದೆಸೆಯಿಂದ ನಮ್ಮ ಲಕ್ಷ್ಯವನ್ನು ಸೆಳೆಯುತ್ತದೆ. ಈತ ಹೇಳಿದ—

ಯತಿ

ಗಣನಿಯಮದಿಂದ ಯತಿಯಂ
ಗಣಿಸುವರಾ ಗಣವು ಕೆಡಲು ಯತಿಯುಂ ಕೆಡುಗುಂ ।
ಗಣಯತಿಯಿಲ್ಲದ ಕವಿತೆಯು
ತಣಿಪುವುದೇ ವಿಬುಧತಲೆಯ ನಿಯಮಸ್ಥಳದೊಳ್ ॥

ಪಥ್ಯೆ

ದಳಗಳೊಳಾದ್ಯಂ ಪಾದಂ
ಪೊಳೆಯಲ್ ತ್ರ್ಯಂಶಾಢ್ಯಮಾಗಿರಲ್ ಪಥ್ಯಾಖ್ಯಂ ।
ಅಳವಟ್ಟಿತರಾಂಘ್ರಿಗಳೊಳು
ತಿಳಿಗಣಗಳ ನಿಯಮವಿಲ್ಲ ಬುಧಮತದಿಂದಂ ॥

ತಾಳ

ಧ್ರುವತಾಳ ಮಟ್ಟತಾಳಂ
ತ್ರಿವುಡಂ ರೂಪಕಮುಮಷ್ಟ ಝಂಪೆಯುಮೇಕಂ ।
ತಿವುಗು ಮಿಂತೇಳುವಿಧಂ
ಸೇವಿಸುವರ್ ವೃತ್ತಬಂಧರಚನಗಳಿಂದಂ ॥

ತ್ರಿವುಡೆ

ಪ್ರಾಸಗಳು ಮೂರಾಗಿ ಲೇಸಿನಿಂ ಬರುತಿರಲು
ಮೂಸದೇ ಮಾತ್ರೆಗಳ ತ್ರಿವುಡೆ ತಾನೊಗೆಗುಂ ॥

ಎಂಬ ಅಂಶಗಳು ಕನ್ನಡಕ್ಕಿರುವ ಸಂಸ್ಕೃತ ಸಂಬಂಧವನ್ನು ಎತ್ತಿಹೇಳುತ್ತವೆ.

19 ನೆಯ ಶತಮಾನದಲ್ಲಿದ್ದ ಮುಳಬಾಗಿಲಿನ ಧೋಂಡೋ ನರಸಿಂಹನು ವ್ಯಾಕರಣಕ್ಕೆ ಸಂಬಂಧಿಸಿದ "ಕನ್ನಡ ಕೈಪಿಡಿ" ಮತ್ತು "ನುಡಿಗಟ್ಟು" ಗಳನ್ನಲ್ಲದೆ "ಛಂದಃಸಾರ" ಎಂಬ ಛಂದೋಗ್ರಂಥವನ್ನೂ ಬರೆದನು. ಈ ಯಾಪ್ಲಿಪ್ರಗಳಿಗೂ

ಸಂಸ್ಕೃತ ಪರಂಪರೆ ಅಥವಾ ಸಂಸ್ಕೃತ ಪರಂಪರೆಯನ್ನಾಧರಿಸಿದ ಕನ್ನಡ ಶಾಸ್ತ್ರಪರಂಪರೆಗಳೇ ಆಧಾರವೆಂಬುದು ಸುವಿದಿತ.

ಇತರ ಶಾಸ್ತ್ರಗ್ರಂಥಗಳು

ಸುಮಾರು ಕ್ರಿ. ಶ. 1300 ರಲ್ಲಿದ್ದಿರಬಹುದಾದ ಅಮೃತನಂದಿಯು ವೈದ್ಯ ನಿಘಂಟನ್ನು ಕನ್ನಡದಲ್ಲಿ ಬರೆದಿದ್ದಾನೆ. ಇದರಲ್ಲಿ ಸಂಸ್ಕೃತ ಮೂಲ ಪದಗಳಿಗೆ ಕನ್ನಡದ ಪರ್ಯಾಯ ಪದಗಳಿವೆ. ವೈದ್ಯಶಾಸ್ತ್ರಕ್ಕೆ ಸಂಸ್ಕೃತದಲ್ಲಿ ಮೂಲಗ್ರಂಥಗಳನ್ನು ಚರಕ, ಸುಶ್ರುತ ಮುಂತಾದವರು ಬರೆದು ಬಂದು ಭಾರತೀಯ ವೈದ್ಯಶಾಸ್ತ್ರ ಪರಂಪರೆಯನ್ನು ಆಗಲೇ ನಿರ್ಮಿಸಿದ್ದರಿಂದ ಕನ್ನಡ ವೈದ್ಯಕೀಯ ಗ್ರಂಥಕರ್ತರು ಅದರ ಪ್ರಭಾವಕ್ಕೆ ಒಳಗಾಗದೆ ಉಳಿಯಲಾರರು. 1145 ರಲ್ಲಿದ್ದ ಎರಡನೆಯ ನಾಗವರ್ಮನ "ವಸ್ತುಕೋಶ" ಎಂಬ ನಿಘಂಟನ್ನು ಮನಸ್ಸಿನಲ್ಲಿಟ್ಟುಕೊಂಡು 1398 ರಲ್ಲಿದ್ದ ಅಭಿನವ ಮಂಗರಾಜನು "ಅಭಿನವನಿಘಂಟು" ಅಥವಾ "ಮಂಗಾಭಿಧಾನ" ಎಂಬ ಕನ್ನಡ ನಿಘಂಟನ್ನು ಬರೆದನು. ಇದು ವಾರ್ಧಕ ಷಟ್ಪದಿಯಲ್ಲಿದೆ. ಇದರಲ್ಲಿ ಸ್ವರ್ಗ, ಭೂ, ಪಾತಾಳ, ಸಾಮಾನ್ಯ, ನಾನಾರ್ಥ ಎಂಬ 5 ಕಾಂಡಗಳಿವೆ. ಒಂದೊಂದು ಕಾಂಡವೂ ವರ್ಗಗಳಾಗಿ ಭಾಗಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂಸ್ಕೃತ ಶಬ್ದಗಳಿಗೆ ಕನ್ನಡ ಅರ್ಥಗಳನ್ನು ಕೊಡಲಾಗಿದೆ.

ಸುಮಾರು 1400 ರಲ್ಲಿದ್ದ ಆಯತವರ್ಮನು ತನ್ನ "ಕನ್ನಡ ರತ್ನ ಕರಂಡಕ" ಎಂಬ ತತ್ತ್ವಶಾಸ್ತ್ರಗ್ರಂಥವನ್ನು ಬರೆದನು. ಭಾರತಕ್ಕೆ ವೇದೋಪನಿಷದಾದಿಗಳು ತತ್ತ್ವಶಾಸ್ತ್ರಕ್ಕೆ ಮೂಲ. ಅವುಗಳ ವಿಂಗಡನೆ-ವ್ಯಾಖ್ಯಾನಗಳು ಮುಂದಿನ ತತ್ತ್ವಶಾಸ್ತ್ರ ಗ್ರಂಥಗಳಿಗೆ ಪ್ರೇರಕಗಳಾದವು. ಜೈನ ತತ್ತ್ವಶಾಸ್ತ್ರವು ಈ ಮಾತಿಗೆ ಹೊರತಲ್ಲ. "ಕನ್ನಡ ರತ್ನ ಕರಂಡಕ" ಎಂಬ ಚಂಪೂಗ್ರಂಥದಲ್ಲಿ ಸಮ್ಯಗ್ ದರ್ಶನ ಸ್ವರೂಪ ನಿರೂಪಣ, ಸಮ್ಯಕ್ ಜ್ಞಾನ ಸ್ವರೂಪ ನಿರೂಪಣ, ಸಮ್ಯಗ್ ಚಾರಿತ್ರ ಸ್ವರೂಪ ನಿರೂಪಣ ಎಂದು ಮೂರು ಪರಿಚ್ಛೇದಗಳಿವೆ. ಜೈನ ತತ್ತ್ವಶಾಸ್ತ್ರವು ಸ್ಯಾದ್ವಾದ. ಅದು ಅನೈಕಾಂತಿಕತೆಯ ನಾನಾತ್ವವಾದ. ಮುಕ್ತರೆಲ್ಲರೂ ಅಂದರೆ ಸಂಪೂರ್ಣ ಪರಮಾತ್ಮರು. ಇದು ಅವೈದಿಕ. 1160 ರಲ್ಲಿದ್ದ ಬಸವನು ಷಟ್‌ಸ್ಥಲವಚನ, ಶಿಖಾರತ್ನವಚನ, ಕಾಲಜ್ಞಾನವಚನ, ಮಂತ್ರಗೋಪ್ಯಗಳೆಂಬ ವೀರಶೈವ ಗ್ರಂಥಗಳನ್ನು ಬರೆದರೆ ಚೆನ್ನಬಸವನು ಷಟ್‌ಸ್ಥಲವಚನ, ಕರಣಹಸುಗೆ, ಮಿಶ್ರಾರ್ಪಣ, ಪದ ಮಂತ್ರಗೋಪ್ಯ, ಕಾಲಜ್ಞಾನ, ರುದ್ರಭಾರತದ ಸ್ಥಲ ಕುಳ ಮುಂತಾದ ವೀರಶೈವ ಗ್ರಂಥಗಳನ್ನು ಬರೆದನು. ವೀರಶೈವ ಮತಕ್ಕೆ ಬ್ರಹ್ಮಸೂತ್ರದ ಶ್ರೀಕಂಠ ಮತ್ತು ಶ್ರೀಕರ ಭಾಷ್ಯಗಳು ದೊಡ್ಡ ಆಧಾರ ಗ್ರಂಥಗಳು. ಅದರ ಸಿದ್ಧಾಂತವು ಶಕ್ತಿ ವಿಶಿಷ್ಟಾದ್ವೈತ. ವಿಶಿಷ್ಟಾದ್ವೈತದ ಮೂಲಕಲ್ಪನೆ ರಾಮಾನುಜಾಚಾರ್ಯರದು

ಪ್ರಸಿದ್ಧ. ರಾಮಾನುಜನು ಬ್ರಹ್ಮಸೂತ್ರದ ಶ್ರೀಭಾಷ್ಯ. ಅವರಿವರ ಸಮಕಾಲೀನತೆಯಿಂದ ವಿಶಿಷ್ಟಾದ್ವೈತ (Qualified Monism)ಕಲ್ಪನೆ ವೀರಶೈವ–ಶ್ರೀವೈಷ್ಣವ ಮತ ಧರ್ಮಗಳಿಗೆ ಸಾಮಾನ್ಯವಾದುದು. ಇವೆರಡಕ್ಕೂ ಬ್ರಹ್ಮಸೂತ್ರಾದಿ ಸಂಸ್ಕೃತ ಗ್ರಂಥಗಳು ಸ್ಫೂರ್ತಿಯ ಆಕರಗಳೆಂದೂ ನಿರ್ವಿವಾದವಾಗಿ ಹೇಳಬಹುದು. ಆದರೆ ಅಂತ್ಯಸ್ಥಿತಿಯು ಅದ್ವೈತವಾಗಿರುವುದರಿಂದ ವೀರಶೈವವು "ವೀರಶೈವಾದ್ವೈತ"ವೆಂದೇ ಹೇಳಬಹುದು.

ಸುಮಾರು 1120ರಲ್ಲಿದ್ದ ರಾಜಾದಿತ್ಯನು ಗಣಿತ ಶಾಸ್ತ್ರದ ಗ್ರಂಥಗಳಾದ ವ್ಯವಹಾರಗಣಿತ, ಕ್ಷೇತ್ರಗಣಿತ, ವ್ಯವಹಾರ ರತ್ನ, ಲೀಲಾವತಿ, ಚಿತ್ರಹಸುಗೆ, ಜೈನಗಣಿತ ಸೂತ್ರ ಟೀಕೋದಾಹರಣ ಮೊದಲಾದ ಗಣಿತ ಗ್ರಂಥಗಳನ್ನು ಬರೆದನು. ಭಾರತದಲ್ಲಿ ಗಣಿತ ಶಾಸ್ತ್ರದ ದೊಡ್ಡ ಸಂಸ್ಕೃತ ಗ್ರಂಥವೆಂದು ಭಾಸ್ಕರಾಚಾರ್ಯನ "ಲೀಲಾವತಿ" ಯು ಮೊದಲೇ ಪ್ರಸಿದ್ಧವಾಗಿತ್ತು. ಪ್ರಸ್ತುತ ಕನ್ನಡ ಗಣಿತ ಶಾಸ್ತ್ರಕಾರನ ಗ್ರಂಥರಾಶಿಯಲ್ಲಿ "ಲೀಲಾವತಿ" ಎಂಬ ಗ್ರಂಥವೂ ಇರುವುದರಿಂದ ಸಂಸ್ಕೃತ ಗಣಿತಜ್ಞ ಭಾಸ್ಕರಾಚಾರ್ಯನಿಂದ ಈತನು ಪ್ರಭಾವಿತನಾಗಿರಲೇ ಬೇಕು.

ಕ್ರಿ. ಶ. 1360 ರಲ್ಲಿದ್ದ ಜೈನ ಕವಿ ಮಂಗರಾಜನು "ಖಗೇಂದ್ರ ಮಣಿ ದರ್ಪಣ" ಎಂಬ ವೈದ್ಯಶಾಸ್ತ್ರ ಗ್ರಂಥವನ್ನು ಬರೆದನು. ಇದು ಕಂದ-ವೃತ್ತ-ಗಳಲ್ಲಿರುವ ಕನ್ನಡ ವಿಷ ವೈದ್ಯ ಗ್ರಂಥ ವೈದ್ಯಗ್ರಂಥಗಳನ್ನು ಬರೆದಿರುವ ಆರ್ಯರ ಹಲವು ಮತಗಳಲ್ಲಿ ತನಗೆ ತಿಳಿದವುಗಳನ್ನು ತಾನು ಇದರಲ್ಲಿ ಸಂಗ್ರಹಿಸಿ ಬರೆದೆನೆಂದು ಈತ ಹೇಳಿದ್ದಾನೆ. ಐತಿಹಾಸಿಕವಾಗಿ ಜೈನ ಪರಂಪರೆಯು ವೈದಿಕ ಪರಂಪರೆಗೆ ಉತ್ತರ ಕಾಲೀನ. ಅದು ಕನ್ನಡವಲ್ಲದೆ ಸಂಸ್ಕೃತ ಗ್ರಂಥಗಳಿಂದಲೂ ತುಂಬಿದೆ. ಆದುದರಿಂದಲೇ ಈತನು—

ಪರಹಿತಪರರಾರ್ಯರಾಚಾರ್ಯರೊಳ್ ತಮ್ಮ ಧೀಮಂ
ದರಸುಮತಿಗಳಾತಂ ವೈದ್ಯಶಾಸ್ತ್ರಾಮೃತಂ ತದ್।
ವರಮುನಿಪತಿಯುಕ್ತ್ಯಾ ಪೂಜ್ಯಪಾದೋಕ್ತಿಯೊಳ್ ಸ್ಥಾ
ಪರಿಸಿದುದರಮಂ ಸಂಕ್ಷೇಪದಿಂದೊಪ್ಪೆ ಪೇಳ್ದೆಂ॥

ಎಂದು ತನ್ನ ಗ್ರಂಥ ಋಣದ ಒಂದಂಶವನ್ನು ಹೇಳಿಕೊಂಡಿದ್ದಾನೆ.

ಶ್ರೀಗೊಟ್ಟಶಿವಮಾರನೆಂಬ ಗಂಗರಾಜನು ಸುಮಾರು ಕ್ರಿ. ಶ. 800 ರಲ್ಲಿ ಗಜಶಾಸ್ತ್ರ (Elephantology)ವೊಂದನ್ನು ಬರೆದ ಬಗ್ಗೆ ನಗರದ ಶಾಸನವೊಂದರಿಂದ ತಿಳಿದು ಬರುತ್ತದೆ. ಗಜಶಾಸ್ತ್ರ-ಅಶ್ವಶಾಸ್ತ್ರಗಳು ಸಂಸ್ಕೃತದಲ್ಲಿ ಮೊದಲೇ ಪ್ರಸಿದ್ಧವಾಗಿರುವುದರಿಂದ ಕನ್ನಡದ ಶಾಸ್ತ್ರಕಾರರು ಅವುಗಳನ್ನು ಅವಲಂಬಿಸಿರುವುದು ನಿಸ್ಸಂದೇಹ. ಅದೇ ಮಾದರಿಗೆ ಕೀರ್ತಿವರ್ಮನು ಸುಮಾರು 1125ರಲ್ಲಿ ಗೋವೈದ್ಯ,

(Veterinary Science)ವನ್ನು ಬರೆದನು. ಅದು ಅಸಮಗ್ರವೂ ಅಶುದ್ಧವೂ ಆದ ಪ್ರತಿಯಲ್ಲಿದೆ. ಗದ್ಯದಲ್ಲಿ ಈ ಗ್ರಂಥವು ಗೋಗಳ ವ್ಯಾಧಿಗೆ ಔಷಧಗಳನ್ನೂ ಯಂತ್ರಗಳನ್ನೂ ಬರೆಹಾಕುವ ಕ್ರಮಗಳನ್ನೂ ವಿಸ್ತಾರವಾಗಿ ಬಣ್ಣಿಸುತ್ತದೆ. ಇದರ ಆಕರವು ನಿರ್ದಿಷ್ಟವಾಗಿಲ್ಲ--ಸಂಸ್ಕೃತ ಪುರಾಣಗಳಲ್ಲಿ ಯಾವುದಾದರೊಂದರ ಭಾಗವಾಗಿರಬಹುದೆಂಬುದು ಊಹೆ. ಸಂಸ್ಕೃತದ ಅಷ್ಟಾದಶ ಮಹಾಪುರಾಣಗಳೂ ಶತೋತ್ತರ ಉಪಪುರಾಣಗಳೂ ಕ್ರಿ. ಶ. ಮೂರನೆಯ ಶತಮಾನದಿಂದಲೇ ವಿಶ್ವಕೋಶಗಳೆನ್ನಿಸಿ ಮೆರೆಯುತ್ತ ಬಂದಿರುವುದರಿಂದ ಮತ್ತು ಭಾರತದ ಎಲ್ಲೆಡೆಯೂ ವ್ಯಾಪಿಸುತ್ತ ಹೋದುದರಿಂದ ಸಂಸ್ಕೃತೇತರ ಗ್ರಂಥಕರ್ತರೆಲ್ಲರೂ ಭಾರತದಲ್ಲಿ ಅವುಗಳಿಂದ ಒಂದಲ್ಲ ಒಂದು ವಿಧದಿಂದ ಸಹಾಯವನ್ನು ಪಡೆದೇ ಗಜಾಶ್ವ-ಗೋವೈದ್ಯ, ಮಾನವ ವೈದ್ಯ, ಗಣಿತಶಾಸ್ತ್ರ, ಜ್ಯೋತಿಃಶಾಸ್ತ್ರ, ವ್ಯಾಕರಣ ಛಂದೋಲಂಕಾರಾದಿಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ನೀತಿಶಾಸ್ತ್ರ, ತತ್ವಶಾಸ್ತ್ರಗಳನ್ನು ರಚಿಸಿರುವುದು ಅವಿವಾದಾಸ್ಪದ. ಸಂಸ್ಕೃತ ಗ್ರಂಥ ಕರ್ತರಾದರೂ ಭಾರತದ ನಾನಾ ಪ್ರದೇಶಗಳಿಗೆ ಸೇರಿದವರಾಗಿದ್ದಾರೆ. ಎಲ್ಲರೂ ಯಾವುದಾದರೂ ಒಂದೇ ಒಂದು ಪ್ರಾಂತ ಅಥವಾ ಪ್ರದೇಶಕ್ಕೆ ಸೇರಿದವರಾಗಿರಲಿಲ್ಲ. ಆದುದರಿಂದಲೇ ಸಂಸ್ಕೃತವು ಅನಾದಿಯಿಂದಲೂ ಭಾರತದ ಅಂತ:ಪ್ರಾಂತೀಯ ಭಾಷೆಯಾಗಿತ್ತು. ಅವರ ಸ್ಥಾನವನ್ನು ಇಂಗ್ಲೀಷು ಅನಂತರ ಕಸಿದುಕೊಂಡಿತು. ಹಿಂದಿ ಈಗ ಇಂಗ್ಲೀಷಿನ ಅಂತಃಪ್ರಾಂತೀಯತೆಯನ್ನು ಕಸಿದುಕೊಳ್ಳಲು ಯತ್ನಿಸುತ್ತಿದೆ. ಆದರೆ ಈ ಇಂಗ್ಲೀಷ-ಹಿಂದಿಗಳ ಪರ ಮತ್ತು ವಿರೋಧಿಗಳ ಪ್ರಚಾರವು ಕಾಲಾಂತರದಲ್ಲಿ ಪರಸ್ಪರ ಪ್ರತಿಹತಗಳಿಂದ ನಿಷ್ಕ್ರಿಯವಾಗಿ ಸಂಸ್ಕೃತಕ್ಕೇ ಮೊದಲಿನ ಸ್ಥಾನವನ್ನು ತಂದುಕೊಡುವುದು ಅತ್ಯಂತ ಸಂಭವ.

ಕ್ರಿ. ಶ. 1049 ರಲ್ಲಿದ್ದ ಶ್ರೀಧರಾಚಾರ್ಯನು "ಜಾತಕತಿಲಕ" ಎಂಬ ಜ್ಯೋತಿಃಶಾಸ್ತ್ರವನ್ನು ಬರೆದನು. ಅದರಲ್ಲಿರುವವು ಕಂದಗಳು ಮತ್ತು ವೃತ್ತಗಳು. ಸಂಸ್ಕೃತದಲ್ಲಿ ವರಾಹ ಮಿಹಿರಾದಿಗಳು ಹಿಂದೆಯೇ ಜ್ಯೋತಿಃಶಾಸ್ತ್ರಗಳನ್ನು ಬರೆದಿದ್ದರು. ಶ್ರೀಧರಾಚಾರ್ಯನು—

ಅಮಿತಾರ್ಥಂ ಸಕಲಾಚಾ
ರ್ಯಮತಾಂತ:ಸಾರಮತಿಗಭೀರಂ ಹೃದಯಂ।
ಗಮಮನ್ಯಶಾಸ್ತ್ರನಿರಪೇ
ಕ್ಷಮೆಂಬಿನಂ ಖ್ಯಾತಮಾಯ್ತು ಜಾತಕತಿಲಕಂ॥

ಎಂದು ಪೂರ್ವಾಚಾರ್ಯರೆಲ್ಲರ ನೆರವನ್ನೂ ಪಡೆದೆನೆಂದಿದ್ದಾನೆ, ಇದರಲ್ಲಿ ಸಂಜ್ಞೆ ಬಲಾಬಲ, ಗರ್ಭ, ಜನ್ಮ, ತಿರ್ಯಗ್ಜನ್ಮ, ಅರಿಷ್ಟ, ಅರಿಷ್ಟಭಂಗ, ಆಯುರ್ದಾಯ,

ದಶಾಂತರ್ವರ್ಗ, ಅಷ್ಟಕವರ್ಗ, ಜೀವ, ರಾಜಯೋಗ. ರಾಶಿ, ಲಗ್ನಭಾವ, ದ್ರೇಕ್ಕಾಣ, ದೃಷ್ಟ, ಅರಿಷ್ಟ. ಸ್ತ್ರೀಜಾತಕ, ನಿರ್ಯಾಣ. ನಷ್ಟಜಾತಕ, ನಾಭಿಸಂಯೋಗ, ಚಂದ್ರಯೋಗ, ದ್ವಿತ್ರಿಯೋಗ, ದೀಕ್ಷಾಯೋಗ—ಎಂಬ 24 ಅಧಿಕಾರಗಳಿವೆ. ಈ ವಿಷಯಗಳೆಲ್ಲ ಕರ್ನಾಟಕದ ಜೋಯಿಸರೆಲ್ಲರಿಗೂ ಸಂಸ್ಕೃತ ಮೂಲಗಳಿಂದ ಸುಪರಿಚಿತವಾದಂಥವುಗಳು.

ಸುಮಾರು 1400ರಲ್ಲಿದ್ದ ಅಭಿನವಚಂದ್ರನು "ಅಶ್ವಶಾಸ್ತ್ರ" ಎಂಬ ಗ್ರಂಥವನ್ನು ಬರೆದನು. ಈತನು ತನಗಿಂತ ಹಿಂದಿದ್ದ ಅಶ್ವಶಾಸ್ತ್ರಕಾರರಲ್ಲಿಯ ಕೆಲವರ ಮತವನ್ನು ಪೊಸಗನ್ನಡದಿಂದ ಹೇಳುತ್ತೇನೆಂದು ಉದ್ಗರಿಸಿದ್ದಾನೆ:

> "ಅನುಪಮಹಯಶಾಸ್ತ್ರಾಗಮ
> ವನನಿಧಿಯೊಳ್ ಸಿಂಹದತ್ತಕೃತಿಲಕ್ಷಣಮಂ।
> ದಿನಕರತನಯನ ರೇವಂ
> ತನ ಮತಮಂ ಪೇಳ್ವೆನೆಸೆಯೆ ಪೊಸಗನ್ನಡದಿಂ॥"

ಇದರಲ್ಲಿ 16 ಅಧ್ಯಾಯಗಳಿವೆ: 888 ಪದ್ಯಗಳಿವೆ: ಪದ್ಯಗಳು ಹೆಚ್ಚಾಗಿ ಕಂದವೃತ್ತಂದದಲ್ಲಿವೆ. ಇದರಲ್ಲಿ ಸರ್ವಾಂಗ ಪರೀಕ್ಷೆ. ವರ್ಣ. ಸುಳಿ. ಹಲ್ಲಿನಿಂದ ವಯಸ್ಸನ್ನು ನಿರ್ಣಯಿಸುವುದು, ದಯಮಯೋಲಕ್ಷಣ, ಪೋಷಣವಿಧಿ, ಚಿಕಿತ್ಸೆ ಮೊದಲಾದ ವಿಷಯಗಳನ್ನು ಹೇಳಲಾಗಿದೆ.

ಕ್ರಿ.ಶ. 1200 ರಲ್ಲಿದ್ದ ದೇವೇಂದ್ರಮುನಿಯು ಬಾಲಗ್ರಹ ಚಿಕಿತ್ಸೆಯನ್ನು ಬರೆದನು. 1250 ರಲ್ಲಿದ್ದ ಹರಭಕ್ತನು ಕನ್ನಡದಲ್ಲಿ ವೇದಭಾಷ್ಯವನ್ನು ಬರೆದನೆಂದು ಚೆನ್ನಬಸವ ಪುರಾಣದಿಂದ ತಿಳಿದು ಬರುತ್ತದೆ. ಆದರೆ ಅದೀಗ ಉಪಲಬ್ಧವಾಗಿಲ್ಲ. "ಸೂಪಶಾಸ್ತ್ರ" ಎಂಬ ಪಾಕಶಾಸ್ತ್ರಗ್ರಂಥವನ್ನು ಜಯಬಂಧುನಂದನನು ಕ್ರಿ.ಶ. 800 ರಲ್ಲಿ ಕನ್ನಡದಲ್ಲಿ ಬರೆದನು. ಅದೊಂದು ಚಂಪೂಗ್ರಂಥ. ಇದರ ಆಕರ ತಿಳಿಯದು. ಬಹುಶಃ ಇದನ್ನು ನಾವು ಕನ್ನಡದ ಕೊಡಿಗೆ ಎಂದು ಹೇಳಬಹುದಾಗಿದೆ.

1623 ರಲ್ಲಿದ್ದ ನೋಸಲೆ ರೇವಣಾಚಾರ್ಯನು ಶಾರೀರಪ್ರಕಾಶಿಕೆ, ಅಂತಃಕರಣ ಪ್ರಕಾಶಿಕೆ, ಸ್ವಸ್ವರೂಪಪ್ರಕಾಶಿಕೆ, ಪರಮಾತ್ಮಪ್ರಕಾಶಿಕೆ, ನಿಜದೀಪ್ತಿಪ್ರಕಾಶಿಕೆ ಎಂಬ 5 ವೀರಶೈವ ತತ್ತ್ವಜ್ಞಾನದ ಗ್ರಂಥಗಳನ್ನು ಬರೆದನು. ಇವು ಒಂದೇ ಗ್ರಂಥದ 5 ಭಾಗಗಳಾಗಿರಬಹುದೆಂದು ಕವಿಚರಿತಕಾರರು ಹೇಳಿದ್ದಾರೆ. ಕ್ರಿ. ಶ. ಒಂದನೆಯ ಶತಮಾನದಿಂದ ಉತ್ತರ–ದಕ್ಷಿಣ ಭಾರತಗಳಲ್ಲಿ ಶೈವ ಮತವು ನಾನಾತತ್ತ್ವಭೇದಗಳಿಂದ ಬೆಳೆಯುತ್ತ ಬಂದು ಕರ್ನಾಟಕದಲ್ಲಿ ಕೊನೆಯದಾಗಿ ಸ್ಪಷ್ಟರೂಪ ತಾಳಿತು. "ಶ್ರೀಮದ್ವೇದವೇದ ಶಿರಃ ಶಿವಾಗಮ ಪುಣ್ಯ ಪುರಾಣ ಪ್ರಭೃತಿ ಪ್ರಭೂತ ಪ್ರಥಿತ ಪ್ರಮಥ

ಸಂಗೀತ ಗೀತಾನವದ್ಯ ಶ್ರೀ ವೀರಶೈವ ಷಟ್‌ಸ್ಥಲ ಶಿವಯೋಗ ಶಿವಾದ್ವೈತ ಸತ್-ಪದ ಪ್ರತಿಷ್ಠಾಪನಾಚಾರ್ಯವರ್ಯ" ಎಂಬ ಬಿರುದು ಇವನಿಗಿರುವುದರಿಂದ ಇವನು ವೈದಿಕ ವಾಙ್ಮಯವನ್ನು ಚೆನ್ನಾಗಿ ಓದಿರಬೇಕು. ಅಲ್ಲಮಪ್ರಭುವಿನಂತೆಯೇ "ವಿಶಿಷ್ಟ" ಇಲ್ಲದ ಶಿವಾದ್ವೈತವನ್ನು ಇವನು ಪ್ರತಿಪಾದಿಸಿರುವುದು ಸ್ಪಷ್ಟ.

ಮೇಲೆ ಹೇಳಿದ ಗ್ರಂಥದಷ್ಟೇ ಗಣ್ಯವಾದ ಇನ್ನೊಂದು ಕನ್ನಡ ತತ್ವಶಾಸ್ತ್ರ-ಗ್ರಂಥವೆಂದರೆ, ರಂಗನಾಥ ಅಥವಾ ಮಹಾಲಿಂಗರಂಗ ಕವಿಯ "ಅನುಭವಾಮೃತ". ಇದರ ಕಾಲ **1675**. ಇದು ಭಾಮಿನೀ ಷಟ್‌ಪದಿಯಲ್ಲಿದೆ. ಅಧ್ಯಾಯಗಳು **11**, ಪದ್ಯಗಳು **801**. ಇದರ ಪ್ರತಿಪಾದನೆಯ ವಿಷಯಗಳೆಂದರೆ, ಅಧಿಕಾರನಿರ್ಣಯ, ವೈರಾಗ್ಯ, ತ್ವಂಪದ ನಿರ್ಣಯ, ತತ್‌ಪದನಿರ್ಣಯ, ಅಸಿಪದನಿರ್ಣಯ, ಸಪ್ತಭೂಮಿಕೆಗಳು, ಪರಮಾತ್ಮಪದನಿರ್ಣಯ, ಮಾಯಾಮಿಥ್ಯಾತ್ವ, ಜೀವತ್ರಯ, ಜೀವನ್ಮುಕ್ತಿ, ನಿರ್ಗುಣಾರಾಧನೆಗಳು. ಸಂಸ್ಕೃತದಲ್ಲಿ ಈ ವಿಷಯಗಳ ಬಗ್ಗೆ ಅನೇಕಾನೇಕ ಪಾಂಡಿತ್ಯ-ಪೂರ್ಣವಾದ ಗ್ರಂಥಗಳಿವೆ. ಆ ಮೊಸರಿನ ಸಮುದ್ರವನ್ನು ಕಡೆದು ಈ ಕವಿಯು ಇಂಥ ಬೆಣ್ಣೆಯ ಮುದ್ದೆಯನ್ನು ತೆಗೆದದ್ದು ಸರ್ವಥಾ ಶ್ಲಾಘ್ಯ. ಇವನು ಕಠಿನವಾದ ಅದ್ವೈತವನ್ನು ಹೀಗೆ ತಿಳಿಗನ್ನಡ ಭಾಮಿನಿಯಲ್ಲಿ ಸುಲಲಿತವಾಗಿ ಬರೆದದ್ದು ತತ್ವ-ಶಾಸ್ತ್ರಗ್ರಂಥರಾಶಿಗೇ ಒಂದು ಒಳ್ಳೆಯ ಕಾಣಿಕೆ. ಈತನ ಈ ಪದ್ಯವು ಸಾರ್ಥಕ:

ಸುಲಿದ ಬಾಳೆಯ ಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ
ಇಳಿಸಿದುಷ್ಣದ ಹಾಲಿನಂದದಿ ಸುಲಭವಾಗಿರ್ದ।
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿ ಕೊಂಡೊಡೆ ಸಾಲದೇ ಸಂಸ್ಕೃತದೊಳಿನ್ನೇನು॥

ಗಡುಚಾದ ಸಂಸ್ಕೃತ ಗ್ರಂಥಗಳಲ್ಲಿ ಹೇಳಿದ ವೇದಾಂತೇತರ ವಿಷಯಗಳನ್ನೂ ಇಷ್ಟೇ ಲಲಿತವಾಗಿ ಹೇಳ ಹೊರಡಲು ಇನ್ನೂ ಅವಕಾಶವಿದೆ. ಏಕೆಂದರೆ ರಾಜ್ಯದ ಎಲ್ಲ ವ್ಯವಹಾರಗಳನ್ನೂ ಈಗ ಕನ್ನಡದಲ್ಲಿಯೇ ಮಾಡಲು ತಳಪಾಯವಿಕ್ಕಲಾಗಿದೆ. ಅನಿವಾರ್ಯವಾದ ಪಾರಿಭಾಷಿಕಗಳಿಗೆ ಸಂಸ್ಕೃತವು ಮೊದಲ ಆಕರ. ಕೇಂದ್ರ ಸರಕಾರ ಹಿಂದೆಯೇ ಹೊರಡಿಸಿದ್ದ ಒಂದು ಪರಿಪತ್ರದಲ್ಲಿ ಪಾರಿಭಾಷಿಕ ಪದಗಳನ್ನು ನಿರ್ಮಿಸುವಾಗ ಮತ್ತು ಬಳಸುವಾಗ ನೂರಕ್ಕೆ 60 ರಷ್ಟು ಸಂಸ್ಕೃತ ಆಕರಗಳಿಂದ, ನೂರಕ್ಕೆ 30 ರಷ್ಟು ಇಂದಿನ ಪ್ರಸಿದ್ಧ ಪ್ರಾದೇಶಿಕ ಭಾಷೆಗಳಿಂದ ಮತ್ತು ನೂರಕ್ಕೆ 10 ರಷ್ಟು ಇಂಗ್ಲೀಷಿನಿಂದ ತೆಗೆದುಕೊಳ್ಳಬೇಕೆಂದು ವಿಧಿಸಿದ್ದು ನ್ಯಾಯವೆಂದು ಸಂಸ್ಕೃತ–ಕನ್ನಡಗಳ ಸಂಬಂಧವನ್ನು ರಂಗನಾಥಕವಿಯಂತೆ ತಿಳಿದ ಯಾರೂ ಹೇಳ-ದಿರಲಾರರು. ಸಂಸ್ಕೃತ ಮೂಲವನ್ನು ಓದುವ ಅಗತ್ಯವಿಲ್ಲದಷ್ಟು ಸ್ಪಷ್ಟವಾಗಿ,

ಮೂಲಕ್ಕೆ ದ್ರೋಹ ಬಗೆಯುವ ಕನ್ನಡದಲ್ಲಿ ಶಾಸ್ತ್ರಗ್ರಂಥಗಳು ಹೊರಬೀಳಲು ಇದು ಸದವಕಾಶ. ಇಂಥ ಪ್ರಯತ್ನದಲ್ಲಿ ಗಣ್ಯ ಹೆಸರೆಂದರೆ ಶ್ರೀ ಎಸ್. ವಿ. ಪರಮೇಶ್ವರ ಭಟ್ಟರದ್ದು. ಅವರ ಸೇವೆ ಕಾವ್ಯಪ್ರಪಂಚದ್ದು. ಶಾಸ್ತ್ರಪ್ರಪಂಚಕ್ಕೆ ಅಂಥ ಸೇವೆ ಸಲ್ಲಿಸುವವರು ಡಾಕ್ಟರ್ ಕೆ. ಕೃಷ್ಣಮೂರ್ತಿಗಳನ್ನು ನಿದರ್ಶನವನ್ನಾಗಿ ತೆಗೆದುಕೊಳ್ಳಬಹುದು.

ಕ್ರಿ. ಶ. 1450 ರಲ್ಲಿದ್ದ ಪರಂಜ್ಯೋತಿಯತಿಯು "ಅನುಭವ ಮುಕುರ" ಎಂಬ ತತ್ತ್ವಶಾಸ್ತ್ರ ಗ್ರಂಥವನ್ನು ತ್ರಿಪದಿಯಲ್ಲಿ ಬರೆದನು. ಇದರಲ್ಲಿ 16 ಸಂಧಿಗಳೂ 102 ಸೂತ್ರಗಳೂ 995 ತ್ರಿಪದಿಗಳೂ ಇವೆ. ಈ ಯತಿಯು "ವಿದ್ಯಾಶ್ರಮ" ಎಂಬ ಗುರುವಿನ ಶಿಷ್ಯ. ಈ ಗ್ರಂಥವು ಅದ್ವೈತವೇದಾಂತವನ್ನು ಸುಲಲಿತವಾಗಿ ಪ್ರತಿಪಾದಿಸುತ್ತದೆ. ಇದರ ಆಕರಗಳೂ ಸಂಸ್ಕೃತದಲ್ಲಿರುವ ಅದ್ವೈತ ವಾಙ್ಮಯ ಎಂಬುದನ್ನು ಹೊಸದಾಗಿ ಹೇಳಬೇಕಾಗಿಲ್ಲ.

ಕ್ರಿ. ಶ. 1430 ರಲ್ಲಿದ್ದ ಮಗ್ಗೆಯ ಮಾಯಿದೇವನು ಅನುಭವ ಸೂತ್ರ, ಪ್ರಭುಗೀತೆ, ಏಕೋತ್ತರಶತಸ್ಥಲ, ಷಟ್‌ಸ್ಥಲಗದ್ಯ, ಶತಕತ್ರಯ, ಮಗ್ಗೆಯ ಮಾಯಿದೇವ ವಚನ ಎಂಬ 6 ತತ್ತ್ವ ಗ್ರಂಥಗಳನ್ನು ರಚಿಸಿದನು. ಈ ಗ್ರಂಥಗಳು ವೀರಶೈವ ಸಿದ್ಧಾಂತಕ್ಕೆ ಅನುಸಾರವಾಗಿ ಜ್ಞಾನ, ಭಕ್ತಿ, ವೈರಾಗ್ಯಗಳನ್ನು ಬೋಧಿಸುತ್ತವೆ. ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ತ್ರಿಮೂರ್ತಿಗಳ ಕಲ್ಪನೆಗೆ ಉಪಲಬ್ಧವಾಗಿರುವ ಗ್ರಂಥಗಳು ಸಂಸ್ಕೃತ ಪುರಾಣಗಳು. ಹರಿಪಾರಮ್ಯ–ಹರಪಾರಮ್ಯಗಳಲ್ಲಿ ಒಂದನ್ನು ಹಿಡಿದು ಹರಿಯೇ ಪರಬ್ರಹ್ಮ ಅಥವಾ ಹರನೇ ಪರಬ್ರಹ್ಮ ಎಂಬ ಮತಗಳು ಬೆಳೆದದ್ದು ಸಹಜವಿದೆ. ಶಿವೈಕ್ಯವನ್ನು ಪರಮುಕ್ತಿ ಎಂದು ಹೇಳುವ ವೀರಶೈವ ಸಿದ್ಧಾಂತವು ಪರಬ್ರಹ್ಮೈಕ್ಯವೇ ಮುಕ್ತಿ ಎಂಬ ಅದ್ವೈತ ಕಲ್ಪನೆಗೆ ಸರಿಸಮಾನವಾಗಿದೆ. ಶಕ್ತಿ ವಿಶಿಷ್ಟಾದ್ವೈತವೆಂದು ಅದನ್ನು ಕರೆದಾಗಲೂ "ಶಕ್ತಿ-ಶಕ್ತಿಮತೋರಭೇದಃ" ಎಂಬ ನ್ಯಾಯದ ಪ್ರಕಾರ ಅತ್ಯಂತಿಕವಾಗಿ ಅದು ಅದ್ವೈತವೇ ಆಗುವುದು. ಅದರ ಅದ್ವೈತವು "ಜೀವನ್ಮುಕ್ತಿ" ಯೊಂದಿಗೆ ವಿಶಿಷ್ಟ. ಮರಣೋತ್ತರ ಮುಕ್ತಿಯು ಸರ್ವಸಾಧಾರಣ. ಮರಣೋತ್ತರ ಮುಕ್ತಿಯಲ್ಲಿಯೂ ಸಾಯುಜ್ಯ ಅಥವಾ ಪರಮ ಸತ್ಯವಾದ ಪರಬ್ರಹ್ಮದೊಡನೆ ಅನಂತ ಐಕ್ಯವು ಮತ್ತು ಪೂರ್ಣವಾದ ಐಕ್ಯವು ಅದ್ವೈತಕ್ಕೆ ಸಮ್ಮತ.

ಕ್ರಿ. ಶ. ಸುಮಾರು **1700** ರಲ್ಲಿದ್ದ ಶ್ರೀ ತಿರುಮಲಾಚಾರ್ಯರು ಬರೆದ "ತತ್ತ್ವತ್ರಯ ವಿವರಣ" ಎಂಬ ತತ್ತ್ವಶಾಸ್ತ್ರವು ಚಿತ್, ಅಚಿತ್ ಮತ್ತು ಈಶ್ವರ ಎಂಬ ಮೂರು ವಿಶಿಷ್ಟಾದ್ವೈತ ತತ್ತ್ವವಿವೇಕವನ್ನು ಪ್ರತಿಪಾದಿಸುವ ಸ್ವತಂತ್ರ ಗ್ರಂಥ. ಇದರ ಸಂಸ್ಕೃತ ಮೂಲವು ರಾಮಾನುಜನ ಶ್ರೀಭಾಷ್ಯ. ಪರಬ್ರಹ್ಮ ಸಾಮೀಪ್ಯವೇ ಇದರ ಮುಕ್ತಿಯ ಲಕ್ಷಣ. ಜೈನರ ಮುಕ್ತರೆಲ್ಲರೂ ಪರಮೇಶ್ವರರೇ ಎಂದು ಹೇಳುವುದನ್ನಿದು

ಹೋಲುತ್ತದೆ. ವೇದಾಂತದ ಸಂಸ್ಕೃತ ಗ್ರಂಥಗಳೊಡನಿರುವ ಕನ್ನಡ ಸಂಬಂಧಕ್ಕೆ ಇದೂ ಒಂದು ಉದಾಹರಣೆ.

ಕ್ರಿ. ಶ. 1700 ರಲ್ಲೀ ಇದ್ದ ಸಪ್ಪಣ್ಣನು "ಕೈವಲ್ಯ ಕಲ್ಪವಲ್ಲರಿ" ಎಂಬ ವೀರಶೈವ ಸಿದ್ಧಾಂತ ಗ್ರಂಥವನ್ನು ಬರೆದನು. ಇದರಲ್ಲಿ 5 ಸ್ಥಲಗಳೂ, 177 ವಚನ (ಗದ್ಯ) ಸಂಪುಟಗಳೂ 710 ವಿರಳ ಪದಗಳೂ ಇವೆ. ಇದಕ್ಕೆ "ಸರ್ವಭೂಷಣ" ಎಂಬ ಹೆಸರೂ ಇದ್ದಂತಿದೆ. ಈ ಗ್ರಂಥವಿಡೀ ಹಾಡಿನ ರೂಪದಲ್ಲಿದೆ. ಇದೂ ತಾತ್ವಿಕ ಕಲ್ಪನೆ (ideas)ಗಳಲ್ಲಿ ಸಂಸ್ಕೃತದೊಡನೆ ಸಂಬಂಧಿಸಿರುವುದಕ್ಕೆ ನಿದರ್ಶನ. ವೀರಶೈವಾಗಮಗಳೆಲ್ಲವೂ ಸಂಸ್ಕೃತದಲ್ಲಿರುವದು ಸುಪ್ರಸಿದ್ಧ. ನಿಗಮ (ವೇದವಾಙ್ಮಯ) ದಿಂದ ಭಿನ್ನವಾದ ತಾತ್ವಿಕಗ್ರಂಥಗಳಲ್ಲಿ ಆಗಮಗಳು ಗಣ್ಯ. ಈ ಇಬ್ಬಗೆಯ ಗ್ರಂಥಗಳೂ ಮೂಲತಃ ಸಂಸ್ಕೃತಭಾಷೆಯಲ್ಲಿವೆ.

ಕ್ರಿ. ಶ 1448 ರಲ್ಲಿ ವಿಜಯಣ್ಣನು "ದ್ವಾದಶಾನುಪ್ರೇಕ್ಷೆ" ಎಂಬ ಜೈನಸಿದ್ಧಾಂತ ಗ್ರಂಥವನ್ನು ಸಾಂಗತ್ಯದಲ್ಲಿ ರಚಿಸಿದನು. ಇದಕ್ಕೆ 12 ಪರಿಚ್ಛೇದಗಳೂ 1448 ಪದ್ಯಗಳೂ ಇವೆ. ಇದರಲ್ಲಿ ಅಧ್ರುವಾನುಪ್ರೇಕ್ಷೆ, ಶರಣಾನುಪ್ರೇಕ್ಷೆ, ಏಕತ್ವಾನುಪ್ರೇಕ್ಷೆ, ಅನ್ಯತ್ವಾನುಪ್ರೇಕ್ಷೆ, ಸಂಸಾರಾನುಪ್ರೇಕ್ಷೆ, ಲೋಕಾನುಪ್ರೇಕ್ಷೆ, ಅಶುಚಿತ್ವಾನುಪ್ರೇಕ್ಷೆ, ಆಸ್ರವಾನುಪ್ರೇಕ್ಷೆ, ಸಂವರಾನುಪ್ರೇಕ್ಷೆ, ನಿರ್ಜರಾನುಪ್ರೇಕ್ಷೆ, ಧರ್ಮಾನುಪ್ರೇಕ್ಷೆ, ಬೋಧಿದುರ್ಲಭಾನುಪ್ರೇಕ್ಷೆ–ಎಂಬ 12 ಅನುಪ್ರೇಕ್ಷೆಗಳು ಅಥವಾ ಚಿಂತನೆಗಳು ನಿರೂಪಿಸಲ್ಪಟ್ಟಿವೆ. ಈ ಚಿಂತನೆಗಳ ಅಂತ್ಯವು ಜೈನ ಮುಕ್ತಿ ವಿವೇಕದಲ್ಲಿದೆ. ಈ ತತ್ವ ಶಾಸ್ತ್ರಕಾರನು ಪಾರ್ಶ್ವಕೀರ್ತಿಯ ಶಿಷ್ಯ. ಜೈನತತ್ವ ಗ್ರಂಥಗಳಲ್ಲಿ ಜೈನರೇ ಹಿಂದೆ ಬರೆದ ಸಂಸ್ಕೃತ ತತ್ವಗ್ರಂಥಗಳಲ್ಲಿಯ ಅಂಶಗಳನ್ನು ಕನ್ನಡ ಭಾಷೆಯಲ್ಲಿ ತಾತ್ಪರ್ಯವಾಗಿ ಕಾಣಬಹುದು ಅಥವಾ ವಿವರಣೆಯಾಗಿ ಕಾಣಬಹುದು.

19 ನೆಯ ಶತಮಾನದಲ್ಲಿದ್ದ ಶಿವರಾಮ ಶಾಸ್ತ್ರಿಯು ವೇದಾಂತ ಮುಕ್ತಿ ಮಾರ್ಗಪ್ರದೀಪಿಕೆ, ಬ್ರಹ್ಮಾನಂದ ಬೋಧೆ, ಶಂಕರಾನಂದತತ್ವ – ಎಂಬ ಅದ್ವೈತ ಗ್ರಂಥಗಳನ್ನು ಕನ್ನಡದಲ್ಲಿ ಬರೆದರೆ, ಎಚ್.ವಿ. ನಂಜುಂಡಯ್ಯನು ಕನ್ನಡ ಅರ್ಥಶಾಸ್ತ್ರವನ್ನು ಮೊದಲಬಾರಿಗೆ ಬರೆದನು. ಇದರ ಆಕರ ಕವಿಚರಿತೆಯಲ್ಲಿ ಅನುಕ್ತ. ಇಂಗ್ಲಿಷ್ ಅರ್ಥಶಾಸ್ತ್ರಗಳೇ ಇದಕ್ಕೆ ಮೂಲವಾಗಿರಬಹುದು. ಡಾಕ್ಟರ್ ಶ್ಯಾಮಾಶಾಸ್ತ್ರಿಗಳು ಮಾಡಿದ ಕೌಟಿಲ್ಯನ "ಅರ್ಥಶಾಸ್ತ್ರ"ದ ಇಂಗ್ಲಿಷ್ ಭಾಷಾಂತರವೇ ಕರ್ಣಾಟಕದಲ್ಲಿ ಸಂಸ್ಕೃತಾಕರದ ಅರ್ಥಶಾಸ್ತ್ರದ ಆಂಗ್ಲ ಪರಿವರ್ತನ. ಅನಂತರ ಕನ್ನಡ ಪರಿವರ್ತನ ಸಮಗ್ರವಾಗಿ, ಮೂಲಾನುರೋಧಿಯಾಗಿ ಆದದ್ದು ಸಂದೇಹಾಸ್ಪದ.

ಈ ವರೆಗೆ ಕೊಟ್ಟದ್ದು ಸ್ಥಾಲೀ ಪುಲಾಕ ನ್ಯಾಯದ ಉದಾಹರಣೆಗಳು. ಕೊಟ್ಟ ಪರಿಮಿತಿಯ ದೆಸೆಯಿಂದ ಸಮಗ್ರ ಕನ್ನಡ–ಸಂಸ್ಕೃತ ಗ್ರಂಥಗಳ ಅವಲೋಕವನ್ನು

ಇಲ್ಲಿ ಮಾಡಿಲ್ಲ. ಇನ್ನು ಮುಂದೆ 20 ನೆಯ ಶತಮಾನದ ಲೇಖಕರು ಉಕ್ತ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಿದ ವಿಷಯಗಳ ಸಾರವನ್ನು ಕೊಡಲಾಗುತ್ತದೆ.

"ದ್ರಾವಿಡ ಭಾಷಾ ವ್ಯಾಸಂಗ"ವೆಂಬ ಗ್ರಂಥದಲ್ಲಿ (1976) "ದ್ರಾವಿಡ" ಎಂಬುದು ಒಂದು ಜನಾಂಗವೆನ್ನಲಾಗಿದೆ. ಪ್ರಸಿದ್ಧ ಐತಿಹಾಸಿಕ ಗ್ರಂಥಕರ್ತರು ಅವಕ್ಕೆ ಬದಲಾಗಿ "ಮೆಡಿಟರೇನಿಯನ್ ಜನಾಂಗ (ಕುಲ)" ಎಂದುದನ್ನು ಹಿಂದೆಯೇ ಉಲ್ಲೇಖಿಸಲಾಗಿದೆ. ಜೊತೆಗೆ "Ethnology ಕುಲಶಾಸ್ತ್ರ" ಎಂಬುದೀಗ ಜಗತ್ತಿನಲ್ಲಿ ವಿಜ್ಞಾನವೆಂಬ ಮನ್ನಣೆಯನ್ನು ಕಳೆದುಕೊಂಡಿದೆ. ಅದಕ್ಕೆ ಬದಲಾಗಿ "Anthropology ಮಾನವಶಾಸ್ತ್ರ" ಎಂಬ ಹೊಸ ವಿಜ್ಞಾನವನ್ನು ಪತ್ತಿ ನಿಲ್ಲಿಸಲಾಗಿದೆ. ಅದಿನ್ನೂ ಬಾಲ್ಯಾವಸ್ಥೆಯಲ್ಲೇ ಇದೆ. ಜೊತೆಗೆ ಈ ವರೆಗಿನ ಒಂದೇ ಒಂದು ದ್ರಾವಿಡ ಕೇಂದ್ರವೆಂದು ಹೇಳುತ್ತ ಬರಲಾದ ಹರಪ್ಪ-ಮೊಹೆಂಜೊದಾರೊ ಪ್ರದೇಶದ ನಾಗರಿಕತೆಯ ಅವಶೇಷಗಳು ಶುದ್ಧ "ದ್ರಾವಿಡ" ಅಥವಾ "ಮೆಡಿಟರೆನಿಯನ್". ಆಗಿಲ್ಲ ಎಂದು ಪ್ರಾಕ್ತನ ವಿಮರ್ಶ ವಿಚಕ್ಷಣರಾದ ಡಾ. ಎಸ್. ಆರ್ ರಾವ್ ಅವರು "ಲೋಥಲ್" ಉತ್ಖನನ ಸಂಶೋಧನೆಯನ್ನು ವಿವರಿಸಿದ ತಮ್ಮ "Lothal and the Indus eivilisation" ಎಂಬ ಗ್ರಂಥದಲ್ಲಿ (1973) ತಿಳಿಸಿದ್ದಾರೆ; ಅದರ ಸಂಮಿಶ್ರ ಸ್ವರೂಪವನ್ನು ಅವರು ಸ್ಪಷ್ಟಪಡಿಸಿದ್ದಾರೆ. ಲೋಥಲ್ ಅವಶೇಷಗಳು ಕ್ರಿ. ಪೂ 2000 ವರ್ಷಗಳವುಗಳಾದರೆ ಹರಪ್ಪ (ಹರಿಯೂಪೀಯ) ಮೊಹೆಂಜೊದಾರೊ ಅವಶೇಷಗಳು ಕ್ರಿ. ಪೂ. 4000 ವರ್ಷಗಳ ಹಿಂದಿನವು. ("Vedic Age" ಎಂಬ ಭಾರತೀಯ ವಿದ್ಯಾ ಭವನದ ಪ್ರಕಟಣೆಯನ್ನೂ Sources of Karnataka History Vol I ಎಂಬ ಗ್ರಂಥವನ್ನೂ ನೋಡಬಹುದು. "ಭಾರತೀಯಸಂಸ್ಕೃತಿ" ಎಂಬ ಗ್ರಂಥವನ್ನು ಈ ವಿಷಯಕ್ಕಾಗಿ ಓದಬಹುದು.(Published by the Wesli Press Mysore for the Mysore University) ಜಗನ್ನಾಥ ಪಂಡಿತನು "ದ್ರಾವಿಡ" ಅಥವಾ "ದ್ರವಿಡ" ಎಂಬ ಪದವನ್ನು ತಮಿಳರಿಗಷ್ಟೇ ಅನ್ವಯಿಸಿದ್ದಾನೆ. ಅದು ಭಾಷಾಭೇದವಷ್ಟೇ, ಕುಲಭೇದವಲ್ಲ ಎಂದು ಹಲವು ವಿದ್ವಾಂಸರ ಮತ. ಡಾ. ಆರ್. ಎಸ್. ಪಂಚಮುಖಿಯವರ ಪ್ರಕಾರ ಕನ್ನಡವು "ಪೈಶಾಚಿ" ಎಂಬ ಸಂಸ್ಕೃತಜನ್ಯ ಪ್ರಾಕೃತದ ಒಂದು ವಿಕಾಸ. ಇದು ಸಂಸ್ಕೃತ-ಕನ್ನಡಗಳ ಸಂಬಂಧವನ್ನು ಇನ್ನೂ ಹತ್ತಿರಕ್ಕೆ ತರುತ್ತದೆ.

ಮೇಲಿನ ಗ್ರಂಥದಲ್ಲಿ ಕನ್ನಡ ಲಿಪಿ ಸ್ವತಂತ್ರವೆಂದು ಬರೆದುದಕ್ಕೆ ಬ್ರಾಹ್ಮೀಲಿಪಿಯ ವಿಕಾಸ ಕ್ರಮವನ್ನು ತಿಳಿಸುವ ಲಿಪಿಶಾಸ್ತ್ರವು ವಿರುದ್ಧ ಸಾಕ್ಷಿಯನ್ನು ಕೊಡುತ್ತದೆ. "ದ್ರಾವಿಡ ಭಾಷಾವ್ಯಾಸಂಗ" ಎಂಬ ಹೆಸರೇ ಸಂಸ್ಕೃತ ಶಬ್ದಗಳಿಂದ ಕೂಡಿದ್ದಲ್ಲದೆ, ಉಕ್ತ ಗ್ರಂಥದಲ್ಲಿಯ ಪ್ರಕರಣಗಳ ಹೆಸರುಗಳು ಮತ್ತು ಪಾರಿಭಾಷಿಕ ಪದಗಳು-ಈ ಎಲ್ಲವೂ ತತ್ಸಮ ಅಥವಾ ವಿಭಕ್ತಿ ರಹಿತವಾದ ಸಂಸ್ಕೃತ ಪದಗಳ ಸಮಾಸಗಳು.

ಈ ಅಂಶವನ್ನು ಗಮನಿಸಿದರೆ ಕನ್ನಡದ ಇಂದಿನ ಸ್ವರೂಪದಲ್ಲಿ ಸಂಸ್ಕೃತವನ್ನು ಬಿಟ್ಟಿರಲಾರದು ಎಂಬುದು ಸ್ಪಷ್ಟವಾಗುತ್ತದೆ. ಕನ್ನಡವು ಮೂಲತಃ ಸಂಸ್ಕೃತ ಜನ್ಯವಲ್ಲದೆ ಹೋದರೂ ಇಂದಿನ ಕನ್ನಡ ವ್ಯವಹಾರಕ್ಕೆ ತತ್ಸಮ ಪದಗಳ ಸಹಾಯವು ಅನಿವಾರ್ಯವೆನ್ನದಿದ್ದರೆ ವದತೋವ್ಯಾಘಾತ ಉಂಟಾಗುತ್ತದೆ. ಉಕ್ತ ಗ್ರಂಥದಲ್ಲಿ ವ್ಯಂಜನ ಪಲ್ಲಟವು ಕನ್ನಡಾದಿ ದ್ರಾವಿಡ ಭಾಷೆಗಳ ವೈಶಿಷ್ಟ್ಯವೆಂಬುದಕ್ಕೆ ಸಂಸ್ಕೃತದಲ್ಲಿರುವ "ನಾಲಿಕೇರ" ಮತ್ತು "ನಾರಿಕೇಲ" ಎಂಬ ಪದಗಳು ಪ್ರತ್ಯುದಾಹರಣೆಗಳಾಗಿವೆ: ಅಲರ್–ಅರಲುಗಳಿಗವು ಸಮಾನವಾಗಿವೆ.

"ದ್ರಾವಿಡಭಾಷೆಗಳಲ್ಲಿ ನಾಮಪ್ರಕೃತಿಗಳ ರೂಪಕ್ಕಿಂತ ಅರ್ಥಕ್ಕೆ ಅನುಗುಣವಾಗಿಯೇ ಲಿಂಗನಿರ್ಣಯ ನಡೆಯುತ್ತದೆ" ಎಂದು ಮೇಲೆ ಹೇಳಿದ ಗ್ರಂಥಕ್ಕೆ ದ್ರಾವಿಡೇತರವಾದ ಇಂಡೋ ಯೂರೋಪಿಯನ್ (ಸಂಸ್ಕೃತ) ಗುಂಪಿಗೆ ಸೇರಿದ ಇಂಗ್ಲೀಷಿನಲ್ಲಿಯೂ ಅರ್ಥಾನುಲಿಂಗವಲ್ಲದೆ ಶಬ್ದಲಿಂಗವಿಲ್ಲ ಎಂಬುದನ್ನು ಸೇರಿಸಿದರೆ ಮಾತ್ರ ಸತ್ಯಸ್ಥಿತಿಯು ಗೊತ್ತಾಗುತ್ತದೆ. ಉಕ್ತಗ್ರಂಥವು ಸಂಸ್ಕೃತ ಬಳಸುವ ಆರ್ಯರು ಭಾರತಕ್ಕೆ ಹೊರಗಿನಿಂದ ಬಂದವರೆಂಬ ಅಭಿಪ್ರಾಯವನ್ನು ತಳೆದಿದೆ (ಪುಟ182). ಆದರೆ ಈ ಅಭಿಪ್ರಾಯವು ತರ್ಕಶುದ್ಧವಾಗಿಲ್ಲ—ಎಂಬುದನ್ನು ಮೆಕ್‌ಡೊನಲ್ಲರು "ವೇದಿಕ ರೀಡರಿ"ಗೆ ಬರೆದ ಮುನ್ನುಡಿಯನ್ನು ಓದಿ ವಿಮರ್ಶಿಸಿದರೆ ಗೊತ್ತಾಗುತ್ತದೆ.

ಶ್ರೀ ಟಿ. ಕೇಶವಭಟ್ಟರ "ಸಂಶೋಧನರತ್ನಮಾಲಿಕೆ" ಎಂಬ ಗ್ರಂಥದಲ್ಲಿ "ಇಂದಿಗೆ ಪ್ರಚಲಿತವಿರುವ ಭಾರತೀಯ ಭಾಷೆಗಳಲ್ಲಿರುವ ಅಕ್ಷರ ಸಂಜ್ಞೆಗಳಿಗೆ ಅಶೋಕನ ಕಾಲದಲ್ಲಿ ಪ್ರಚಲಿತವಾಗಿದ್ದ "ಬ್ರಾಹ್ಮೀಲಿಪಿ" ಮೂಲವೆಂದು ನಿರ್ಣಯಿಸಲಾಗಿದೆ"–ಎಂದು ಸ್ಪಷ್ಟವಾಗಿ ಹೇಳಲಾಗಿದೆ. ದಕ್ಷಿಣದ ಬ್ರಾಹ್ಮೀಲಿಪಿಯಿಂದ ಕನ್ನಡ, ತೆಲುಗು, ತಮಿಳು ಗ್ರಂಥಲಿಪಿಗಳೂ ರೂಪುಗೊಂಡವು(ಪುಟ4). ಕನ್ನಡದ "ಅಕ್ಷರ"ವು ಸಂಸ್ಕೃತಪದ. ಕ್ರಿ.ಶ. 1960 ರಲ್ಲಿದ್ದ ಶಿವನಂಜೇಶನೆಂಬ ಕವಿಯು ತನ್ನ "ರಾಘವಾಂಕ ಚಾರಿತ್ರ"ದಲ್ಲಿ ಪ್ರಣವದಿಂದಲೇ ಪಂಚಾಕ್ಷರಿ ಹುಟ್ಟಿದುದನ್ನು ವಿವರಿಸಿ, ಆ ಪಂಚಾಕ್ಷರಗಳಿಂದಲೇ ವರ್ಣಮಾಲೆಯ 51 ಅಕ್ಷರಗಳಾದುವೆಂದು ಹೇಳಿದ್ದಾನೆ.

"ಸಂಸ್ಕೃತದಲ್ಲಿ ವಿಭಕ್ತಿಗಳು ಏಳು. ಕನ್ನಡದಲ್ಲಿಯೂ ವೈಯಾಕರಣರು ಸಪ್ತವಿಭಕ್ತಿಗಳನ್ನು ವಿವರಿಸಿದ್ದಾರೆ" (ಉಕ್ತಗ್ರಂಥದ 41ನೆಯ ಪುಟ). ನಾಗವರ್ಮ, ಕೇಶಿರಾಜ, ಭಟ್ಟಾಕಲಂಕರ ಕನ್ನಡ ವ್ಯಾಕರಣಗಳನ್ನು ಇದಕ್ಕಾಗಿ ನೋಡಬಹುದು, ಆಧುನಿಕ ಕನ್ನಡ ಭಾಷಾಶಾಸ್ತ್ರಾಭ್ಯಾಸಕ್ಕೆ ಶ್ರೀ ಟಿ. ಕೇಶವಭಟ್ಟರ "ಸಂಶೋಧನ ರತ್ನಮಾಲಿಕೆ" ಪೂರಕ ಗ್ರಂಥ ಎನ್ನುವುದಕ್ಕಿಂತ ಮೂಲಿಕಾ ಗ್ರಂಥ ಎಂದರೆ ಹೆಚ್ಚು ಉಚಿತ. ಪೀಠಿಕೆಯಿಂದ ಮುಂದುವರಿಯುತ್ತ ಹೋದಾಗ ಮಾತ್ರ ಸಂಶೋಧನೆಯು ಪೂರ್ವಗ್ರಹರಹಿತವೂ ಅಪ್ಯಾಯಕವೂ ಆಗುವುದು. ಏಕೆಂದರೆ ಇಂದು ನಾವು ಬಳಸುತ್ತಿರುವ

ಶುದ್ಧವಾದ ಗ್ರಾಂಥಿಕ ಕನ್ನಡ ಭಾಷೆಯ ವರ್ಣಮಾಲೆ ಹೆಚ್ಚುಕಡಿಮೆ ಸಂಸ್ಕೃತ ವರ್ಣಮಾಲೆಯಂತೆಯೇ ಇದೆ. ದೀರ್ಘ ಋಕಾರ, ಌಕಾರಗಳನ್ನು ಮಾತ್ರ ಬಿಡಬಹುದು, ಉಳಿದ ಅಕ್ಷರಸಂಖ್ಯೆಗೆ ಎಕಾರ-ಒಕಾರಗಳನ್ನು ಸೇರಿಸಿಕೊಳ್ಳಲೇ ಬೇಕಾಗುವುದರಿಂದ ಪ್ರಸಿದ್ಧ ಸಂಸ್ಕೃತ ವರ್ಣಮಾಲೆಯಲ್ಲಿದ್ದಷ್ಟೇ ಅಕ್ಷರಗಳು ಲಭಿಸುವವು. ಇಂದಿನ ಆಡುಗನ್ನಡ—ಬರೆಗನ್ನಡಗಳನ್ನು ಹಿಂದಿನ (ಕ್ರಿಸ್ತಪೂರ್ವದ) ರೂಪಗಳ ವೈಶಿಷ್ಟ್ಯಕ್ಕೆ ತಿರುಗಿಸುವುದು ಅಸಾಧ್ಯ. ಅಸ್ವಾಭಾವಿಕ. ದೇಶ್ಯ ಪದಗಳಿಗೆ ಸಹ ಸಂಸ್ಕೃತ ವ್ಯಾಕರಣದ ಸಾಧಾರಣ ನಿಯಮಗಳು ತಲೆಕಟ್ಟಿನಂತಿರುವುದನ್ನು ಕೇಶವಭಟ್ಟರ ಸಂಶೋಧನೆಯು ತೋರಿಸಿಕೊಟ್ಟಿದೆ.

ಡಾ.ರಂ.ಶ್ರೀ.ಮುಗಳಿಯವರು "ಬಳಕೆಯ ಕನ್ನಡದಲ್ಲಿ ಇದಕ್ಕಿಂತ (ಕ್ರಿ.ಶ. 450 ರ ಹಲ್ಮಿಡಿ ಶಾಸನಕ್ಕಿಂತ) ಪೂರ್ವದಲ್ಲಿಯೇ ಸಂಸ್ಕೃತ ಪದಗಳು ಸೇರಿ ಕನ್ನಡವೇ ಎನ್ನುವಷ್ಟು ಒಂದಾಗಿರಬೇಕು" ಎಂದ ಮಾತಿನಿಂದ ಕನ್ನಡ ಮಾತೆಂಬುದು ಅಮಿಶ್ರಿತಕಾಲದಲ್ಲಿ ಸುಸಂಸ್ಕೃತರ ವ್ಯವಹಾರಕ್ಕೆ ಬೇಕಾದಷ್ಟು ಪದಸಂಪತ್ತಿನಿಂದ ಕೂಡಿರಲಿಲ್ಲ—ಎಂಬುದು ಸ್ಪಷ್ಟವಾಗುತ್ತದೆ.

ಶ್ರೀ ಪ್ರ. ಗೋ. ಕುಲಕರ್ಣಿಯವರು ತಮ್ಮ "ಕನ್ನಡಭಾಷೆಯ ಚರಿತ್ರೆ"-ಯಲ್ಲಿ "ಕವಿರಾಜ ಮಾರ್ಗದ ರಚನೆಯ ಕಾಲಕ್ಕೆ ವ್ಯಾಕರಣ ಗ್ರಂಥಗಳಾವುವೂ ಕನ್ನಡದಲ್ಲಿ ರಚಿತವಾಗಿರಲಿಲ್ಲವೆಂದು ಹೇಳುವುದು ಯೋಗ್ಯವೆನ್ನಿಸುತ್ತದೆ" ಎಂದಿರುವುದು ಗಮನಾರ್ಹ. ಆದುದರಿಂದ ಅಲ್ಲಿಯವರೆಗಿನ ಜಾನಪದೀಯ ಹಾಡು-ಗಳನ್ನುಳ್ಳ ಹಳಗನ್ನಡಕ್ಕೆ ಸಾಂಸ್ಕೃತಿಕ ದೃಷ್ಟಿಗಿಂತ ಹೆಚ್ಚಾಗಿ ಸಮಾಜ ಶಾಸ್ತ್ರೀಯ ದೃಷ್ಟಿಯಿಂದ ಕೆಲವಮಟ್ಟಿಗೆ ಬೆಲೆ ಕೊಡಬಹುದು—ಅಷ್ಟೇ. ಕ್ರಿ.ಶ. 450 ರ ಹಲ್ಮಿಡಿ ಶಿಲಾಶಾಸನ, 480ರ ಸಿರಿಗುಂದದ ಶಿಲಾಶಾಸನ, 578ರ ಬಾದಾಮಿಯ ಶಿಲಾಶಾಸನ, 675ರ ಕಿಗ್ಗದ ಶಿಲಾಶಾಸನ, 685ರ ಶಿಕಾರಿಪುರದ ಶಿಲಾಶಾಸನ, 692ರ ಸೊರಬ ತಾಮ್ರ ಶಾಸನ, 700 ರ ಶ್ರವಣ ಬೆಳಗೊಳ ಶಿಲಾಶಾಸನ, ಅದೇ ಕಾಲದ ಅಲ್ಲಿಯ ಇನ್ನೊಂದು ಶಿಲಾಶಾಸನ, 709ರ ಐಹೊಳೆಯ ಶಿಲಾಶಾಸನ ಮತ್ತು 750-770 ರ ಉದಯಾವರ ಶಿಲಾಶಾಸನಗಳನ್ನು ಅವಲೋಕಿಸಿದರೆ, ಕೋಶ-ವ್ಯಾಕರಣಗಳ ದೃಷ್ಟಿಯಿಂದ ಡಾ. ಮುಗಳಿಯವರೆಂದಂತೆ ಸಂಸ್ಕೃತ ಸಂಮಿಶ್ರಣವು ಅಂದು ಜನ ಜನಿತವಾಗಿ ರೂಢಿಗೊಂಡದ್ದು ಸ್ಪಷ್ಟವಾಗುತ್ತದೆ. ಆದುದರಿಂದಲೇ ಶ್ರೀ ಕುಲಕರ್ಣಿ-ಯವರು ಹಳಗನ್ನಡದಲ್ಲಿ ಮೊದಲು "ಉದ್ಗ್ರಂಥಗಳನ್ನು ರಚಿಸಿದ ಜೈನಕವಿಗಳು ಸಂಸ್ಕೃತ-ಕನ್ನಡಗಳೆರಡರಲ್ಲಿಯೂ ಉದ್ದಾಮ ಪಂಡಿತರಾಗಿದ್ದರು. ಸಂಸ್ಕೃತದಲ್ಲಿ ವರ್ಧಮಾನ ಪುರಾಣವನ್ನು ರಚಿಸಿದ ಅಸಗನು 945 ರಲ್ಲಿ ಕನ್ನಡದಲ್ಲಿಯೂ ಕಾವ್ಯ-ಗಳನ್ನು ರಚಿಸಿದ್ದನು. ಪೊನ್ನನು ಉಭಯಕವಿಯೆಂದು ಬಿರುದಂ ಪಡೆದಿದ್ದನು.

ರನ್ನನಿಗೂ ಈ ಬಿರುದಿದ್ದಿತು. ಉಭಯಭಾಷಾಪಂಡಿತರಾದ ಈ ಕವಿಗಳು ಸಂಸ್ಕೃತ ವೃತ್ತಗಳನ್ನು ಹೆಚ್ಚಾಗಿ ಬಳಸಿಕೊಂಡು ಕನ್ನಡದಲ್ಲಿ ಚಂಪೂಕಾವ್ಯಗಳನ್ನು ರಚಿಸಿದರು. ಈ ಚಂಪೂ ಕಾವ್ಯಗಳಿಗೆ "ವಸ್ತುಕ" ಎಂದೂ ಹೇಳುವುದುಂಟು. ಇವುಗಳ ಭಾಷೆ ಪ್ರೌಢ; ಕಂದ ಹಾಗೂ ಸಂಸ್ಕೃತ ಅಕ್ಷರ ವೃತ್ತಗಳು ಈ ಕಾವ್ಯಗಳಲ್ಲಿ ಹೆಚ್ಚಾಗಿ ಬಳಸಲ್ಪಡುತ್ತವೆ. ಗದ್ಯಭಾಗವು ಅಲ್ಲಲ್ಲಿ ಅಷ್ಟಿಷ್ಟು: ಅಕ್ಕರ, ಚವುಪದಿ ತ್ರಿಪದಿ ಮೊದಲಾದ ಕನ್ನಡ ವೃತ್ತ ಜಾತಿಗಳು ಎಲ್ಲಿಯೋ ಅಲ್ಲೊಂದಿಲ್ಲೊಂದು" ಎಂಬ ಸೋದಾಹರಣ ಸಿದ್ಧಾಂತವನ್ನು ಮಂಡಿಸಿದ್ದಾರೆ.

13ನೆಯ ಶತಮಾನದಿಂದ ನೂರಕ್ಕೆ **90**ಕ್ಕೂ ಹೆಚ್ಚು ತತ್ಸಮಗಳಿರುವ ಚಂಪೂ ಕನ್ನಡವನ್ನು ಹಿಂದಕ್ಕಟ್ಟಲಾರಂಭಿಸಿದ್ದು ರಾಘವಾಂಕನಿಂದ ಆರಂಭವಾದ ಷಟ್ಪದಿ ಪದ್ಧತಿ. ಇಲ್ಲಿ **90**ರಿಂದ **70, 60, 50**ರ ವರೆಗೆ ಇಳಿದುದು ಭಿನ್ನ ಭಿನ್ನ ಷಟ್ಪದಿ ಕಾವ್ಯಗಳ ಭಿನ್ನ ಭಿನ್ನ ಪದ್ಯಗಳಲ್ಲಿ ಕಂಡು ಬಂದರೂ ಇಡಿಯ ಕಾವ್ಯ-ವೊಂದನ್ನು ಅವಲೋಕಿಸಿದರೆ **50**ಕ್ಕೂ ಸ್ವಲ್ಪ ಹೆಚ್ಚೇ ಎನ್ನುವಷ್ಟು ತತ್ಸಮ ಪದ ಪ್ರಯೋಗವನ್ನು ಕಾಣಬಹುದು. ಕಾವ್ಯದಲ್ಲಿ ಇಷ್ಟು ಸಾಧ್ಯವಾಯಿತಲ್ಲದೆ ಶಾಸ್ತ್ರದಲ್ಲಿ ಅಂದಿನಿಂದ ಇಂದಿನವರೆಗೂ ಸಾಧ್ಯವಾಗಲಿಲ್ಲ; ಶಾಸ್ತ್ರದಲ್ಲಿ ಆಂಡಯ್ಯತನವು ನಡೆಯದು; ಕೇವಲ ತದ್ಭವ-ದೇಶ್ಯಗಳಿಂದ ಕೆಲಸ ಸಾಗದು—ಎಂಬುದಕ್ಕೆ ಇಂದು ಕನ್ನಡದಲ್ಲಿ ಬರೆದು ಪ್ರಕಟವಾದ ಯಾವ ಶಾಸ್ತ್ರಗ್ರಂಥವನ್ನೂ ಬೇಕಾದರೂ ಓದಿ-ನೋಡಬಹುದು. ಕರ್ನಾಟಕ–ಸರಕಾರದ ಗೆಜೆಟ್ಟನ್ನು ನೋಡಿದರೂ ಸಾಕು. ಶಾಸ್ತ್ರೀಯ ಪಾರಿಭಾಷಿಕಗಳು ಆಡಳಿತದಲ್ಲಿ ಸಂಪೂರ್ಣ ತತ್ಸಮಗಳೇ ಆಗಿರುವುದು ತಿಳಿದುಬರುತ್ತದೆ. ಹಾಲಿಗೆ ನೀರನ್ನು ಬೆರೆಸಿಕೊಟ್ಟ ಆರೋಪಿಯೊಬ್ಬನು ಕೋರ್ಟಿನಲ್ಲಿ "ನಾನು ಅವರಿಗೆ ಪಯಸ್ಸನ್ನು ಕೊಟ್ಟೆನು" ಎಂದರೆ ಹಾಲುಕೊಟ್ಟೆನೆಂದೂ ಆದೀತು, ನೀರು ಕೊಟ್ಟೆನೆಂದೂ ಆದೀತು. "ಅಂಚೆಮನೆಯಲ್ಲಿ ನಾನು ಆಗ ಇದ್ದೆ" ಎಂದರೆ ಪೋಸ್ಟಾಫೀಸಿನಲ್ಲಿದ್ದೆನೆಂದೂ ಆದೀತು, ಹಂಸನಿವಾಸವಾದ ಕೆರೆಯಲ್ಲಿದ್ದೆನೆಂದೂ ಆದೀತು. ಆದುದರಿಂದ ಪಾರಿಭಾಷಿಕಗಳಿಗೆ ದ್ವಂದ್ವಾರ್ಥವಿರಬಾರದು ಎಂಬ ನಿಯಮವನ್ನು ಮಾಡಲಾಗಿದೆ; ಇದ್ದರೆ ಅಸಂದಿಗ್ಧಾರ್ಥಕ್ಕೆ ಎಡೆಗೊಟ್ಟದೆ ವಿಚಾರ ವ್ಯವಹಾರವನ್ನು ಗೊಂದಲಕ್ಕೀಡು ಮಾಡುತ್ತದೆ.

ಹೊಸಗನ್ನಡದ ಭಾಷಾಶುದ್ಧಿಗೆ ನಡುಗನ್ನಡ ಸರಿಯಾದ ಮಾರ್ಗದರ್ಶನ ಮಾಡಬಲ್ಲದು. ಇದರ ಕಾಲ 20 ನೆಯ ಶತಮಾನ. ಮುದ್ದಣನು ನಡುಗನ್ನಡ ಕಾಲದ ಕೊನೆಯ ದೊಡ್ಡ ಕವಿ ಎನ್ನಬಹುದು. ವ್ಯಾಕರಣವು ಹೇಗೆ ಬೆಳೆವ ಭಾಷೆಯ ಕೊರಳಿಗೆ ಉರುಳಾಗಬಾರದೋ ಹಾಗೇ ಬಳಕೆಯ ಭಾಷೆಯೂ ವ್ಯಾಕರಣದ ಕೊರಳಿಗೆ ಉರುಳಾಗಬಾರದು—ಹಾಗೆ ಆದರೆ ಅದು ಅನರ್ಥಕ್ಕೆ ಒಯ್ಯುತ್ತದೆ

ಎಂಬುದನ್ನು "ಸಂಶೋಧನ ರತ್ನಮಾಲಿಕೆ"ಯ 82 ನೆಯ ಪುಟದಲ್ಲಿ ಸೋದಾಹರಣವಾಗಿ ವಿವರಿಸಿದ್ದು ಇಲ್ಲಿ ಸ್ಮರಣೀಯ. ಅಪಪ್ರಯೋಗಗಳ ಉದಾಹರಣೆಗಳನ್ನು ಅದರಲ್ಲಿ ಹೀಗೆ ಕೊಡಲಾಗಿದೆ.

ಅಪಪ್ರಯೋಗ	ಸರಿಯಾದ ಪ್ರಯೋಗ
ನೋಡಲೆತ್ನಿಸು	ನೋಡಲು ಯತ್ನಿಸು
ಬೆಗ್ಗಾಡು	ಬೆಂಗಾಡು
ಕಗ್ಗಾಳು	ಕರಿಗಾಳು, ಕಾರ್ಗಾಳಂ
ಶಾಲೆನಲ್ಲಿ	ಶಾಲೆಯಲ್ಲಿ
ಕೈನಲ್ಲಿ	ಕೈಯಲ್ಲಿ
ನೆಹರುರವರು	ನೆಹರುವವರು ಅಥವಾ ನೆಹರುಗಳು
ಮನೆನಲ್ಲಿ	ಮನೆಯಲ್ಲಿ
ಕಮಲಳು	ಕಮಲನು ಅಥವಾ ಕಮಲೆಯು
ಕುವೆಂಪುರವರು	ಕುವೆಂಪುಗಳು
ಎಂ. ಎ. ನಲ್ಲಿ	ಎಂ. ಎ. ಯಲ್ಲಿ

ಮತ್ತು ಹೊಸತಾಗಿ ವ್ಯಾಕರಣ ರಚನೆ ಮಾಡುವವರು ಭಾಷಾಧರ್ಮವನ್ನು ತಿಳಿದಿರಲೇಬೇಕು—ಭಾಷಾಶಾಸ್ತ್ರವನ್ನು ಅಭ್ಯಾಸ ಮಾಡಿರಬೇಕು ಎಂದು ಉಕ್ತ ಗ್ರಂಥದಲ್ಲಿ ಹೇಳಿದ್ದು ಅನುಲ್ಲಂಘನೀಯ. ಆದರೆ ಭಾಷಾಶಾಸ್ತ್ರ ಬರೆಯುವವರೇ "ಧ್ವನಿಮೆಗಳು" ಎಂಬುದನ್ನು "ಧ್ವನಿಮಾಗಳು" ಎಂದು ಬರೆದರೆ ಏನು ಹೇಳಬೇಕು? ಅಂಥವರಲ್ಲಿ ಕೆಲವರಿಂದು ಡಾಕ್ಟರೇಟುಗಳನ್ನು ಪಡೆದು ಸರಕಾರದಿಂದ ಪುರಸ್ಕೃತರಾದ ತಮಾಷೆ ನಡೆದದ್ದುಂಟು! ಹೀಗಾಗಲು "ಭಾಷಾಧರ್ಮ" ಎಂದರೆ ಏನೆಂಬುದು ತಿಳಿಯದಿರುವವರು ಭಾಷಾಶಾಸ್ತ್ರವನ್ನು ಬರೆಯಲು ಹೊರಟದ್ದೇ ಕಾರಣ. ಅದರಿಂದಲೇ ಶ್ರೀ ಕುಲಕರಣಿಯವರು ತಮ್ಮ ಅಮೂಲ್ಯ ಗ್ರಂಥದಲ್ಲಿ "ಇಂದಿನ ಗದ್ಯ ಗ್ರಂಥಗಳಲ್ಲಿ ಬಳಸಲ್ಪಡುವ ಎಲ್ಲ ಬಗೆಯ (ಕನ್ನಡ) ಭಾಷೆಯು ಹೊಸಗನ್ನಡ ಗದ್ಯಭಾಷೆಯೆಂದು ಕರೆಯಿಸಿಕೊಳ್ಳಲು ಅರ್ಹವಾಗಿರುವದಿಲ್ಲ" ಎಂದು ಹೇಳಿದ್ದು ಸತ್ಯ. ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರು—

"ಆಂಗ್ಲ ಭಾಷೆಯಲ್ಲಿ ಹಳ-ನಡು-ಹೊಸ ಎಂಬ ಮೂರು ಅವಸ್ಥೆ ಇವೆ. ಹಿಂದಿನ ಆಂಗ್ಲಗಳ ನಾಲ್ಕು ನಾಲ್ಕು ವಾಕ್ಯಗಳನ್ನು ಬರೆದು ಎದುರಿನಲ್ಲಿರಿಸಿದರೆ

ಇಂದಿನ ವಿದ್ಯಾವಂತ ಆಂಗ್ಲನಿಗೆ ಅಪರಿಚಿತವಾಗಿ ಕಾಣುತ್ತವೆ. ಹಳೆ ಆಂಗ್ಲ ಭಾಷೆ, ನಡುವಿನ ಆಂಗ್ಲಭಾಷೆ ಆತನಿಗೆ ಅರ್ಥವಾಗುವುದಿಲ್ಲ. ಕನ್ನಡದಲ್ಲಿ ಇಂಥ ವಿಸ್ತಾರವಾದ ಪರಿವರ್ತನೆ ಆಗಿಲ್ಲ" ಎಂಬುದು ಡಾ.ಕೆ.ವಿ. ಪುಟ್ಟಪ್ಪನವರ ಗದ್ಯ-ಪದ್ಯಗಳಲ್ಲಿ ಉದಾಹೃತವಾಗಿದೆ. ಕುಲಕರಣಿಗಳು ಕುವೆಂಪುಕೃತ ಪದ್ಯಕಾವ್ಯಗಳೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡಂತಿಲ್ಲ. ಆದ್ದರಿಂದ ಅವರು ಕನ್ನಡದಲ್ಲಿ 4 ಭೇದಗಳನ್ನು ಹೇಳಹೊರಟರು. ಹಾಗೆ ಹೇಳುವಾಗಲೂ ಆ ಭೇದಗಳು ಇಂಗ್ಲೀಷಿನಲ್ಲಿರುವಷ್ಟಿಲ್ಲ ಎನ್ನದಿರುವುದು ಆಶ್ಚರ್ಯವು.

"ಸ್ವಮೂಲದಿಂದ ಉತ್ಪನ್ನವಾದ ಶಬ್ದಗಳನ್ನು ಮಾತ್ರ ಬಳಸಿಕೊಂಡು ಬೆಳೆದ ಭಾಷೆಗಳು ಜಗತ್ತಿನಲ್ಲಿ ಒಂದೂ ಇಲ್ಲ"-(ಕನ್ನಡ ಭಾಷೆಯ ಚರಿತ್ರೆ, ಪುಟ 217)- ಎಂಬುದು ಸತ್ಯ. ಹಾಗೇ "ಇಂದು ಸಂಸ್ಕೃತವು ಸಾಮಾಜಿಕ ಭಾಷೆಯಾಗಿ ಉಳಿದಿಲ್ಲ. ಕನ್ನಡಿಗರ ಮೇಲೆ ಅದರ ಪ್ರಭಾವವೂ ಹೆಚ್ಚಾಗಿ ಇಲ್ಲ. ಆದರೂ ಭಾರತೀಯ ಭಾಷೆಗಳಿಗೆ ಅವಶ್ಯಕವಿದ್ದ ಹಲವು ಪಾರಿಭಾಷಿಕ ಶಬ್ದಗಳನ್ನು ಸಂಸ್ಕೃತವೇ ಪೂರಯಿಸುತ್ತಲಿದೆ. ಅಂತಹವುಗಳನ್ನು ಕನ್ನಡದಲ್ಲಿಯೂ ಬಳಸಲಾಗುತ್ತಿದೆ. ಅದು ಅವಶ್ಯಕವೂ ಆಗಿದೆ. ಹೀಗೆ ಇಂದಿಗೂ ಹೊಸ ಹೊಸ ಸಂಸ್ಕೃತ ಶಬ್ದಗಳು ಕನ್ನಡಕ್ಕೆ ಸೇರುತ್ತಲಿವೆ, ಹಳಗನ್ನಡ ವೈಯಾಕರಣಿಗಳು ದೂರಿರಿಸಿದ ಕೆಲವು ಅವ್ಯಯಗಳು ಸಹ ಹೊಸಗನ್ನಡದಲ್ಲಿ ಬಳಕೆಯಲ್ಲಿ ಬಂದಿವೆ. ಉದಾಹರಣೆಗಳು: ಅಗತ್ಯ, ಅಥವಾ, ಏವಂಚ, ಕ್ರಮೇಣ, ಪರಂತು, ಪ್ರಾಯಶಃ, ಪ್ರಾಯೇಣ, ಬಹುಶಃ, ಮುಖತಃ, ಯಥೇಷ್ಟ, ಸದ್ಯ, ಸ್ವತಃ ಇತ್ಯಾದಿ. ಸಂಸ್ಕೃತವನ್ನು ದೂರಿರಿಸುವುದು (ದೂರವಾಗಿಸುವುದು) ಸಾಧ್ಯವಿಲ್ಲ, ಯೋಗ್ಯವೂ ಅಲ್ಲ" ಎಂದಿರುವುದೂ ಸತ್ಯ, ನ್ಯಾಯ. ಈ ಗ್ರಂಥಕರ್ತರು ಬಳಸಿದ "ಮಧ್ಯಂತರ" "ದೂರಿರಿಸು" ಎಂಬ ಒಂದೆರಡು ಪದಗಳು ಕನ್ನಡ ಭಾಷಾಧರ್ಮಕ್ಕೆ ಹೊರತು. "ಮಧ್ಯಂತರ" ಮರಾಠಿ ಪದ್ಧತಿಯ ಶಬ್ದ ಸಂಸ್ಕೃತ-ಕನ್ನಡ ವ್ಯಾಕರಣಗಳಿಗಿದು ವಿರುದ್ಧ. ಅದೇ ಪ್ರಕಾರ ದೂರ, ಇರಿಸು ಎಂಬ ಎರಡು ಕನ್ನಡ ಪದಗಳನ್ನು ವಿಂಗಡಿಸಿ ತಿಳಿದುಕೊಳ್ಳದುದರಿಂದ ಇವರು "ದೂರಿರಿಸು" ಎಂದು ಬಳಸಿದ್ದಾರೆ. ಸಂಸ್ಕೃತ-ಕನ್ನಡ ಸಂಧಿಗಳ ನಿಯಮಗಳನ್ನರಿಯದವರು ಇಂದು "ಬಟ್ಟಾಭಿಪ್ರಾಯ" ಎಂದು ಬರೆಯುತ್ತಾರೆ. ಅದು "ಬಟ್ಟಭಿಪ್ರಾಯ"ವೆಂದಾಗುವುದು ವ್ಯಾಕರಣಸಂಮ್ಮತ. ಹಾಗೇ ಕನ್ನಡ ಸಾಹಿತ್ಯ ಪರಿಷತ್ತು ಹೊರಡಿಸುವ "ಕನ್ನಡನುಡಿ"ಯಲ್ಲಿ ಕೆಲ ಕನ್ನಡಾಭಿಜ್ಞರು ಬಳಸುವಂಥ "ನೇಮಕಾತಿ" (ಕನ್ನಡ ನುಡಿ, ಸಂಪುಟ 42, ಸಂಚಿಕೆ 19, 20-ಅಕ್ಟೋಬರ್ 16, 1979) "ನೇಮಕ" ಎಂದಿದ್ದರೆ ಸರಿ; ಹಾಗಲ್ಲದೇ ಅದು ವಾಪಸಾತಿ, ರದ್ದಿಯಾತಿ, ಹಾಜರಾತಿ ಮುಂತಾದ ಅಪಪ್ರಯೋಗಗಳನ್ನು ಅನುಸರಿಸಿದರೆ ಅಂಥ ಪ್ರಯೋಗಕಾರರಿಗೆ ಕನ್ನಡ ಭಾಷಾಧರ್ಮ ಗೊತ್ತಿಲ್ಲ ಎನ್ನಬೇಕಾಗುತ್ತದೆ. ಅಂಥ ಪದಗಳನ್ನು

ವಾಪಸು ರದ್ದು. ಹಾಜರಿ ಎಂದು ಬಳಸುವುದು ಭಾಷಾಧರ್ಮಜ್ಞತೆಗೆ ಸಹಜ. ಹಾಗೇ ಪಂಥ್ಯಂತರದಂತೆ "ವಿವಂಚನ" ಎಂಬ ಮರಾಠಿ ಪದವು ಕನ್ನಡದಲ್ಲಿ ಅಪಾರ್ಥಕರ; ವಿಶೇಷವಾದ ವಂಚನೆಯೆಂದೇ ಅರ್ಥವಾಗುತ್ತದೆ. ಅದೇ ಮೇರೆಗೆ ಹಂಚಿಕೆಗೆ ಉಪಾಯವೆಂಬ ಅರ್ಥವಿರುವಾಗ ಅದನ್ನು "ವಂಚುವಿಕೆ" ಎಂಬ ಅರ್ಥ-ದಲ್ಲಿ ಬಳಸುವುದೂ ಅನನುಕೂಲಕರ. ಇನ್ನು ಪ್ರಾಮುಖ್ಯತೆ, ಪ್ರಾವೀಣ್ಯತೆ, ಪ್ರಾಧಾನ್ಯತೆಗಳನ್ನು ಬಳಸುವವರನ್ನು ಕಂಡರೆ ಕನ್ನಡಿಗರು ಸುಸಂಸ್ಕೃತರಾಗ-ಬೇಕಾದರೆ, ಸಂಸ್ಕೃತ ಜ್ಞಾನದ ಬುನಾದಿಯು ಅನಿವಾರ್ಯ ಎನ್ನಲೇ ಬೇಕಾಗುತ್ತದೆ. ಆದುದರಿಂದ ಸಂಧಿ, ಸಮಾಸ, ಶಬ್ದರೂಪಗಳಲ್ಲಿರುವ ಕನ್ನಡ-ಸಂಸ್ಕೃತ ಬಗೆಗಳನ್ನು ತಿಳಿದಿರುವುದು ಅಗತ್ಯವೆಂಬ ಅಭಿಪ್ರಾಯದಿಂದಲೇ ಡಾ. ಡಿ. ವಿ. ಜಿ. ಯವರು ತಮ್ಮ "ಸಾಹಿತ್ಯ ಶಕ್ತಿ" ಯಲ್ಲಿ ಪ್ರತಿಯೊಬ್ಬ ಕನ್ನಡಿಗನೂ ಸಂಸ್ಕೃತ-ಕನ್ನಡಗಳೆರಡರ ಒಂದೇ ಪ್ರಶ್ನೆ ಪತ್ರಿಕೆಯನ್ನು ಉತ್ತರಿಸಬೇಕಾಗುವಂತಹ ಕನ್ನಡ ಭಾಷಾಭ್ಯಾಸದ ಕ್ರಮವನ್ನು ಸೂಚಿಸಿದರು. ಅದರತ್ತ ಪ್ರಯತ್ನಿಸಲು ಹೋಗದೆ ಸಂಸ್ಕೃತವನ್ನೂ ಬ್ರಾಹ್ಮಣರನ್ನೂ ಗಂಟುಹಾಕಿ ಟೀಕಿಸುವ ಕನ್ನಡಿಗನು ನಿಜವಾದ ಕನ್ನಡಿಗನೇ ? ಎಂದೂ ಅಲ್ಲ. "ಕನ್ನಡ ಭಾಷಾ ಚರಿತ್ರೆ" ಹೇಳುವಂತೆ ಸಂಸ್ಕೃತ ಪದ-ಪ್ರಯೋಗಗಳನ್ನು ಮೊದಲಿನಿಂದಲೇ ಹೆಚ್ಚಿಸುತ್ತ ಬಂದವರು ಜೈನ ಮಹಾಕವಿಗಳು, ಅವು ಯಾರಿಂದಲೇ ಆಗಲಿ—ಇಂದಿನ ಪರಿಸ್ಥಿತಿಯಲ್ಲಿ ಸಂಸ್ಕೃತ-ಕನ್ನಡಗಳಲ್ಲಿ ವಿವಾಹ ವಿಚ್ಛೇದವು ಅಸಾಧ್ಯ, ಅನಗತ್ಯ ಎಂಬುದು ನಿಜವಾದ ವಿದ್ವಾಂಸರಿಗೆ ಗೊತ್ತು.

ಮೇಲೆ ಹೇಳಿದ "ಕನ್ನಡ ನುಡಿ"ಯ ಇತರ ಅಸಾಧು ಪ್ರಯೋಗಗಳನ್ನು ಈ ಕೆಳಗೆ ಕೊಡಲಾಗಿದೆ:

ಅಸಾಧು	ಸಾಧು
ಹಾಗು	ಹಾಗೂ
ಮಹಾನ್‌ವ್ಯಕ್ತಿಯ	ಮಹಾವ್ಯಕ್ತಿಯ
ಪರಿಷತ್ ಅಧ್ಯಕ್ಷರ	ಪರಿಷತ್ತಿನ ಅಧ್ಯಕ್ಷರ
ರಾಷ್ಟ್ರಪಿತಸಮಾನರು	ರಾಷ್ಟ್ರಪಿತೃಸಮಾನರು
ಸೇವಾಕರ್ತ	ಸೇವಾಕರ್ತರು
ನಾಗರಾಜಯ್ಯ ಅವರು	ನಾಗರಾಜಯ್ಯನವರು
ಶೀಘ್ರಲಿಪಿಗಾರ	ಶೀಘ್ರಲಿಪಿಕಾರ
ಹುಟ್ಟುಕನ್ನಡಿಗರು	ಹುಟ್ಟುಗನ್ನಡಿಗರು
ಉತ್ತೇಜನ ಬಹುಮಾನ	ಉತ್ತೇಜಕ ಬಹುಮಾನ
ಯೋಜನೆ ಇದೆ	ಯೋಜನೆಯಿದೆ

ವಾಪಸ್ಸು	ವಾಪಾಸು
ಇಲ್ಲಿಯುವರೆವಿಗೂ	ಇಲ್ಲಿಯುವರೆಗೂ
ಕಛೇರಿ	ಕಚೇರಿ
ತಕ್ಷಣ	ತತ್‌ಕ್ಷಣ
ವಿದ್ಯಾ ಇಲಾಖೆ	ವಿದ್ಯಾಶಾಖೆ, ವಿದ್ಯೆಯಿಲಾಖೆ
೧೯೭೯ನೇ	೧೯೭೯ನೆಯ
ರಾಜ್ಯಾಡಳಿತಭಾಷೆ	ರಾಜ್ಯದಾಡಳಿತದ ಭಾಷೆ
ಪರೀಕ್ಷಾ ಅರ್ಜಿ	ಪರೀಕ್ಷೆಯ ಅರ್ಜಿ
ನಂತರ	ಅನಂತರ
ಶಿಕ್ಷಣ ಇಲಾಖೆ	ಶಿಕ್ಷಣದ ಇಲಾಖೆ
ಅಂತರರಾಷ್ಟ್ರೀಯ	ಅಂತಾರಾಷ್ಟ್ರೀಯ
ಚಳುವಳಿ	ಚಳವಳಿ
ಕೊಡುತ್ತಾರೆಂಬುದು	ಕೊಡುತ್ತಾರೆಯೆಂಬುದು
ಕೊಡುತ್ತದೋ	ಕೊಡುತ್ತದೆಯೋ
ಜನಗಣತಿ	ಜನಗಣನೆ
ಪುನರ‍್ರಚಿಸಿಲ್ಲ	ಪುನಾರಚಿಸಿಲ್ಲ
ಸರಿ	ಸರಿಯಾಗಿ
ಸೇವೆಯನ್ನಂತು	ಸೇವೆಯನ್ನಂತೂ
ಪಾತ್ರವಂತು	ಪಾತ್ರವಂತೂ
ಅಭಿವ್ಯಕ್ತಿತೆ	ಅಭಿವ್ಯಕ್ತತೆ, ಅಭಿವ್ಯಕ್ತಿ
ಮೇನನ್‌ರಂಥ	ಮೆನನ್ನರಂಥ
ದೃಷ್ಟಿಯಿಂದಂತು	ದೃಷ್ಟಿಯಿಂದಂತೂ
ಬಿಹಾರಿನಲ್ಲಿ	ಬಿಹಾರದಲ್ಲಿ
ತಲಪಿಸಬೇಕೆಂಬ	ತಲುಪಿಸಬೇಕೆಂಬ
ಸ್ಥರ	ಸ್ತರ
ಆಗಾಗ್ಯೆ	ಆಗಾಗ
ವಿಡಂಬನೆ ಆಗುವುದರ	ವಿಡಂಬನೆಯಾಗುವುದರ
ವಿನಾಯಿತಿ	ವಿನಾಯತಿ
ಸರ್ವೇಸಾಧಾರಣ	ಸರ್ವಸಾಧಾರಣ
ಹತ್ತೂ ಜನರಂತೆ	ಹತ್ತುಜನರಂತೆ

—ಇತ್ಯಾದಿ

"ಅಸಾಧು" ಎಂಬ ಪದವನ್ನು ಇಲ್ಲಿ ಬಳಸಿದ್ದು ಪಾಣಿನಿಯು ಹೇಳಿದಂತೆ ಧೀಮಂತರಿಗೆ ಉದ್ವೇಗವನ್ನುಂಟುಮಾಡುವಂಥದು ಎಂಬ ಅರ್ಥದಲ್ಲಿ ಮಾತ್ರ. ಅಂದರೆ ನ ಕಾರಕ್ಕೆ ಆದೇಶವಾಗಿ ಬಂದ ಅ ಕಾರಕ್ಕೆ ಇರುವ ಆರು ಅರ್ಥಗಳಲ್ಲಿ "ಅಪ್ರಾಶಸ್ತ್ಯ" ಎಂಬುದಿಲ್ಲಿ ಗ್ರಾಹ್ಯ. ಈ ಸಂದರ್ಭದಲ್ಲಿ ಭಾಷೆಗಳು ಸಂಸ್ಕೃತಿಗಳ ಅಂಗಗಳಲ್ಲಿ ಗಣ್ಯವಾಗಿರುವುದರಿಂದ ಪ್ರಸಿದ್ಧ ಶಾಸ್ತ್ರಜ್ಞ ಟಿ. ಎಸ್. ಎಲಿಯಟ್ ಹೇಳಿರುವುದನ್ನು ಗಮನಿಸೋಣ:

"Now it is obvious that one unity of culture is that of the people who live together and speak the same language: because speaking the same language means thinking and feeling, and having emotions. rather differently from people who use a different language But the cultures of different peoples to affect each other: in the world of future it looks as if every part of the world would affect every other part— ಒಟ್ಟಿಗೆ ಬಾಳುತ್ತ ಒಂದೇ ಭಾಷೆಯನ್ನು ಆಡುತ್ತ ಇರುವ ಜನರಲ್ಲಿ ಒಂದು ವಿಧದ ಐಕ್ಯವಿರುವುದು ಸ್ಪಷ್ಟ. ಏಕೆಂದರೆ, ಒಂದೇ ಭಾಷೆಯನ್ನಾಡುವುದೆಂದರೆ ಇತರ ಭಾಷಿಕರಿಗಿಂತ ಭಿನ್ನವಾಗಿ ವಿಚಾರ ಮಾಡುವುದು, ಅನುಭವ ಹೊಂದುವುದು ಮತ್ತು ಭಾವನೆಗಳನ್ನು ತಾಳುವುದು ಎಂದರ್ಥ. ಆದರೆ ಬೇರೆ ಬೇರೆ ಜನರ ಸಂಸ್ಕೃತಿಗಳು ಪರಸ್ಪರ ಪ್ರಭಾವವನ್ನು ಪರಸ್ಪರರ ಮೇಲೆ ಬೀರಿಯೇ ಬೀರುತ್ತವೆ: ಭಾವಿ ಜಗತ್ತಿನಲ್ಲಿ ಜಗತ್ತಿನ ಪ್ರತಿಯೊಂದು ವಿಭಾಗವೂ ಪ್ರತಿಯೊಂದು ಇತರ ವಿಭಾಗದ ಮೇಲೂ ಪರಿಣಾಮ ಬೀರುವುದು ಖಚಿತ ಎಂದು ತೋರುತ್ತದೆ (ಪುಟ 120–121, Notes towards the definition of culture). ಕನ್ನಡಿಗರೂ ಸಂಸ್ಕೃತ ಭಾಷಿಕರೂ ಕನ್ನಡಿಗರೇ ಅಥವಾ ಭಾರತೀಯರೇ ಆಗಿರುವುದರಿಂದ ಅವರ ಚಿಂತನ, ಭಾವನ ಮತ್ತು ಅನುಭವಗಳು ಏಕಕಾಲದಲ್ಲಿ ಭಿನ್ನ ಭಾಷಾ ಮಾಧ್ಯಮಗಳ ಮೂಲಕ ಹೊರಬೀಳುತ್ತ ಬಂದದ್ದು ಆಶ್ಚರ್ಯವಲ್ಲ. ಈ ಅಂಶವನ್ನು ಗಮನಿಸಿಯೇ ದಿ. ಎ. ಆರ್. ಕೃಷ್ಣಶಾಸ್ತ್ರಿಗಳ ಸಂಸ್ಕೃತ ಗುರುಗಳು ಮೈಸೂರಿನ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ "ಸಂಸ್ಕೃತವು ಅನ್ಯಭಾಷೆ" ಎಂಬ ಮಾತಿಗೆ "ಅನ್ಯಾ ಚಾಸೌ ಭಾಷಾ =ಭಿನ್ನಭಾಷೆ" ಎಂಬಷ್ಟೇ ಅರ್ಥವಲ್ಲದೆ, "ಅನ್ಯೇಷಾಂ ಭಾಷಾ ನ ಚಾಸೌ" = ಅನ್ಯ ಜನರ ಭಾಷೆಯಲ್ಲ " ಎಂದೇ ಅರ್ಥವೆಂದು ಕನ್ನಡಿಗರು ತಿಳಿದುಕೊಳ್ಳಬೇಕಾಗಿದೆ— ಎಂದು ಘಂಟಾಘೋಷವಾಗಿ ಹೇಳಿದ್ದು. ಇದು ಇತಿಹಾಸ ಪ್ರಸಿದ್ಧವಾಗಿ ಎಲ್ಲರಿಗೂ ತಿಳಿದ ಸಂಗತಿ. ಇದನ್ನು ಮರೆತರೆ ಸಂಸ್ಕೃತವು ಕನ್ನಡಿಗೇತರರ ಅಥವಾ ಭಾರತೀಯೇತರರ ಭಾಷೆ ಎಂಬ ಭ್ರಾಂತಿಯುಂಟಾಗುವುದು. ಕನ್ನಡ ಸಂಸ್ಕೃತಗಳು ಯಮಳ ಭಾಷೆಗಳು, ಅವಳಿಜವಳಿಗಳು ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಅವು "ಧಾರವಾಡ-ಹುಬ್ಬಳ್ಳಿ" ಎಂಬ ಮಹಾನಗರದಂತಿವೆ.

ಮಹಾಕವಿ ಟೀ. ಎಸ್. ಎಲಿಯಟ್ಟನ ಇನ್ನೊಂದು ಮಾತೂ ಇಲ್ಲಿ ಸಂಗ್ರಾಹ್ಯ: ಇಲ್ಲಿ ಬರುವ ಯುರೋಪಿಗೆ ಬದಲು ಭಾರತ ಎಂದಿಟ್ಟುಕೊಂಡರಾಯಿತು—

"My last appeal is to the men of letters of Europe, who have a special responsibility for the preservation and transmisson of our common culture. We may hold very different political views, our common responsibility is to preserve our common culture uncontaminated by political influences. It is not a question of sentiment: it does not matter so much whether we like each other or praise each other's writings. What matters is that we should recognise our relationship and mutual dependence upon each other. What matters is our inability, without each other to produce those excellent works which mark a superior civilisation...... We can at least try to save something of those goods of which we are common trustees; the legacy of Greece, Rome and Israel and the legacy of Europe throughout the last 2000 years. In a world which has seen such material devastation as ours, these spiritual possessions are also in immiuent peril—

ನನ್ನ ಕೊನೆಯ ಅಪೀಲು ಯುರೋಪಿನ ಸಾಹಿತಿಗಳಿಗೆ: ಅವರಿಗೆ ತಮಗೆ ಸಾಧಾರಣವಾದ ಸಂಸ್ಕೃತಿಯನ್ನು ಉಳಿಸುವ ಮತ್ತು ಪ್ರಸಾರ ಮಾಡುವ ಜವಾಬುದಾರಿಯಿದೆ. ನಾವು ಭಿನ್ನ ಭಿನ್ನ ರಾಜಕೀಯಾಭಿಪ್ರಾಯಗಳನ್ನಿಟ್ಟುಕೊಂಡಿರಬಹುದು. ರಾಜಕೀಯ ಪ್ರಭಾವಗಳಿಗೊಳಗಾಗದೆ ನಮ್ಮ ಸರ್ವ ಸಾಮಾನ್ಯವಾದ ಸಂಸ್ಕೃತಿಯನ್ನು ಸಂಮಿಶ್ರಿತವಾಗದಂತೆ ರಕ್ಷಿಸಿಕೊಳ್ಳುವುದು ನಮ್ಮ ಸರ್ವಸಾಧಾರಣವಾದ ಹೊಣೆ. ಇದು ಭಾವನಾ ಪರವಶತೆಯ ಮಾತಲ್ಲ. ನಾವು ಪರಸ್ಪರರನ್ನೂ ಪರಸ್ಪರರ ಕೃತಿಗಳನ್ನೂ ಮೆಚ್ಚಿದ್ದರೂ ಅಡ್ಡಿಯಿಲ್ಲ, ಹೊಗಳಿದ್ದರೂ ಅಡ್ಡಿಯಿಲ್ಲ. ಮುಖ್ಯವಾದ ಸಂಗತಿಯೆಂದರೆ, ನಮ್ಮ ಪರಸ್ಪರ ಸಂಬಂಧವನ್ನೂ ಅವಲಂಬನವನ್ನೂ ಮನ್ನಿಸುವುದು: ಉತ್ತಮ ನಾಗರಿಕತೆಯ ಗುರುತುಗಳೆನ್ನಿಸುವ ಅಂಥ ಮಹಾ ಕೃತಿಗಳನ್ನು ಪರಸ್ಪರ ಸಂಪರ್ಕವಿಲ್ಲದೆ ರಚಿಸಲಾಗದಿರುವ ಅಂಶ...ಕೊನೆಯ ಪಕ್ಷ ನಾವು ಕೆಲವು ಸರ್ವಸಾಧಾರಣ ವಸ್ತುಗಳನ್ನು ರಕ್ಷಿಸಿಕೊಳ್ಳಬಲ್ಲೆವು. ಗ್ರೀಸಿನ, ರೋಮಿನ ಮತ್ತು ಇಸ್ರೇಲಿನ (ಭಾರತದ ವಿಷಯದಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಘಟಿಕಾಸ್ಥಾನಗಳಿಂದ ಪ್ರಸಿದ್ಧವಾಗಿದ್ದ ನಗರಗಳ-ಲೇ.) ಹಾಗೂ ಯುರೋಪಿನ (ಭಾರತದ ವಿಷಯದಲ್ಲಿ ಭಾರತದ-ಲೇ) 2000 ವರ್ಷಗಳ (ನಮ್ಮಲ್ಲಿ 6000 ವರ್ಷಗಳ-ಲೇ) ಪಿತ್ರಾರ್ಜಿತ ಸಂಸ್ಕೃತಿಯನ್ನು ನಾವು ಉಳಿಸಿ-

ಕೊಳ್ಳಬೇಕು. ಭೌತಿಕ ಸಂಪತ್ತಿನ ಅತ್ಯಧಿಕ ವಿನಾಶವನ್ನು ಕಂಡ ಈ ಜಗತ್ತಿನಲ್ಲಿ ಆಧ್ಯಾತ್ಮಿಕ (ಅರ್ಥಾತ್ ಸಾಂಸ್ಕೃತಿಕ–ಲೇ.) ಸೊತ್ತುಗಳೂ ಸದ್ಯದಲ್ಲೇ ನಾಶಹೊಂದಿಯಾವೆಂಬ ಅಂಶವನ್ನು ನಾವು ಗಮನಿಸಬೇಕು.'' ಈ ಮಾತಿಗೆ ಸುಸಂಸ್ಕೃತ ಕನ್ನಡಿಗರು ಏನು ಮಾತಾಡಿಯಾರೇ ? ಎಂದಿಗೂ ಆಡರು.

ಅನ್ಯಾರ್ಥದಲ್ಲಿಯೂ ಕನ್ನಡದಲ್ಲಿ ಬಳಕೆಯಲ್ಲಿರುವ ಸಂಸ್ಕೃತ ಶಬ್ದಗಳು.

ಸಂಸ್ಕೃತ ಶಬ್ದ	ಸಂಸ್ಕೃತಾರ್ಥ	ಕನ್ನಡದ ಅರ್ಥ
ಅವಸರ	ಸಮಯ, ಪ್ರಸಂಗ ಅವಕಾಶ, ವಿರಾಮ, ವರ್ಷ, ವೃಷ್ಟಿಪಾತ, ಪ್ರಶಸ್ತ, ಆಪ್ತಾಲೋಚನೆ	ತ್ವರೆ, ಆತುರ
ಅಪರೂಪ	ಕುರೂಪ, ವಿಕೃತರೂಪ	ಅನರ್ಘ್ಯ, ವಿರಲ, ಅಪೂರ್ವ
ಅಲಕ್ಷ್ಯ	ಅಗೋಚರ, ಅನಭಿಜ್ಞಾತ, ಅವಿಶಿಷ್ಟಲಕ್ಷಣ, ಅಲ್ಪ, ಅನಾಭಾಸಿತ, ಅಗೌಣ	ಅನಾದರ, ತಾತ್ಸಾರ
ಖಂಡಿತ	ಕೃತ್ತ, ನಷ್ಟ, ಸಿದ್ಧದೋಷ, ಪ್ರತಿವಾದಹತ, ತ್ಯಕ್ತ	ನಿಷ್ಕೃಷ್ಟ ನಿಶ್ಚಿತ, ನಿಜ.
ದಾಹ	ತಾಪ, ಜ್ವರ	ಬಾಯಾರಿಕೆ
ದಾಹಶಾಂತಿ	ತಾಪಶಮನ	ಬಾಯಾರಿಕೆಯನ್ನು ಹಿಂಗಿಸಿಕೊಳ್ಳುವುದು
ನಿಜ	ಸಹಜ, ಸ್ವಾಭಾವಿಕ, ಸ್ವಂತದ, ವಿಶಿಷ್ಟ, ಶಾಶ್ವತ, ಚಿರಸ್ಥಾಯಿ	ಸತ್ಯ
ನಿದಾನ	ಪ್ರಗ್ರಹ, ಮೂಲಕಾರಣ, ರೋಗವಿಜ್ಞಾನ, ರೋಗ ಪರೀಕ್ಷೆ, ಸಮಾಪ್ತಿ, ಶುದ್ಧತೆ	ಮೆಲ್ಲಗೆ, ಸಾವಕಾಶ
ಪಂಡಿತ	ವಿದ್ವಾಂಸ	ಉಪಾಧ್ಯಾಯ, ವೈದ್ಯ
ಬ್ರಹ್ಮಾಂಡ	ಪ್ರಪಂಚ	ದೊಡ್ಡ, ಬಹಳ
ಭದ್ರ	ಶುಭ, ಪ್ರಗತಿ, ಉತ್ಥಾನ, ಉದ್ಧಾರ	ಗಟ್ಟಿ, ಎಚ್ಚರಿಕೆ
ಮರ್ಯಾದಾ (ದೆ)	ಎಲ್ಲೆ, ತುದಿ, ತೀರ, ಅಂಕ, ಲಕ್ಷಣ, ನೀತಿನಿಯಮ, ಔಚಿತ್ಯ-ಸೀಮೆ, ಸ್ವೀಕೃತ ನಿರ್ಬಂಧ	ಗೌರವ, ಮನ್ನಣೆ
ಲೋಭ	ದುರಾಶೆ, ಬಯಕೆ	ಪ್ರೇಮ

ವಿಪರೀತ	ವಿರುದ್ಧ, ಪ್ರತಿಕೂಲ, ಅತ್ಯಧಿಕ ಅಸತ್ಯ, ಅಗ್ರಾಹ್ಯ
ಸರಾಗ	ವರ್ಣಯುಕ್ತ, ರಕ್ತವರ್ಣಲಿಪ್ತ, ಸುಲಭ, ನಿರ್ವಿಘ್ನ ಲಾಕ್ಷಾಲಿಪ್ತ, ಮೋಹಯುಕ್ತ
ಸ್ನೇಹ	ಪ್ರೇಮ, ದಯೆ, ತೈಲಯುಕ್ತತೆ, ಗೆಳೆತನ ಆರ್ದ್ರತೆ, ಮೋಹಪಾಶ

ಇಂಥ ಸಂಸ್ಕೃತ ಶಬ್ದಗಳ ಸಂಸ್ಕೃತಾರ್ಥ–ಕನ್ನಡದ ಅರ್ಥಗಳೆರಡನ್ನೂ ಕನ್ನಡ ಬಳಸುತ್ತದೆ. ಲೋಭವು ಮರಾಠಿಯಿಂದ ಪ್ರೇಮವಾಗಿ ಉತ್ತರ ಕರ್ಣಾಟಕಕ್ಕೆ ಬಂದದ್ದು. ಸ್ನೇಹದಲ್ಲಿ ಅರ್ಥಸಾಮ್ಯವನ್ನು ಒಂದೇ ಒಂದು ಅರ್ಥದಲ್ಲಿ ಕನ್ನಡ ತೆಗೆದುಕೊಂಡಿದೆ.

ಇನ್ನೊಂದು ವಿಷಯ: ವಿಕಾರಕ್ಕೆಡೆಯಿರದ ಸಂಸ್ಕೃತ ಶಬ್ದಗಳನ್ನು ಶಕ್ಯವಿದ್ದಷ್ಟು ಮಟ್ಟಿಗೆ ಶುದ್ಧರೂಪದಲ್ಲಿಯೇ ಬಳಸಬೇಕೆಂಬ ಪ್ರವೃತ್ತಿಯನ್ನು ಕನ್ನಡಿಗರು ಹಿಂದಿನಿಂದ ಇಂದಿನವರೆಗೂ ಕಾಯ್ದುಕೊಂಡು ಬಂದಿದ್ದಾರೆ. ಸಂಸ್ಕೃತದ ಸಮಸ್ತಪದವು ಒಂದಕ್ಕಿಂತ ಹೆಚ್ಚು ಶಬ್ದಗಳಿಂದ ಕೂಡಿದ್ದಾಗಲೂ ಅದು ಒಂದು ಸ್ವತಂತ್ರ ಅರ್ಥವನ್ನು ಕೊಡುವುದರಿಂದ ಅಂಥ ಪದದಲ್ಲಿ ಸಂಯುಕ್ತಗೊಳಿಸುವ ಪದಗಳು ಕೇವಲ ಸಂಸ್ಕೃತ ಪದಗಳೇ ಆಗಿರಬೇಕು ಇಲ್ಲವೇ ಎಲ್ಲವೂ ಕನ್ನಡ ಶಬ್ದಗಳೇ ಆಗಿರಬೇಕು ಎಂಬುದನ್ನು ಅನುಲ್ಲಂಘನೀಯ ಉತ್ಸರ್ಗ ನಿಯಮವನ್ನಾಗಿ ಕನ್ನಡಿಗರು ಸ್ವೀಕರಿಸಿದ್ದಾರೆ. ನೃಪತುಂಗನ ಕಾಲದಿಂದಲೂ ಇದು ನಡೆದುಬಂದದ್ದು. ಅರಿಸಮಾಸಗಳು ಕನ್ನಡದಲ್ಲಿ ಅಪವಾದಗಳು (Exceptions).

ಶ್ರೀ ಪ್ರ. ಗೋ. ಕುಲಕರಣಿಯವರು ಇಂದಿನ ಪ್ರಸಿದ್ಧ ಸಾಹಿತಿಗಳಲ್ಲಿಯ ಕೆಲವರು ಮಾಡಿದ ನಿಂದ್ಯ ಪ್ರಯೋಗಗಳನ್ನು ಹೀಗೆ ಕೊಟ್ಟಿದ್ದಾರೆ:

ನಿಂದ್ಯ	ವಂದ್ಯ
ವೃತ	ವ್ರತ
ಧೃವ	ಧ್ರುವ
ಜಿಷ್ನು	ಜಿಷ್ಣು
ಮಾಧ್ಯಾನ್ಹ	ಮಧ್ಯಾಹ್ನ
ಪತ್ನಿಸು	ಯತ್ನಿಸು
ರಾತ್ರೆ	ರಾತ್ರಿ
ಪ್ರಾಮುಖ್ಯತೆ	ಪ್ರಾಮುಖ್ಯ

ಪಾಶ್ಚಿಮಾತ್ಯ	ಪಾಶ್ಚಾತ್ಯ
ಪೌರ್ವಾತ್ಯ	ಪೌರಸ್ತ್ಯ
ತೃತಿ	ಪ್ರುತಿ

ಇತ್ಯಾದಿ

ಇಷ್ಟಲ್ಲದೆ, ಕೈಲಾಸಂ ಅವರ ನಾಟಕಗಳಲ್ಲಿ ಕಂಡು ಬರುವ "ಆಂಗ್ಲ ಕನ್ನಡ ಪೆರಪರೆಷನ್ ನಾ ರ್ಯಾಂಗ್ಲರ್ ನೋಟ್" ಎಂದು ಹೆಸರ್ಪಡುವ "ಬಟ್ಲರ್ ಕನ್ನಡ" ವನ್ನು ಅವರು ಸರ್ವಥಾ ತ್ಯಜಿಸಿದ್ದಾರೆ. ಏಕೆಂದರೆ ಅದು ಕನ್ನಡ ಭಾಷೆಗೆ ಅಗೌರವ ತರುತ್ತದೆ. ಅನ್ಯದೇಶದ ಭಾಷೆಗಳಿಂದ ಪದಗಳನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆಯುಂಟಾದಾಗ "ಹಾಸ್ಪಿಟಲ್ಲನ್ನು" "ಆಸ್ಪತ್ರೆಯನ್ನಾಗಿ" ಕನ್ನಡ ಭಾಷಾಧರ್ಮಕ್ಕೆ (ದ್ರಾವಿಡ ಭಾಷಾ ಸ್ವಾಭಾವಿಕತೆಗೆ) ಅನುಗುಣವಾಗಿ ತದ್ಭವೀಕರಿಸಿಯೇ ತೆಗೆದುಕೊಳ್ಳುವುದು ಗ್ರಾಹ್ಯವೆಂಬುದನ್ನು ಯಾರೂ ಮರೆಯಬಾರದು. ಏಕೆಂದರೆ ದ್ರಾವಿಡಭಾಷೆಯ ವ್ಯಾಕರಣಗಳು ವಿಭಕ್ತ್ಯಾದಿ ಅನೇಕ ವಿಷಯಗಳಲ್ಲಿ ಸಂಸ್ಕೃತ ವ್ಯಾಕರಣಗಳನ್ನು ಅನುಸರಿಸುತ್ತ ಬಂದಿವೆ. ಇರುವ ಅಲ್ಪ ಶತಾಂಶ ಕನ್ನಡ ವೈಶಿಷ್ಟ್ಯವನ್ನು ಬಿಡಬೇಕೆಂದು ಯಾರೂ ಹೇಳರು. ಆದರೆ ಆ ಅಂಶವು ಕನ್ನಡ ವ್ಯಾಕರಣದ ಪ್ರಸಿದ್ಧ ಗ್ರಂಥಗಳಲ್ಲಿ ಹೇಳಿದ ಮಾದರಿಯದಾಗಿರಬೇಕು. ಇಲ್ಲ-ವಾದರೆ ಬೇರೆ ಬೇರೆ ಕಲೆಯೇ ಎದ್ದು ಕಾಣುವಂತಾದೀತು. ಅಪವಾದಾತ್ಮಕ ವಿಷಯಗಳು ಇಂತಿವೆ: ಅಚ್ಚಗನ್ನಡದಲ್ಲಿ ಅಕಾರಾಂತ ಶಬ್ದಗಳು ಇಲ್ಲ. ಪ್ರತ್ಯಯದಿಂದಾದ ಕ್ರಿಯಾರೂಪಗಳು ಹಳೆಗನ್ನಡದಲ್ಲಿಲ್ಲ. ಕನ್ನಡದಲ್ಲಿಯೂ ದ್ರಾವಿಡ ವರ್ಗದ ಇನ್ನಿತರ ಭಾಷೆಗಳಲ್ಲಿಯೂ ಶುದ್ಧವಾದ ವರ್ತಮಾನ ಕಾಲವನ್ನು ನಿರ್ದೇಶಿಸುವ ಪ್ರತ್ಯಯವು ಹಿಂದೆ ಇರಲಿಲ್ಲ. ಆದರೆ ಇಂದು ಇದೆ— ಇರಬೇಕಾಗಿದೆ. ಹಾಗೇ ಗದ್ಯದಲ್ಲಾಗಲಿ ಪದ್ಯದಲ್ಲಾಗಲಿ ಪದಮಧ್ಯ ಸಂಧಿಯಂತೆಯೇ ಪದಾಂತ ಸಂಧಿಯನ್ನೂ ಉತ್ಸರ್ಗವೆಂದೇ ತಿಳಿಯುವದು ಶೈಲಿ ಗಾಂಭೀರ್ಯವನ್ನು ಹೆಚ್ಚಿಸುತ್ತದೆ. ಹಾಗೆ ನೋಡುವುದು ಗದ್ಯಕ್ಕಿಂತ ಪದ್ಯದಲ್ಲಿ ಹೆಚ್ಚು ಶೈಥಿಲ್ಯವನ್ನು ತರುತ್ತದೆ ಎಂಬುದು ಸಹೃದಯರಿಗೆ ತಿಳಿದ ಸಂಗತಿ. ಸಂಧಿಗೆ ಉಚ್ಚಾರ ಸೌಲಭ್ಯ ಮತ್ತು ಸುಶ್ರಾವ್ಯತೆಗಳು ನಿಕಷಗಳು.

ಕನ್ನಡ, ತುಳು, ತೆಲುಗು, ತಮಿಳು, ಮಲೆಯಾಳ ಮುಂತಾದ ಸೋದರೀ ಭಾಷೆಗಳಿಂದ ಅಥವಾ ಇತರ ಭಾಷೆಗಳಿಂದ ಸಂಸ್ಕೃತ ಪಡೆದುಕೊಂಡ ಅಂಶಗಳು ಸಾಹಿತ್ಯದಲ್ಲಿ ಅಲ್ಪಸಂಖ್ಯೆಯವು. ಆದರೂ ಗುಣಾತ್ಮಕವಾಗಿ ಬಹಳ ಗಣ್ಯ. "ದ್ರಾವಿಡ ಭಾಷೆಗಳಿಂದ" ವನ್ನು ಮಾತ್ರವೇ ಕೇವಲ ಕನ್ನಡದಿಂದ ಎಂದು ಹೇಳಲು ಸಾಧ್ಯವಾಗದ ಕಾರಣಗಳೆಂದರೆ—

1) ಸಂಸ್ಕೃತದಲ್ಲಿ ಕಂಡು ಬರುವ ಮೂರ್ಧನ್ಯ ವ್ಯಂಜನಗಳು

2) ಸಮಸ್ತ ಪದಗಳಲ್ಲಿ ಪೂರ್ವಪದಾಂತ್ಯ ಕಟತಪ ಕಾರಗಳು ಸರಳ ವ್ಯಂಜನಗಳಾಗಿ ಗಜಡದಬ ಗಳಾಗುವುದು (ಜಶ್ತ್ವಸಂಧಿ) ದ್ರಾವಿಡದ ಪದಮಧ್ಯ ಪರುಷ ವ್ಯಂಜನಗಳು ಸರಳಗಳಾಗಿ ಪರಿವರ್ತಿಸುವುದು ಸಂಸ್ಕೃತದ ಅನುಕರಣದಿಂದ ಎಂಬುದು ಇನ್ನೊಂದು ಅಭಿಪ್ರಾಯ.

3) ದ್ರಾವಿಡದ "ದಂಡನ್" ಎಂಬುದನ್ನು ಸಂಸ್ಕೃತದ "ಕೃತವಾನ್" ಎಂಬಂತಹ ರೂಪಗಳ ನಿರ್ಮಾಣದಲ್ಲಿ ಅನುಕರಿಸಲಾಗಿದೆ—ಎಂಬುದು ಇನ್ನೊಂದು ಅಂಶ.

4) "ಪೃಥ್ವಿ"ಯು ಪೃಥಿವೀ ಎಂದೂ "ಸ್ವರ್ಣವು" ಸುವರ್ಣವೆಂದೂ ಸಂಯುಕ್ತ ವ್ಯಂಜನದ ಬಿಂಗಡನೆಯಾಗುವುದು ಸಂಸ್ಕೃತವಮಾಡಿದ ದ್ರಾವಿಡಾನುಕರಣ—ಅದೂ ಪ್ರಾಕೃತದ ಮೂಲಕ—ಎಂಬುದೊಂದು ಮತ.

5) ಲೌಕಿಕ ಸಂಸ್ಕೃತದ ಕೆಲ ಕ್ರಿಯಾಪದ ರೂಪಗಳು ದ್ರಾವಿಡ ಪ್ರಭಾವಿತ ಎಂಬುದಿನ್ನೊಂದು.

6) ಹಿಂದೆ ಹೇಳಿದ ಚಂಪೂಕಾವ್ಯರೂಪಕ್ಕೆ ಕನ್ನಡವೇ ಮೂಲವು. ದಂಡಿಯೇನೋ "ಗದ್ಯಪದ್ಯಮಯೀ ಕಾಚಿತ್ ಚಂಪೂರಿತ್ಯಭಿಧೀಯತೆ" ಎಂದು ಹೇಳಿದ್ದುಂಟು. ದಂಡಿಯಕಾಲ ಸುಮಾರು ಕ್ರಿ. ಶ. 600–700 ರ ನಡುವೆ.

7 ಕನ್ನಡಲಿಪಿತರಗಳಿಯು ಸಂಸ್ಕೃತಾನುಕರಣವನ್ನು ಆಗಲೇ ಕೊಡಲಾಗಿದೆ.

ಸಂಸ್ಕೃತ→ಪ್ರಾಕೃತ→ಅಪಭ್ರಂಶ ಎಂಬ ಭಾಷಾ ವಿಕಾಸವು ಉತ್ಸರ್ಗವಾದರೂ ಸಂಸ್ಕೃತದ "ವಿಕೃತ" ವು ಪ್ರಾಕೃತದಲ್ಲಿ "ವಿಕಟ" ವಾಗಿ ಪುನಃ ಸಂಸ್ಕೃತವನ್ನು ಸೇರಿಕೊಂಡಿತೆಂಬುದು ಕೆಲ ವಿದ್ವಾಂಸರ ಮತ. ಆದರೆ ನೇರವಾಗಿ ಕನ್ನಡ ಪದ-ಗಳನ್ನು ಸಂಸ್ಕೃತ ತೆಗೆದುಕೊಂಡದ್ದಕ್ಕೆ ಕೊಟ್ಟ ಉದಾಹರಣೆಗಳೆಲ್ಲ "ಇದಮಿತ್ಥಂ" ಎಂಬ ರೀತಿಯವುಗಳಲ್ಲವಾದುದರಿಂದ ಅವುಗಳನ್ನು ಸಂಸ್ಕೃತ-ಕನ್ನಡ ಸಾಧಾರಣ ಎಂದು ಹಿಂದೆ ಹೇಳಲಾಯಿತು.

ಮೇಲಿನ ಹಲವಾರು ನಿದರ್ಶನಗಳು ಕನ್ನಡವು ಸಂಸ್ಕೃತ ಜನ್ಯವಲ್ಲ-ವೆಂದಾದರೂ ಅದಕ್ಕೆ ಹಿಂದಿನಿಂದಲೂ ಇಂದೂ ಸಂಸ್ಕೃತದ ಸಂಬಂಧ ಅನಿವಾರ್ಯ ಎಂಬುದು ಸ್ಪಷ್ಟವಾಗುತ್ತದೆ. ಸಂಸ್ಕೃತದಲ್ಲಿರುವ ಶಾಸ್ತ್ರವಾಙ್ಮಯದ ವೈಪುಲ್ಯ-ವೈವಿಧ್ಯಗಳು ಕನ್ನಡದಲ್ಲಿಲ್ಲವಾದುದರಿಂದಲೂ ಸಂಸ್ಕೃತವು ಕನ್ನಡೇತರ ಪ್ರದೇಶದಲ್ಲಿ ಮಾತ್ರ ಹುಟ್ಟಿ ಬೆಳೆದ ಭಾಷೆಯಲ್ಲವಾದುದರಿಂದಲೂ ಅದರ ನಿಕಟತೆಯು ಆಧುನಿಕ ಕನ್ನಡಕ್ಕೆ—ಅದರ ಅಖಿಲ ಭಾರತೀಯ ಅಂತಸ್ತಿಗೆ—ಶಾಸ್ತ್ರವಾಙ್ಮಯಾ-ಭಿವೃದ್ಧಿಗೆ—ಕಾವ್ಯಗಾಂಭೀರ್ಯ ಶೋಭೆಗೆ ಅಗತ್ಯ ಎಂಬುದು ಸ್ವತಸ್ಸಿದ್ಧ. ಇದು ಕೇವಲ ಕನ್ನಡಕ್ಕೆ ಮಾತ್ರವಲ್ಲ—ಭಾರತೀಯ ಆಡುಮಾತುಗಳೆಲ್ಲವುಗಳಿಗೂ ಈ ಅಗತ್ಯವಿದೆ.

ಆದಿಪಂಪನು ತನ್ನ ಕಾವ್ಯಗಳನ್ನು "ಸಾಜಮಾದ ಪುಲಿಗೆರೆಯ ತಿರುಳ್ಗನ್ನಡ" ದಲ್ಲಿ ಬರೆದನೆಂದುಕೊಂಡದ್ದನ್ನು ನೋಡಿದರೆ ಇಂದು ಕೆಲವರು ಹೇಳುವ ಸಂಸ್ಕೃತ ಭೂಯಿಷ್ಠತೆಯು ಮಿಥ್ಯಾರೋಪವಾಗುತ್ತದೆ. ಭಾಮಹ ಹೇಳಿರುವಂತೆ ಶ್ರುತಿ-ದುಷ್ಟ, ಅರ್ಥದುಷ್ಟ, ಕಲ್ಪನಾದುಷ್ಟ ಮತ್ತು ಶ್ರುತಿಕಷ್ಟ ಎನ್ನಿಸುವ ಪದಗಳು ಯಾವ ಭಾಷೆಯವುಗಳಾದರೂ ತ್ಯಾಜ್ಯ-ಎಂಬುದನ್ನು ಕನ್ನಡ ಬರಹಗಾರರು ತಿಳಿದರೆ ಸಾಕು; ಹಾಗೇ ಇಂಗ್ಲೀಷು ಮುಂತಾದ ಅಭಾರತೀಯ ಭಾಷೆಗಳಿಂದ ನಿವಾರ್ಯವಾಗಿ ಪದಗಳನ್ನು ತೆಗೆದುಕೊಳ್ಳುವುದು ದುರಭ್ಯಾಸ ಎಂಬುದನ್ನು ಅರಿತರೆ ಸಾಕು.

ಭಾರತ ಸರಕಾರವು ಪ್ರಕಟಿಸಿದ "Provisional list of Technical Terms in Hindi" ಎಂಬ ಕೋಶವಮಾಲೆಯಲ್ಲಿರುವ ಪದಸ್ವೀಕಾರ, ಪದ ನಿರ್ಮಾಣಗಳ ನಿಯಮವು ಕನ್ನಡಕ್ಕೂ ಗ್ರಾಹ್ಯ ಎಂಬುದಕ್ಕೀಗ ಪೋಲೀಸನು "ಆರಕ್ಷಕ" ನಾಗಿರುವುದು ಸಾಕ್ಷಿ. ಪೋಲೀಸನು ಪೋಲೀಸನಾಗಿಯೇ ಇರಬಹು-ದಾಗಿತ್ತು. ಆದರೆ ಕಾಳಿದಾಸನು ಆವರನ್ನು ರಕ್ಷಿಗಳೆಂದು ಕರೆದಿರುವುದನ್ನವ-ಲೋಕಿಸಿಯೋ ಏನೋ ಹಿಂದಿಯು "ಆರಕ್ಷಕ" ಪದವನ್ನು ನಿರ್ಮಿಸಿಕೊಂಡಿತು. ಉಕ್ತ ಮಾಲಿಗಳಲ್ಲಿರುವುದನ್ನು ಸಂಸ್ಕೃತದಲ್ಲಿರುವ ವಿವಿಧ ಶಾಸ್ತ್ರಗಳನ್ನು ಚೆನ್ನಾಗಿ ಓದಿದವರಿಗೆ ಕೊಟ್ಟರೆ, ಇನ್ನೂ ಶ್ರುತಿಸುಭಗ, ಉಚ್ಚಾರಣಸುಲಭ ಎನ್ನಿಸುವ ಪದಗಳನ್ನು ಪಾರಿಭಾಷಿಕಗಳ ಪಟ್ಟಿಗೆ ಸೇರಿಸಿಕೊಟ್ಟಾರು. ಸಂಸ್ಕೃತದ ಘನ ವಿದ್ವಾಂಸನಿಲ್ಲದ ಸಮಿತಿಗಳು ಯಾವ ಭಾರತೀಯ ಭಾಷೆಗೇ ಆಗಲಿ ದೇಶೀಯವೂ ಲಲಿತವೂ ಸಮ್ಯಗರ್ಥ ಸಂಪನ್ನವೂ ಆಗಿರುವ ಪಾರಿಭಾಷಿಕಗಳನ್ನು ನೀಡಲಾರವು. ಡಾ. ಡಿ. ವಿ. ಗುಂಡಪ್ಪನವರು ಚುನಾವಣೆಗೆ ನಿರ್ವಾಚನಕ್ಕಿಂತ "ವರಣ" ಎನ್ನುವುದುತ್ತಮ ಎಂದಿದ್ದರು. "ಚುನಾವಣೆ"ಯೂ ನಿರ್ವಾಚನಕ್ಕಿಂತ ಉತ್ತಮ. ಈ ಅಂಶಗಳತ್ತ ಗಮನವಿತ್ತು ಕನ್ನಡನಾಡಿನ ಸಂಸ್ಕೃತ—ಕನ್ನಡಪಂಡಿತರು ಹಿಂದಿಗೆ ಸಹ ಈ ಕಾರ್ಯದಲ್ಲಿ ಹೆಚ್ಚು ಸಹಾಯಕರಾದಾರು. ನ್ಯಾಯಪಾಲಿಕೆ, ಕಾರ್ಯಪಾಲಿಕೆ, ನಗರಪಾಲಿಕೆಗಳಿಗಿಂತ ನ್ಯಾಯಾಂಗ, ಕಾರ್ಯಾಂಗ, ನಗರಸಭೆಗಳು ಎಲ್ಲ ಭಾರತೀಯ ಭಾಷೆಗಳಿಗೂ ಹೆಚ್ಚು ಗ್ರಾಹ್ಯವಾದಾವು. ಕರ್ಣಾಟಕದ ಸಂಸ್ಕೃತ–ಕನ್ನಡ–ಆಂಗ್ಲ ವಿದ್ವಾಂಸರಿಗೆ ನಮ್ಮ ರಾಜ್ಯ ಸರಕಾರವು ಪಟ್ಟಗಟ್ಟಿ ದಿಲ್ಲಿಯ ಶಾಖೆಗೆ ಕಳಿಸಿ ಕೊಡಬೇಕು.

ಪದ್ಮವಿಭೂಷಣ ಡಾ. ಶಿವರಾಮ ಕಾರಂತರು ಪ್ರಚುರಪಡಿಸಿದ ಯಕ್ಷಗಾನ ಪ್ರಪಂಚದ ಜಾನಪದೀನ ಕನ್ನಡದ ವರ್ತಮಾನ ಸ್ವರೂಪಕ್ಕೆ ವಿ. ಬವಲಾಡಿ ಹಿರಿಯಣ್ಣ ಹೆಬ್ಬಾರರು ರಚಿಸಿದ ಪ್ರಸಿದ್ಧ (ಕಾವ್ಯಾಲಯ, ಮೈಸೂರು) ವಾದ "ಭಾನುಮತೀಕಲ್ಯಾಣ" ವೆಂಬ ಯಕ್ಷಗಾನ ನೃತ್ಯನಾಟಕದ ಪದ್ಯಗಳ ಕನ್ನಡ ಶೈಲಿಯು ಇಂದು ಪ್ರಾತಿನಿಧಿಕ. ಅವರು ಹಿಂದೆ ಬರೆದು ಜನಪ್ರಿಯಗೊಳಿಸಿದ "ಪಾಂಡವ

ವಿಜಯ" ಮತ್ತು "ವಿಶ್ವಾಮಿತ್ರ ಪ್ರತಾಪ" ಗಳ ಶೈಲಿಯಿಂದ ಇದರ ಶೈಲಿಯು ಭಿನ್ನವಾಗಿಲ್ಲವಾದುದರಿಂದ ಮತ್ತು ಇದು ಅವರು ಬರೆದ ಕೊನೆಯ ಪರಿಪಕ್ವ ಯಕ್ಷಗಾನ ನೃತ್ಯನಾಟಕವಾದುದರಿಂದ ಇದರ ಕೆಲವು ಪದ್ಯಗಳನ್ನು ಮಾದರಿಗಾಗಿ ಉದಾಹರಿಸಿದರೆ 20ನೆಯ ಶತಮಾನದ ಗ್ರಾಮೀಣ ಕನ್ನಡದ ಉನ್ನತ ಮಟ್ಟದಲ್ಲಿರುವ ಸಂಸ್ಕೃತ-ಕನ್ನಡಗಳ ಬಾಂಧವ್ಯದ ಪರಿಚಯ ಚೆನ್ನಾಗಿ ಆಗುವುದು.

ರಾಗ ಮಧ್ಯಮಾವತಿ, ತಾಳ—ತ್ರಿವುಟ

ಜಲಕೇಳಿಯಾಡಿದರು। ಯಾದವರೆಲ್ಲ
ಜಲಕೇಳಿಯಾಡಿದರು॥ ಪಲ್ಲ॥
ಸತಿಯರು ಪತಿಗಳೊಳು। ಬೆರೆತು ಜತೆ
ಜತೆಯಾಗಿ ತಮ್ಮೊಳು। ಅತಿಹರುಷದಲಿ ಹಿ
ಗ್ಗುತ ಪರಸ್ಪರೋಕ್ತಿಯಿಂ। ಡುತ ನಸುನಗುತ ನಿ
ಲ್ಲುತ ಕ್ರೀಡಾ ಯೋಗಸಂಯೋಗ। ಸತಿಪತಿಗೆ ಪತಿಸತಿಗೆ ನೀರೆರ
ಚುತ ರಾಗಮಾಯಿಂದ ಕೇಳ್ದು ಸಮಯದ
ಮಿತಿಯನುಸರಿಸುತ ಮುಳುಗುತೇಳುತ
ನುತಿಸಿ ನಿಂದಿಸಿಕೊಳುತ ನಲಿಯುತ॥ ೧॥

ನಲಿನಾಕ್ಷನಾಜ್ಞೆಯೊಳು। ನಾವೆಗಳಲ್ಲಿ
ಹೊಕ್ಕವನೇಕರು।
ಕೆಲರು ಧೀವರ ವೇಷ। ಗಳಲೊತ್ತಿಹಾಯ್ಸುತ್ತ
ಕೆಲಬರು ನಾವಗಳೊಳಗೇರಿ ನಲಿಯುತ್ತ
ಲಲನೆಯರು ದನಿದೋರಿ ಪಾಡುತ
ಘುಳುಘುಳಿಪ ಕಲ್ಲೋಲಮಾಲೆಯು
ನಾವೆಗಳ ಬಡಿದೊತ್ತಿಯಲ್ಲಿಯೆ
ಮುಳುಗುತಿನ್ನೊಂದೆಡೆಯಲೇಳುತ ॥೨॥
ಶರಧಿಯೊಳೀಜುವರು। ಕ್ರೀಡಿಸಿ ಹರಿ
ಸಲಿಲದಿಂದ ಬಳಿಕೆದ್ದರು।
ಧರಿಸಿ ಮಡಿವಸ್ತ್ರಾ।ಭರಣ ಸಗಂಧಕ
ಸ್ತೂರಿಗಂಧದೊಳಿದು ಕ್ಕುಂ।ಗರಿಸಿ ಕೊಂಡಮಲ ಕ
ರ್ಪೂರದ ವೀಳ್ಯವ ಸವಿದು ಪ್ರೀಯತ
ಗರಿಗೆ ಸಾರುವ ನೃತ್ಯಗಾಯನ।
ಮುರಜ ತಾಳ ಮೃದಂಗ ತಾಡನ
ಭರದ ಕಾರ್ಯಗಳಿಂದ ನಲಿದರು॥೩॥

ತತ್ಸಮ ಹೆಚ್ಚಾಗಿರುವ ಪದ್ಯಗಳು ಜಾನಪದವಲ್ಲ: ಗ್ರಾಮ್ಯಗಳಿಂದ ತುಂಬಿದ ಹಾಡುಗಳಷ್ಟೇ ಜಾನಪದೀಯ—ಎಂಬವರಿಗಿದು ಸವಾಲು. ಮುದ್ದಣ ಬರೆದ "ಕುಮಾರ ವಿಜಯ"ವನ್ನೂ ಟೀಕಾದಲೆ ಅಂಥವರು ಓದಲಿ ಎಂದು ನಮ್ಮ ಬಿನ್ನಹ

ಯಕ್ಷಗಾನದ ಗದ್ಯ ಸಂಭಾಷಣೆ

ಅತಿಕಾಯನ ಕಾಳಗ

ಅತಿಕಾಯ : "ಅಪ್ಪಾ, ನನ್ನ ತಂದೆಯವರೀಗ ಯೇನು ಮಾಡುತ್ತಾರೆಂದರೆ–ತಾನು ತ್ರೈಲೋಕ್ಯವೀರನಾಗಿರುತ್ತೇನೆ. ನನಗೆ ಬ್ರಹ್ಮಾದಿ ದೇವತೆಗಳೆಲ್ಲರೂ ವಶವರ್ತಿಗಳಾಗಿರುತ್ತಾರೆ ಎಂಬ ಮದಾತ್ಮದ ಅಹಂಕಾರವು ತಲೆಗಡರಿದ್ದರಿಂದ ಕಾಲಾಕಾಲ, ಸ್ಥಾನಾಸ್ಥಾನ, ನ್ಯಾಯಾನ್ಯಾಯ, ಯುಕ್ತಾಯುಕ್ತ ವಿಚಾರಗಳಿಲ್ಲದೆ ಕೇವಲ ಗರ್ವೋದ್ರೇಕದ ಮಾತುಗಳನ್ನೇ ಆಡುತ್ತಾರೆ. ಆದರೆ ಆ ಮಾತುಗಳೆಲ್ಲವೂ ನನಗೆ ಅತ್ಯಂತ ಕರ್ಣಕಠೋರವಾಗುವುದರಿಂದ ಅವರಿಗೆ ನಾನು ತಿಳಿದ ಮಟ್ಟಿಗೆ ಕೆಲವು ನೀತಿವಚನಗಳನ್ನು ಹೇಳುತ್ತೇನೆ : ತಂದೆಯವರ ಪಾದಗಳಿಗೆ ಸಾಷ್ಟಾಂಗ ವಂದನೆ ಮಾಡಿದ್ದೇನೆ."

ರಾವಣ : "ಯಾರದು ? ಅತಿಕಾಯನೋ ? ಮಗನೇ ಕೇಳು. ನಮ್ಮ ಕಾರ್ಯಭಾರವೆಲ್ಲವೂ ನಿನಗೆ ಗೊತ್ತಾಗುತ್ತಿಲ್ಲವೋ ? ಈಗಲೇ ಹೊರಡಲಿಕ್ಕೆ ಸಿದ್ಧನಾಗು."

ಅತಿಕಾಯ : "ಸ್ವಾಮಿ, ನಿಮ್ಮ ಕಾರ್ಯಭಾರವೆಲ್ಲವೂ ಚೆನ್ನಾಗಿ ತಿಳಿಯಲಿಲ್ಲ. ಅತ್ಯಂತ ಕ್ರುದ್ಧರಾಗಿ ಯುದ್ಧಕ್ಕೆ ಹೋಗುತ್ತೇನೆಂಬ ಗದ್ದಲ ಮಾತ್ರ ಕೇಳುವದಲ್ಲದೆ ಯಾರ ಮೇಲೆಯೆಂಬುದು ಸರಿಯಾಗಿ ಕೇಳಲಿಲ್ಲ. ಅದನ್ನು ತಿಳಿಸಬೇಕು ಸ್ವಾಮಿ."

ರಾವಣ : "ಅತಿಕಾಯನೆ ಕೇಳು : ಆ ರಾಮನೆಂಬ ಹುಲುಮನುಷ್ಯನು ಕೆಲವು ಮಂಗಗಳ ಹಿಂಡನ್ನು ಕಟ್ಟಿಕೊಂಡು ನಮ್ಮಲ್ಲಿಗೆ ಬಂದಿರುವನಷ್ಟೆ. ಅತನೊಡನೆ ತೊಡಗಿದ ಯುದ್ಧದಲ್ಲಿ ನಿನ್ನೆ ನಮ್ಮ ಕಡೆಯಿಂದ ಹೋಗಿರುವ ಕೆಲವು ರಾಕ್ಷಸರು ನಾಶವಾಗಿದ್ದಾರೆಯೆಂಬ ವರ್ತಮಾನ ಬಂದಿರುವ ಕಾರಣ, ನಾನು ಸ್ವತಃ ಆ ರಾಮನ ಯುದ್ಧಕ್ಕೆ ಹೋಗಿ ಅವನನ್ನೊಡ್ಡಿ ಕೊಂದು ಬರಬೇಕೆಂತ ಹೊರಡುತ್ತೇನೆ. ನೀನು ಸಹ ಸನ್ನದ್ಧನಾಗಿ ಹೊರಡು".

ಅತಿಕಾಯ : "ಏನು ? ರಾಮನ ಮೇಲೆ ಯುದ್ಧಕ್ಕೆ ಹೋಗುತ್ತೀರಾ ? ಅರಿಕೆ ಮಾಡುತ್ತೇನೆ : ಸ್ವಾಮಿ, ನೀವು ಈ ಪ್ರಕಾರ ಯಾಕೆ ಮರುಳಾಗುತ್ತೀರಿ ?

ಯಾವ ಸತ್ಕಾರ್ಯವನ್ನು ಕೈಕೊಂಡಿರಿ? ಇದು ಯಾವ ಧರ್ಮ ? ಆ ರಘುನಾಥನಾದ ರಾಮದೇವರಲ್ಲಿ ನಿಮಗೆ ಯುದ್ಧವೇ ? ನೀವು ಅತನನ್ನು ಗೆಲ್ಲುವಿರೇ ? ಅಯ್ಯೋ—ಇಂಥಾ ಮರುಳು ನಿಮ್ಮಂಥವರಿಗೆ ಹಿಡಿಯಬಹುದೇ ? ಲೋಕದಲ್ಲಿರುವ ಅಲ್ಪರಾದವರಿಗೆ ಇಂಥಾ ಭ್ರಮೆ ಹಿಡಿದು ಅದರಿಂದವರು ಕೆಟ್ಟು ಹೋಗುವದಾದರೆ ಅಷ್ಟೊಂದು ವಿಶೇಷವಲ್ಲ. ಯಾಕೆಂದರೆ, ಅವರನ್ನು ಯಾರೂ ಹೇಳುವವರೂ ಇಲ್ಲ, ಕೇಳುವವರೂ ಇಲ್ಲ, ನಿಮ್ಮ ಸಂಗತಿ ಹಾಗಲ್ಲ. ಸಮಸ್ತ ಲೋಕದಲ್ಲಿ ವಿಖ್ಯಾತರಾಗಿರುತ್ತೀರಿ. ಅಂದರೆ, ಬ್ರಹ್ಮರ್ಷಿಗಳಾದ ವಿಶ್ರವಸ್ಸೆಂಬ ಮಹಾತಪಸ್ವಿಗಳ ಮಗನಾದ ಕಾರಣ ಉತ್ತಮ ಕುಲದಲ್ಲಿ ಹುಟ್ಟಿದವರೂ ಚತುರ್ವೇದ–ಷಟ್‌ಶಾಸ್ತ್ರ-ಅಷ್ಟಾದಶ ಪುರಾಣಗಳಲ್ಲೆಲ್ಲಾ ಪಾರಂಗತರಾದವರೂ ತಪೋಬಲದಿಂದ ಬ್ರಹ್ಮರುದ್ರಾದಿ ದೇವರನ್ನು ವಲಿಸಿಕೊಂಡು ಅವರಿಂದ ಮಹಾ ಮಹಾ ವರಗಳನ್ನು ಪಡಕೊಂಡವರೂ ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ಮೂರು ಲೋಕಗಳಲ್ಲೆಲ್ಲಾ ಹೋಗಿ ದಿಗ್ವಿಜಯವನ್ನು ಮಾಡಿಕೊಂಡು ಬಂದವರೂ ಆಗಿರುವಿರಾದ ಕಾರಣ–ತ್ರೈಲೋಕ್ಯವೀರ, ದೈತ್ಯಕುಲೋದ್ಧಾರ, ಪಾರಾವಾರಗಂಭೀರ, ರಾವಣೇಶ್ವರ ಎಂತ ಅನೇಕ ವಿಧಾನಗಳಿಂದ ಸಮಸ್ತ ಜನಾಂಗವು ನಿಮ್ಮನ್ನು ಕೊಂಡಾಡುವದರಿಂದ ನೀವು ಲೋಕೈಕವಿಖ್ಯಾತರಾದ ಮಹಾಪುರುಷರಾಗಿರುತ್ತೀರಿ. ಇಂಥ ಮಹನೀಯರಾದವರು ಇಂಥಾ ಮರುಳಾಟ ಮಾಡುವದು ಯೋಗ್ಯವೇ ? ಮಾಡುವದರಿಂದಾಗುವ ಕೇಡೇನೆಂದರೆ—

"ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ" ಅಂದರೆ, ಶ್ರೇಷ್ಠನಾದವನು ಯಾವ ಯಾವದನ್ನಾಚರಿಸುತ್ತಾನೋ ಸಾಮಾನ್ಯರು ಅದನ್ನೇ ಆಚರಿಸುತ್ತಾರೆ; ಮತ್ತು "ಮಹಾಜನೋ ಯೇನ ಗತಃ ಸ ಪಂಥಾಃ" ಅಂದರೆ, ಮಹಾತ್ಮನಾದವನು ಯಾವ ಮಾರ್ಗದಲ್ಲಿ ಹೋಗುತ್ತಾನೆಯೋ ಅದೇ ಸನ್ಮಾರ್ಗವೆಂದು ಬಹುಜನರು ತಿಳಿಯುತ್ತಾರೆ. ನೀವೆಂದರೆ ಶ್ರೇಷ್ಠರೂ ಮಹಾಜನರೂ ಅದ ಕಾರಣ ನಿಮ್ಮ ಆಚಾರವೇ ಸದಾಚಾರ. ನಿಮ್ಮ ಮಾರ್ಗವೇ ಸನ್ಮಾರ್ಗ–ಎಂದು ಭೂರಿ ಜನರು ತಿಳಕೊಂಡು ನಿಮ್ಮನ್ನು ಅನುಸರಿಸಬೇಕಾಯಿತಲ್ಲವೇ ? ಹಾಗೆ ಅನುಸರಿಸಿದ ಪಕ್ಷದಲ್ಲಿ ಲೋಕವೆಲ್ಲವೂ ಏಕಕಾಲದಲ್ಲಿ ನಾಶೋನ್ಮುಖವಾಗುವದರಲ್ಲಿ ಸಂದೇಹವಿಲ್ಲ. ಆದಕಾರಣ, ಆ ಶ್ರೀಮಂತನಾದ ರಾಮಚಂದ್ರನಲ್ಲಿ ಸಾಮವಿಲ್ಲದೆ ಸಂಗ್ರಾಮಕ್ಕೆ ಹೋಗುವದು ಸರಿಯಲ್ಲ."

ರಾವಣ : "ಎಲೈ ಕುಮಾರಕನೇ, ನೀನು ನನ್ನ ಆಜ್ಞೆಯ ಪ್ರಕಾರ ಯುದ್ಧಕ್ಕೆ ಹೋಗುವದನ್ನು ಬಿಟ್ಟು ಈ ಪ್ರಕಾರ ಯುದ್ಧ ಮಾಡಬಾರದೆಂದು

ಹೇಳುವೆಯಷ್ಟೆ. ಅವನು ಎಂಥವನು ? ಅವನಲ್ಲಿ ಯಾವ ವಿಶೇಷವುಂಟು- ಹೇಳು:"

ಅತಿಕಾಯ : "ಸ್ವಾಮಿ, ಆ ರಾಮನು ಎಂಥವನೆಂದರೆ, ಸಕಲ ಲೋಕೈಕನಾಯಕನು: ಅಂದರೆ, ಅತಲ, ವಿತಲ, ಸುತಲ, ತಲಾತಲ, ಮಹಾತಲ, ರಸಾತಳ, ಪಾತಾಳಗಳೆಂಬ ಕೆಳಗಿನ ಸಪ್ತಲೋಕಗಳೂ ಭೂಲೋಕ, ಭುವರ್ಲೋಕ, ಸುವರ್ಲೋಕ, ಮಹೋಲೋಕ, ಜನೋಲೋಕ, ತಪೋಲೋಕ, ಸತ್ಯಲೋಕಗಳೆಂಬ, ಮೇಲಿನ ಸಪ್ತಲೋಕಗಳೂ ಕೂಡಿ ಚತುರ್ದಶ ಲೋಕಗಳೆಂಬುದು ನಿಮಗೆ ಗೊತ್ತುಂಟಷ್ಟೇ ? ಇದೊಂದು ಬ್ರಹ್ಮಾಂಡ. ಇಂಥಾ ಬ್ರಹ್ಮಾಂಡಗಳು ಕೋಟ್ಯನುಕೋಟಿಯಿರಬಹುದು. ಅಂಥಾ ಕೋಟಿ ಬ್ರಹ್ಮಾಂಡಗಳಿಗೆಲ್ಲಾ ಈ ರಾಮನೆಂಬವನೊಬ್ಬನೇ ನಾಯಕನಾಗಿರುತ್ತಾನೆ: ಮತ್ತು ಸರ್ವಾತ್ಮಕನು=ಅಂದರೆ, ಅಂಥ ಬ್ರಹ್ಮಾಂಡಗಳೊಳಗೆ ಇಂದ್ರ, ಅಗ್ನಿ, ಯಮ, ನಿರ್ಋತಿ, ವರುಣ, ವಾಯು, ಕುಬೇರ, ಈಶಾನರೆಂಬ ಅಷ್ಟದಿಕ್ಪಾಲಕರೂ ವಿದ್ಯಾಧರರೂ ಅಪ್ಸರರೂ ಯಕ್ಷರೂ ಕಿನ್ನರರೂ ರಕ್ಷರೂ ಗಂಧರ್ವರೂ ಕಿಂಪುರುಷರೂ ಪಿಶಾಚರೂ ಗುಹ್ಯಕರೂ ಸಿದ್ಧರೂ ಇರುತ್ತಾರೆ; ಮತ್ತು ಸೂರ್ಯ, ಚಂದ್ರ, ಗುರು, ಶುಕ್ರ, ಮೊದಲಾದ ನವಗ್ರಹರೂ ಕಶ್ಯಪ, ಅತ್ರಿ, ಭರದ್ವಾಜ, ವಿಶ್ವಾಮಿತ್ರ, ಗೌತಮಾದಿ ಸಪ್ತಋಷಿಗಳೂ ಅನಲ, ಅನಿಲ, ಪ್ರತ್ಯೂಷ, ಪ್ರಭಾಸಾದಿ ಅಷ್ಟವಸುಗಳೂ ಶಿವ, ಶಂಭು, ಗಿರೀಶ ಮೊದಲಾದ ಏಕಾದಶ ರುದ್ರರೂ ಮಿತ್ರ, ಅರ್ಯಮ, ತ್ವಷ್ಟ್ರ, ಧಾತೃ ಮುಂತಾದ ದ್ವಾದಶಾದಿತ್ಯರೂ ದೇವ-ದಾನವ-ಮಾನವ-ಕ್ರಿಮಿ-ಕೀಟ-ಪಶು ಮುಂತಾಗಿ ಎಂಭತ್ತನಾಲ್ಕು ಲಕ್ಷಪ್ರಾಣಿಗಳುಂಟಷ್ಟೆ, ಇವೆಲ್ಲಕ್ಕೂ ರಾಮನೇ ಚೈತನ್ಯಾತ್ಮನಾಗಿರುತ್ತಾನೆ: ಮತ್ತು ತರು, ಗಿರಿ, ಪಾಷಾಣ ಮೃತ್ತಿಕಾದಿ ಸಮಸ್ತ ಸ್ಥಾವರ ಪದಾರ್ಥಗಳಿಗೂ ಕೂಡಾ ರಾಮನೇ ಚೇತನಾತ್ಮನಾದ ಕಾರಣ, ಚರಾಚರ ಚೈತನ್ಯಾತ್ಮ, ಸರ್ವಾತ್ಮ, ಸರ್ವತೋಮುಖ–ಎಂದು ಹೇಳುತ್ತಾರೆ: ಮತ್ತು ಸತ್ವ, ರಜಸ್, ತಮಸ್ ಎಂಬ ಗುಣತ್ರಯದ ಕಾರ್ಯಗಳ ಬಗ್ಗೆ ಬ್ರಹ್ಮ ವಿಷ್ಣು ಮಹೇಶ್ವರರೆಂಬ ತ್ರಿಮೂರ್ತಿಗಳಾಗಿ ಸಮಸ್ತ ಲೋಕಗಳಿಗೆ ಸೃಷ್ಟಿ, ಸ್ಥಿತಿ, ಲಯ ಎಂಬ ಮೂರು ಕಾರ್ಯಗಳನ್ನು ಕಲ್ಪಿಸಿ ರಜೋಗುಣಪ್ರಧಾನನಾದ ಬ್ರಹ್ಮರೂಪದಿಂದ ಸೃಷ್ಟಿ ಮಾಡುತ್ತಾ ಸತ್ವಗುಣಪ್ರಧಾನನಾದ ವಿಷ್ಣುರೂಪದಿಂದ ಸರ್ವಲೋಕಗಳನ್ನು ರಕ್ಷಿಸುತ್ತಾ ಕಡೆಗೆ ತಮೋಗುಣಪ್ರಧಾನನಾದ ರುದ್ರರೂಪದಿಂದ ಸಮಸ್ತಲೋಕಗಳಿಗೆ ಪ್ರಳಯವನ್ನುಂಟುಮಾಡುತ್ತಾ ಇರುವ ಭಗವಂತನು ಇದೇ ರಾಮನಾಗಿರುತ್ತಾನೆ. ಅಲ್ಲದೇ ಈತನು ಈ ಸಂಸಾರವೆಂಬ ಘೋರ ಸಾಗರದಲ್ಲಿ

ನಮ್ಮಂಥವರಿಗೆ...ಚತುರ್ವಿಧ ಮುಕ್ತಿಯನ್ನು ಕೊಟ್ಟು ಅವರ ಕಷ್ಟಗಳನ್ನು ಪರಿಹರಿಸುತ್ತಿರುವುದರಿಂದಲೇ (ಈ ರಾಮನನ್ನು) ಮುಕ್ತಿದಾಯಕ, ಮುಕ್ತಿನಾಥ ಎಂದು ವರ್ಣಿಸುತ್ತಾರೆ.......ಆದ್ದರಿಂದ ಇಂಥಾ ಮಹಾತ್ಮನಲ್ಲಿ ಭ್ರಾಂತ ಬುದ್ಧಿಯಿಂದ ಹಿಡಿದ ವೈರವನ್ನು ಬಿಟ್ಟು ಬಿಡಬೇಕು."

* * * *

ಗ್ರಾಮೀಣ ಕನ್ನಡಿಗರ ಈ ಶತಮಾನದ ಕನ್ನಡ ಭಾಷೆಗಿದು ಪ್ರಾತಿನಿಧಿಕವೂ ಉತ್ತಮವೂ ಆದ ಕಾವ್ಯಕಲಾತ್ಮಕ ಉದಾಹರಣೆ. ಇದನ್ನು ಪುರವಾಸಿಗಳೂ ಕನ್ನಡದ ಸುದ್ದಿಗೆಯೆ ಆವೇಶದಿಂದ ಕುಣಿಯುವರೂ ಓದಬೇಕೆಂದು ಸಂಕ್ಷೇಪಿಸಿ ಕೊಡಲಾಗಿದೆ. ದೋಷೈಕದೃಷ್ಟಿಯ "ಕೌಸ್ತುಭ" ನಾಮಧೇಯ ಸೂಚಕರು ಶ್ರೀಸಾಮಾನ್ಯನ ಕನ್ನಡವು ಹೇಗಿತ್ತೆಂಬುದನ್ನು ಗಮನಿಸಬೇಕು. ದಡ್ಡರು ಎಲ್ಲಿದ್ದರೂ ಹೇಗಿದ್ದರೂ ಯಾವ ಪದವೀಧರರಾದರೂ ಯಾವ ಜಾತಿಯವರಾದರೂ ಎಂಥ ಪುರಸ್ಕಾರವನ್ನು ಪಡೆದವರಾದರೂ ದಡ್ಡರೇ ಎಂಬುದಕ್ಕೆ ಇಂದು ಕೆಲವೆಡೆಯ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮದಿಂದ ಕೂಡ ಸರಿಯಾಗಿ ವಿವಿಧ ಶಾಸ್ತ್ರಗಳನ್ನು ಕಲಿಸಲಾಗದ "ಪ್ರೊಫೆಸರು"ಗಳನ್ನು ಭೇಟಿಯಾದರೆ ಮಾತ್ರ "ಕನ್ನಡ ಡಿಂಡಿಮ"ವನ್ನು ಬಾರಿಸಲು ನಾವು ಎಷ್ಟು ಪ್ರಯತ್ನವನ್ನು, ಎಷ್ಟು ಕಾಲ, ಹೇಗೆ ಮಾಡಬೇಕೆಂಬುದನ್ನು ವೈಜ್ಞಾನಿಕವಾಗಿ ತಿಳಿದುಕೊಳ್ಳಲು ಸಾಧ್ಯವಾದೀತು. ಕನ್ನಡ ಎಂ. ಎ., ಇಂಗ್ಲಿಷ್ ಎಂ. ಎ., ಗಳನ್ನು ಅವರ ಕನ್ನಡ ಪಾಂಡಿತ್ಯದ ಒಳಹೊಕ್ಕು ನೋಡಬೇಕು—ಆಗ ಮಾತ್ರ ಸಂಸ್ಕೃತ-ಕನ್ನಡಗಳ ಅನಿವಾರ್ಯ ಸಂಬಂಧವು ಸಮಗ್ರವಾಗಿಯೂ ಅಗಾಧವಾಗಿಯೂ ಅರ್ಥವಾಗುತ್ತದೆ: ಇಲ್ಲವಾದರೆ ಎಂದೂ ಅರ್ಥವಾಗಲಾರದು.

ಬನವಾಸಿ ಅಥವಾ ಬನವಾಸಿಪುರದ ಬಿ. ಶಿವಯ್ಯ ಹೆಬ್ಬಾರರ ಅಣ್ಣಂದಿರಾದ ಬಿ. ವೆಂಕಟರಮಣ ಹೆಬ್ಬಾರರು ಉಭಯ ಕವಿಗಳೂ ಹಾಗೆ ಶಾಸ್ತ್ರಜ್ಞರೂ ಆಗಿದ್ದರು. ಅವರು ತಮ್ಮ ಅನುಭವದ ಪ್ರಕಾರ ಕನ್ನಡ "ಜೈಮಿನಿ ಭಾರತ"ದ ಕನ್ನಡ ಕಾವ್ಯಶೈಲಿಗೆ ಅಗ್ರಾಸನ ಕೊಟ್ಟಿದ್ದರು. ಅವರು ಪಾಲಿಯ ಕಟ್ಟೆಯನ್ನು ಹತ್ತಿದವ ಗ್ರಾಮೀಣರು. ಕದಂಬಸ್ಥಾಪನೆಯು ಕನ್ನಡಭಾಷೆಯ ಮೂಲಸ್ಥಾನ ಎಂಬುದು ಅವರ ಅಭಿಪ್ರಾಯವಾಗಿತ್ತು. ಇತಿಹಾಸಕರಿಗೆ ಗೊತ್ತಿರುವ ಕದಂಬಗನ್ನಡವು ಕ್ರಿ. ಶ. **280** ರಲ್ಲಿ ಕ್ರಮಬದ್ಧವಾಗಿ ಆರಂಭವಾಗಿ ಕ್ರಿ. ಶ. **450** ರ ಹೊತ್ತಿಗೆ ರಾಜಭಾಷೆ (ಪ್ರಾಂತಭಾಷೆ) ಎನ್ನಿಸಿಕೊಂಡಿತು. **6** ನೆಯ ಶತಮಾನದ ಕದಂಬ ರವಿವರ್ಮ ಚಕ್ರವರ್ತಿಯು ತಾಮ್ರ ಶಾಸನದಲ್ಲಿ ನರ್ಮದೆಯು ಅವನ ಚಕ್ರಾಧಿಪತ್ಯದ (ಅಂದರೆ ಕನ್ನಡದ ನೆಲದ) ಉತ್ತರದ ಸೀಮೆಯಾಗಿತ್ತೆಂದು ಹೇಳಿರುವುದು ಇಲ್ಲಿಯವರೆಗೆ ಯಾವ ಕನ್ನಡ ಇತಿಹಾಸ

ಕಾರನ ಗಮನಕ್ಕೂ ಬಂದಂತಿಲ್ಲ ("[illegible]"). ಹಾಗೇ ಮಹಾತ್ಮ ಗಾಂಧಿಯವರು ಆಧುನಿಕಭಾರತೀಯ ಲಿಪಿಗಳಲ್ಲಿ ಕನ್ನಡಲಿಪಿಯೇ ಅತ್ಯಂತ ಸುಂದರ ಎಂದಿದ್ದೂ ಗೊತ್ತಿದ್ದಂತಿಲ್ಲ. ಸಂಸ್ಕೃತ-ಹಿಂದಿಗಳ ಹಿಂದೆ-ಯಿಂದ ಮಾತ್ರ ಕನ್ನಡದ ಉದ್ಧಾರ ಎಂದು ತಿಳಿದವರನ್ನು ನೋಡಿ ನನಗೆ ಪುರಂದರದಾಸರಂತೆ ನಗೆಬರುತ್ತದೆ.

ಡಾ. ಶ್ರೀಕಂಠಶಾಸ್ತ್ರಿಗಳ "Sources of Karnataka History, Vol. 1 " ದರಲ್ಲಿ ಒಬ್ಬ ಕನ್ನಡ ಜೈನ ಅಲಂಕಾರಿಕನು ತನ್ನ ಅಲಂಕಾರ ಗ್ರಂಥದಲ್ಲಿ ಕೊಟ್ಟ ಉದಾಹರಣೆಗಳು ಶ್ಲೇಷದಿಂದ ಕನ್ನಡ-ಸಂಸ್ಕೃತಗಳೆರಡ-ರಲ್ಲೂ ಬೇರೆ ಬೇರೆ ಅರ್ಥವನ್ನು ಕೊಡುತ್ತಿದ್ದುವೆಂದು ಉಲ್ಲೇಖಿಸಿದ್ದು ನನಗೆ ನೆನಪು. ಆದರೆ ಆ ಉದಾಹರಣೆಗಳೀಗ ನನ್ನೆದುರಿಗಿಲ್ಲ. ಅದರ ಬದಲು ದಿ. ವೆಂಕಟರಮಣ ಹೆಬ್ಬಾರರು ಹೇಳುತ್ತಿದ್ದ ಅಂಥ ಅನುಷ್ಟುಪ್ ಶ್ಲೋಕ ನೆನಪಾಗುತ್ತದೆ.

"ಅತ್ತಿಗೇ ಹೇಳಿ ಸಂಗೀತಂ ತಂಗೀತಂ ಮನಸಾಹಸಂ ।
ಭಾವಕೇಳೀ ಮದೋಲ್ಲಾಸಂ ನಾದಿನೀ ಬಿಸಿನೀರ ತಾ ॥

ಸಂಸ್ಕೃತದ ಪದವಿಭಜನೆ ಹೀಗೆ :

ಅತ್ತಿ । ಗೇಹೇ । ಅಳಿ ಸಂಗೀತಂ । ತಂ । ಗೀತಂ । ಮನಸಾ । ಹಸಂ ।
ಭಾವಕೇಳೀ ಮದೋಲ್ಲಾಸಂ । ನಾದಿನೀ । ಬಿಸಿನೀರ ತಾ ॥

ಕನ್ನಡದ ಪದವಿಭಜನೆ ಹೀಗೆ :

ಅತ್ತಿಗೆ । ಹೇಳಿ । ಸಂಗೀತಂ । ತಂಗೀತಮ್ಮನ । ಸಾಹಸಂ ।
ಭಾವ । ಕೇಳಿ । ಮದೋಲ್ಲಾಸಂ । ನಾದಿನೀ । ಬಿಸಿನೀರ । ತಾ ॥

ಈ ಉದಾಹರಣೆಯು ಕನ್ನಡ-ಸಂಸ್ಕೃತಗಳ ಸಂಬಂಧವನ್ನು "ಸಿಮೆಂಟ್-ಕಾಂಕ್ರೀಟಿ"ನಂತೆ ವೃಥ ಮಾಡಿಸುವುದರ ಬದಲು ಗೋಲ್ ಗುಂಬಜನ್ನು ಕಟ್ಟಿದ ಗಾರೆಯಂತೆ ಗಟ್ಟಿಯಾಗಿದೆ ಎಂಬುದನ್ನು ತೋರಿಸುತ್ತದೆ.

ಕನ್ನಡ ಮೂಲ ಶಬ್ದಗಳ ಬಳಕೆಯನ್ನು ಕನ್ನಡಿಗರೇ ಕಡಿಮೆ ಮಾಡುತ್ತ ಹೋದುದು ಏತಕ್ಕೋ ಏನೋ ಗೊತ್ತಿಲ್ಲ. ಅದರಿಂದ ಅಂಥ ಅಪ್ರಯುಕ್ತ ಕನ್ನಡ ಪದಗಳಿಂದ ಬರೆದರೆ ಅಂಥ ಕನ್ನಡ ಬರೆಹವು ಸಾಮಾನ್ಯರಿಗೆ ಅರ್ಥ-ವಾಗದೆಂದು ತೋರುತ್ತದೆ. ಹಳಗನ್ನಡ ಕೋಶ * ವೊಂದರಲ್ಲಿ ಗುಂಪು,

* ಈ ಕೋಶದ ಹಸ್ತಪ್ರತಿಯು ಮೈಸೂರಿನ "ಓರಿಯಂಟಲ್ ಲೈಬ್ರರಿ"ಯ ಗ್ರಂಥ-ಭಂಡಾರದಲ್ಲಿತ್ತು.

ರಾಶಿ ಎಂಬುದಕ್ಕಿರುವ ಪರ್ಯಾಯ ಪದಗಳಿಂದ ಈ ಭಾಷಣವನ್ನು ಮುಗಿಸುವುದು ನ್ಯಾಯವೆನ್ನಿಸುತ್ತದೆ.

1) ಬಂಬಲ್, 2) ತುಱುಗಲ್, 3) ಪಂಗಡಂ, 4) ಗಡಣಂ, 5) ಪೊಗ್ಗರಂ, 6) ಜಂದಂ, 7) ಒಬ್ಬುಳಿ. 8) ಜಂಗುಳಿ, 9) ದೊಂದುಳಿ, 10) ಸಂದಣಿ, 11) ಒಗ್ಗು. 12) ಪಸರಂ, 13) ಇಟ್ಟಳಂ, 14) ಲಾವಣಿ. 15) ಓಳಿ, 16) ಗೊಂಚಿ, 17) ಒಟ್ಟಿಲ್. 18) ಒಟ್ಟಜೆ. 19) ತಿಂತಿಣಿ, 20) ಹೊರಳಿ. 21) ಕದಲಿ. 22) ಸಂತೆ, 23) ಜಾಳಿಗೆ. 24) ಕಿಕ್ಕಿಂದಂ 25) ನೆರವಿ, 26) ಬಳಗಂ, 27) ಪೊತ್ತಂ, 28) ಸೇಣಿ, 29) ತಂಡಂ. 30) ಗುಂಡು, 31) ಹಿಂಡು, 32) ತೆರಳಿ, 33) ಪಂತಿ, 34) ಸಾಲ್. 35) ಪೊಕ್ಕಳಂ, 36) ತೋಮಂ, 37) ತೆಪ್ಪಲ್, 38) ಗುಮ್ಮಿ. 39) ಗೊಂದಣಿ. ಮತ್ತು 40) ಉಂದಲ್- ಈ 40 ಸಮೂಹಂ-ಎಂಬಿದೆ. ಈ ಪಟ್ಟಿಯಲ್ಲಿ ತತ್ಸಮ ಅಥವಾ ಸಮಸಂಸ್ಕೃತ ಪದವೊಂದೂ ಇಲ್ಲ: ಕೆಲವು ತದ್ಭವಗಳನ್ನು ಮಾತ್ರ ಗುರುತಿಸಬಹುದು. ಅಲ್ಲಿಯೂ ಆ “ತಜ್ಞ”ನಲ್ಲಿ “ತತ್ತು” ಕೆಲವೆಡೆ ಕನ್ನಡವೇ ಆಗಿರಬಹುದು. ಇದು ಸಂಶೋಧನೀಯ. ಈ 40 ಸಮೂಹ ವಾಚಕಗಳಲ್ಲಿ ಬಹುಪದಗಳು ಇಂದಿನ ಕನ್ನಡಿಗರಾದ ಹಳ್ಳಿಗರಿಗೂ ಪಟ್ಟಣಿಗರಿಗೂ ಪರಿಚಿತವಲ್ಲ ಎಂದರೆ ತಪ್ಪಾಗದು. ಹೀಗೆ ಭಾರತೀಯ ಸಂಸ್ಕೃತಿಯ ಸಮಗ್ರ ಮಾಧ್ಯಮವೆನ್ನಬಹುದಾದ ಸಂಸ್ಕೃತದ ಸಂಬಂಧವು ಕನ್ನಡಕ್ಕೆ ಮತ್ತು ಇತರ ಭಾರತೀಯ ಭಾಷೆಗಳಿಗೆ ಅಗತ್ಯ, ಸಂವರ್ಧನೀಯ. ಎಂದರೆ ಈಗ ತಪ್ಪಾದೀತೇ ?

"ಅಮುದಾದರಮುದಮ್ಮ. ಅಲ್ಲವಾದರಲ್ಲವೆನ್ನ
ಬುಧಜನರು ನೆರೆ ತಿಳಿದು ಹೇಳಿ ಮತ್ತಿದನು."
ಮುದ್ದಣ ಪೇಳಿದುದಂ ಪುನ-
ರುದ್ಧರಿಸುವೆನಿಲ್ಲಿ ಬೇಸರಿಸದಿರೆ ಗೆಳೆಯರ್ ।
ಸದ್ಬುದ್ಧಿಯಿಂದ ಕನ್ನಡ
ವಿದ್ವಾಂಸರ್ ತೂಗಿ ನೋಡಲೆಂದೀ ಕೃತಿಯೊಳ್
ಸಕ್ಕದ ಕನ್ನಡವೆರಸಿದ
ತಕ್ಕಿಂದೇ ಬರೆದ ಕನ್ನಡಗ್ರಂಥಗಳೊಳ್ ।
ಮಿಕ್ಕುಗು ಕರ್ಮಣಿಸರದೊಳ್
ಪೊಕ್ಕಂತಿಹ ಚೆಂಬವಳದಂತೋಱೆ ॥

ಮತ್ತೆ : ಪೊಸಗನ್ನಡದೊಳ್ ಕುವೆಂಪುಕಾವ್ಯಂ
[illegible] ನಡುಗನ್ನಡ ಪ್ರಯೋಗಂ।
[illegible] ನಿಚ್ಚಂ
ಜಸ ಬಂತೋ ಪಳಗನ್ನಡೋಳಿಯಿಂದಂ ॥

ಉಪಸಂಹಾರ

ಪತಂಜಲಿಯ ಭಾಷ್ಯದ ಆಧಾರದ ಮೇಲೆ ಇಂದಿನ ವಿದ್ವಾಂಸರು ಸಂಸ್ಕೃತವು ಒಂದು ಕಾಲದಲ್ಲಿ ಆಡುಮಾತಾಗಿತ್ತು ಎಂದುದನ್ನು ಸಮರ್ಥಿಸಿದ್ದಾರೆ. 1968 ರಲ್ಲಿ ಪ್ರಕಟವಾದ "ಗಿರಿಜಾಕಲ್ಯಾಣಸಂಗ್ರಹ" ದ ಪ್ರಸ್ತಾವನೆಯಲ್ಲಿ "ಹಿಂದೆ ಕವಿಗಳ ಯೋಗ್ಯತೆಯನ್ನು ಅವರು ಬರೆದ ಕಾವ್ಯಗಳ ಕ್ಲಿಷ್ಟತೆಯ ಮೇಲಿಂದ ಅಳೆಯುತ್ತಿದ್ದರು" ಎಂದ ಬಾಯಿಯಿಂದಲೇ "ಉತ್ತಮಶೈಲಿಯ ಎಲ್ಲ ಗುಣಗಳು ಹರಿಹರನ ಶೈಲಿಯಲ್ಲಿ ಅವೆ "ಎಂದೂ ಆದಕ್ಕೆ ನಿದರ್ಶನ ಅಥವಾ ಸಮರ್ಥನೆ ಎಂಬಂತೆ—

"ಸೇವ್ಯಂ ಸೌಖ್ಯಂ ಪ್ರಸನ್ನಂ ನವರಸವಿಭವಂ ಪುಣ್ಯಪುಂಜಂ ಶುಭಂ ವಾ
ಗ್ದೇವ್ಯಾವಾಸಂ ವಿವೇಕೋನ್ನತಜಲನಿಧಿಸಂಸಾರವಿಶ್ರಾಮದೇಶಂ ।
ದಿವ್ಯಜ್ಞಾನೋಕ್ತಿಮಾರ್ಗಂ ನಿರತಿಶಯಪದಂ ಕೂರ್ತು ಪೇಳ್ವಳ್ತಿಯಿಂದಂ
ಕಾವ್ಯಂ ಕಲ್ಪಾಂತರಸ್ಥಾಯಿಯೆನಿಪ ನುಡಿ ಸತ್ಯಂ ಕವೀಶಾಧಿಪತ್ಯಂ ॥

ಹರಿಹರನ ಈ ನುಡಿಯನ್ನೇ ಉದ್ಧರಿಸಿ ಕೊಡಲಾಗಿದೆ. ಈ ಪ್ರಸ್ತಾವನಾಕಾರರ ವಿವೇಕವನ್ನು ಪ್ರಶ್ನಿಸಬೇಕಾಯಿತು. "ಗಿರಿಜಾಕಲ್ಯಾಣ" ವೆಂಬ ಕಾವ್ಯವು ಪ್ರಸಾದ-ಗುಣವುಳ್ಳದ್ದೆಂದು ಕೊನೆಯಲ್ಲಿ ಒಪ್ಪಿಕೊಳ್ಳುವ ವಿದ್ವಾಂಸನು ಅದರಲ್ಲಿಯ "ಕ್ಲಿಷ್ಟತೆ" ಯನ್ನು ಎತ್ತಿ ಹೇಳಲು ಹಕ್ಕುಳ್ಳವನಲ್ಲ. ಇಂದಿನ ಕನ್ನಡ ಲೇಖಕರನೇಕರ ಅವಿವೇಕ ಹೀಗಿದು ಸರಿದೊರೆ. ತಮಗರ್ಥ ಮಾಡಿಕೊಳ್ಳಲು ಶಬ್ದಕೋಶವನ್ನು ನೋಡಲೇ ಬೇಕಾದ ಭಾಷಾಭಿಜ್ಞತೆಯುಳ್ಳವರು ಪ್ರೌಢರೋ ಬಾಲಕರೋ? ಗೀ ಗೀ ಪದ. ಲಾವಣಿ ಮುಂತಾದ ಜನಪದ ಸಾಹಿತ್ಯದಿಂದಲೇ ಕನ್ನಡಕ್ಕೆ ದೇಶವಿದೇಶಗಳಲ್ಲಿ ಕೀರ್ತಿ ದೊರಕಿದೆಯೇ? ಅಂಥವುಗಳಿಂದಲೇ ಜಗನ್ಮಾನ್ಯ ಭಾಷೆ ಎನ್ನಿಸಿದ ಒಂದು ಭಾಷೆ ಜಗತ್ತಿನಲ್ಲಿದೆಯೇ? "ನನಗೆ ಗೊತ್ತಿರುವುದಷ್ಟೇ ಪೂರ್ಣವೂ ಸತ್ಯವೂ ಆದ ಜ್ಞಾನ: ನನಗೆ ಗೊತ್ತಿಲ್ಲದುದೆಲ್ಲವೂ ಅಪೂರ್ಣ ಮತ್ತು ಅಸತ್ಯ" ಎಂಬ ದನಗಾಹಿಯ ದಾಟಿಗಿಂತ ಮೇಲಿನ ಅಭಿಪ್ರಾಯವು ಹೆಚ್ಚು ಬೆಲೆಯುಳ್ಳದ್ದಲ್ಲ. ಇಂಥವರನ್ನು Who is the Common man? ಸಾಮಾನ್ಯನೆಂದರೆ ಯಾರು? ಎಂದು ಕೇಳಬೇಕಾಗುತ್ತದೆ. ಏಕೆಂದರೆ ಹೇಗೆ ಇಬ್ಬರು ವಿದ್ಯಾವಂತರ ಶಬ್ದಸಂಗ್ರಹಗಳಲ್ಲಿ ವ್ಯತ್ಯಾಸವಿರುತ್ತದೆಯೋ ರಸಗ್ರಹಣಶಕ್ತಿಯಲ್ಲಿ ವ್ಯತ್ಯಾಸವಿರುತ್ತದೆಯೋ ಹಾಗೆ ಅವಿದ್ಯಾವಂತರಲ್ಲೂ ಅಂತರವಿರುತ್ತದೆ. ಈ ಎರಡುವರ್ಗಗಳಲ್ಲಿಯೂ ಶಬ್ದಾದ್ಯರ್ಥಗ್ರಹಣಶಕ್ತಿಯಲ್ಲಿಯೂ ನೂರಾರು ಮೆಟ್ಟಿಗಳಿವೆ–ಕನ್ನಡವು ಒಂದನೆಯ ಇಯತ್ತೆಯಿಂದ ಎಂ, ಎ. ವರೆಗೆ ಇರುವಂತೆ ಅಥವಾ ಒಂದೇ ಒಂದು ಭಾಷೆಯನ್ನು ಸಾಕಷ್ಟು ಚೆನ್ನಾಗಿ ಅಭ್ಯಸಿಸಿದವರಿಗೂ ಒಂದಕ್ಕಿಂತ ಹೆಚ್ಚು ಪರಸ್ಪರ ಸಂಬಂಧಯುಕ್ತವಾದ ಭಾಷೆಗಳನ್ನು ಅಭ್ಯಾಸಮಾಡಿದವರಿಗೂ ಗ್ರಹಣಶಕ್ತಿಯಲ್ಲಿ ಬಹಳ ಅಂತರವಿರುತ್ತದೆ.

ಪಂಪನು ಕನ್ನಡಕ್ಕೆ ಹೇಗೆ ಒಬ್ಬನೋ ಷೇಕ್ಸ್‌ಪಿಯರನು ಇಂಗ್ಲಿಷಿಗೆ ಒಬ್ಬನೇ. ಹಾಗೇ 500 ರಿಂದ 50,000 ಪದಗಳವರೆಗೆ ಒಂದು ಭಾಷೆಯನ್ನು ಕಲಿತವರಲ್ಲಿ ಶಬ್ದಾರ್ಥಜ್ಞಾನಿಗಳಿರಬಹುದು. ಅವತಾರಪುರುಷರು ಹೇಗೆ ವಿರಳರೋ ಹಾಗೇ ಪಂಡಿತಕವಿಗಳೂ ವಿರಳರು. ಗಮಕಿಗಳು ಅವರ ಕಾವ್ಯಗಳನ್ನು ಓದಿನಿಂದಲೂ ರಸಿಕರಿಗೆ ಮನಂಬುಗುವಂತೆ ವಿವರಿಸುತ್ತ ಬಂದಿದ್ದಾರೆ. ಭಾರತಕ್ಕೆ ಇಂದಿನ ಯಾವ ಆಡುಮಾತಿನ ಭಾಷೆಯಲ್ಲಿ ರಚಿತವಾದ ಕೃತಿಯಿಂದಲೂ ಜಾಗತಿಕ ಬಹುಮಾನ. ಗೌರವ ಬಂದಿಲ್ಲ—ದಿ. ರವೀಂದ್ರನಾಥರ ಬಂಗಾಳಿಯ ಗೀತಾಂಜಲಿಯನ್ನು ಬಿಟ್ಟು. ಹಾಗೇ ಸಂಸ್ಕೃತದ ಮಹಾಕವಿ, ಮಹಾನಾಟಕಕಾರ, ಮಹಾತತ್ವಜ್ಞಾನಿಗಳಿಂದ ಬಂದಷ್ಟು ಜಾಗತಿಕಕೀರ್ತಿ ಭಾರತಕ್ಕೆ ಈ ವರೆಗೆ ಬಂದಿಲ್ಲ. ಹಾಗೇ ಕರ್ನಾಟಕಕ್ಕೆ ಕೀರ್ತಿ ತಂದದ್ದು ಪಂಪ. ಹರಿಹರ, ರಾಘವಾಂಕ, ಕುಮಾರವ್ಯಾಸರ ಪ್ರೌಢಕನ್ನಡವಲ್ಲದೆ ಒನಕೆಹಾಡುಗಳಲ್ಲ. ಪದಕ್ಲಿಷ್ಟತೆ ಕ್ಲಿಷ್ಟತೆಯೇ ಅಲ್ಲ: ಭಾವಕ್ಲಿಷ್ಟತೆಯೇ ನಿಜವಾದ ಕ್ಲಿಷ್ಟತೆ, ಗೊಂದಲ. ಸಂಕೀರ್ಣತೆ.

ಅನುಬಂಧ

ಅನ್ಯಭಾಷಾ ಸಾಹಿತ್ಯಗಳಿಗೆ ಸಂಬಂಧಿಸಿದ ವಿಮರ್ಶೆಯಲ್ಲಿ ಸಂಸ್ಕೃತವನ್ನೇ ಪ್ರತ್ಯೇಕವಾಗಿರಿಸುವುದು ತಪ್ಪಾಗಲಾರದು. ನಮ್ಮ ಸಾಹಿತ್ಯದ ಆರಂಭ ಕಾಲದಿಂದಲೂ ಸಂಸ್ಕೃತವು ಪ್ರೇರಣೆಯನ್ನು ಒದಗಿಸಿಕೊಡುತ್ತ ಬಂದಿದೆ. ಸಂಸ್ಕೃತದೊಂದಿಗಿನ ನಮ್ಮ ಸಂಬಂಧ ಬರಿಯ ಸಾಹಿತ್ಯಕ್ಕೆ ಸಂಬಂಧಿಸಿದ್ದಾಗಿರದೆ ನಮ್ಮ ವೈಚಾರಿಕ, ಸಾಂಸ್ಕೃತಿಕ, ಸಾಮಾಜಿಕ ಜೀವನಕ್ಕೂ ಕೂಡಿದ್ದಾಗಿದೆ. ಕಾಳಿದಾಸನನ್ನು ಮೆಚ್ಚದ, ಅವನ ಆದರ್ಶವನ್ನು ಹೊಂದದ ನಮ್ಮ ಲೇಖಕ ಯಾರಿದ್ದಾನೆ? ಹೊಸಬೆಳಗಿಗೆ ಮೊದಲು ನಮ್ಮ ಕಾವ್ಯಮೀಮಾಂಸೆ ಏನಾದರೂ ಇದ್ದರೆ ಅದು ಸಂಸ್ಕೃತ ಅಲಂಕಾರ ಗ್ರಂಥಗಳದ್ದಲ್ಲದೆ ಇನ್ನಾವುದರದು ?

—ಡಾ. ಹಾ. ಮಾ. ನಾಯಕ

ಕ್ರಿ. ಶ. 1956 ರಲ್ಲಿ ಕಡವ ಶಂಭುಶರ್ಮನು ಅಶ್ವಘೋಷ ಕವಿ ರಚಿಸಿದ್ದ ಸಂಸ್ಕೃತದ "ಸೌಂದರನಂದ" ಎಂಬ ಮಹಾಕಾವ್ಯವನ್ನು ಕನ್ನಡಕ್ಕೆ ಛಂದೋಬದ್ಧವಾಗಿ ಭಾಷಾಂತರಿಸಿದನು. ಅದರ ಮುನ್ನುಡಿಯಲ್ಲಿ "ಇದರಲ್ಲಿ ಮೂಲಪದ್ಯದ ಪ್ರತಿ ಶಬ್ದ-ವಿಭಕ್ತಿಗಳ ಅನುವಾದ ಕ್ರಮವು ಅನುಸರಿಸಲ್ಪಟ್ಟಿದೆ. ಸಂಸ್ಕೃತ ಭಾಷೆಯಂತೆ ಬಿಗಿ-ದಾದ ಹಳಗನ್ನಡ ವ್ಯಾಕರಣಬದ್ಧ ಭಾಷೆ ಬಳಸಲ್ಪಟ್ಟಿದೆ. 4, 10, 13, 15 ನೆಯ ಸರ್ಗಗಳು ಮಾತ್ರ ನಡುಗನ್ನಡ ಭಾಷೆಯಲ್ಲಿವೆ."

— ಕಡವ ಶಂಭುಶರ್ಮ

ಕನ್ನಡದಲ್ಲಿಯೇ ಉಪಲಬ್ಧವಿದ್ದ ಗ್ರಂಥಗಳಲ್ಲಿ ಮೊದಲನೆಯದಾದ ಕವಿರಾಜ-ಮಾರ್ಗವೆಂಬ ಗ್ರಂಥವು........ದಂಡಿಯ ಕಾವ್ಯಾದರ್ಶಕ್ಕೆ ಋಣಿಯಾಗಿದೆ...... 150 ನೆಯ ಪರಿಚ್ಛೇದದಲ್ಲಿ......ನೃಪತುಂಗನು.....ಭಾಮಹನನ್ನು [illegible]ಗೆ ಅನುಸರಿಸಿರುವನು. ಅವರ ಅಂಧಾನುಕರಣೆ ಮಾಡಿಲ್ಲ......ಸಂಸ್ಕೃತ ಆಲಂಕಾರಿಕರಿಗೆ ಗೊತ್ತಿಲ್ಲದ ಕಾರಕಾದಿ ದೋಷಗಳನ್ನು ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿ ಹೊಸ ವಿಷಯವನ್ನು ಹೇಳಿರುವನು........ಕನ್ನಡ ಕಾವ್ಯಾಲಂಕಾರಗಳೆಲ್ಲವೂ ಸಂಸ್ಕೃತ ಗ್ರಂಥಗಳನ್ನೇ ಆಧರಿಸಿ ರಚಿತವಾಗಿದೆ. ಆದರೂ ಸಂಸ್ಕೃತದಲ್ಲಿರದ ಹಲವು ವಿಚಾರ-ಗಳು ಅವುಗಳಲ್ಲಿ ಬಂದಿವೆ.

ಕನ್ನಡದಲ್ಲಿಯ ಹಾಡುಗಬ್ಬಗಳಲ್ಲಿ......ಹ್ರಸ್ವದೀರ್ಘೋಚ್ಚಾರ ಸ್ವಾತಂತ್ರ್ಯ-[illegible]ರಬೇಕು......ಕ್ರಿ. ಶ. 10 ನೆಯ ಶತಮಾನದ ಸುಮಾರಿಗೆ ಈ ದೇಶೀಯ

ವೃತ್ತ ಮತ್ತು ಗುಣಗಳನ್ನು ಜಯಕೀರ್ತಿಯು ಸಂಸ್ಕೃತದಲ್ಲಿ ಬರೆದಿರುವನು ಆಗ ಇದ್ದ ಕನ್ನಡದ ಪ್ರಭಾವವನ್ನು ಸ್ಪಷ್ಟಪಡಿಸುವದು......ಕನ್ನಡ ಗ್ರಾಂಥಿಕ ಭಾಷೆಯ ಬೆಳವಣಿಗೆಗೆ ಸಂಸ್ಕೃತವು ಸಹಾಯ ಮಾಡಿದಂತೆ ಪ್ರಾಕೃತ ಮತ್ತು ಅಪಭ್ರಂಶ ಭಾಷೆ-ಗಳಲ್ಲಿರುವ ಜೈನ ಸಾಹಿತ್ಯದ ಕಥಾವಸ್ತುಗಳನ್ನು ಪ್ರಧಾನವಾಗಿಟ್ಟುಕೊಂಡು ಕನ್ನಡದಲ್ಲಿ ಮಹಾಕಾವ್ಯಗಳನ್ನು (ಕನ್ನಡ ಕವಿಗಳು) ರಚಿಸಿದರು.

—ಡಾ. ಎ. ಜೆ. ನಂದೀಮಠ

ಕವಿರಾಜಮಾರ್ಗವು ರಚಿತವಾಗುವ ವೇಳೆಗೆ ಸಂಸ್ಕೃತದಲ್ಲಿ ಭಾಮಹ, ದಂಡಿ, ವಾಮನ, ಉದ್ಭಟ—ಇವರ ಗ್ರಂಥಗಳು ನಿಸ್ಸಂದೇಹವಾಗಿ ಪ್ರಚುರ-ವಾಗಿದ್ದುವು......ಕವಿರಾಜಮಾರ್ಗದ ಕರ್ತೃವೇ ಬಹುಶಃ ಕನ್ನಡದಲ್ಲಿ "ಛಂದಸ್ಸಿನ ಆದ್ಯಪ್ರವರ್ತಕ" ಎಂದೂ ಹೇಳಬೇಕಾಗುತ್ತದೆ...ಕನ್ನಡ ಲಕ್ಷಣ ಗ್ರಂಥಗಳಲ್ಲಿ ಉಕ್ತವಾಗಿರುವ ವಿಷಯಗಳ ಎಲ್ಲ ಮೂಲರೇಖೆಗಳೂ ಬಹುಮಟ್ಟಿಗೆ ಎಲ್ಲ ವಿವರಗಳೂ ಸಂಸ್ಕೃತದಿಂದಲೇ ಬಂದವು.......ನಮ್ಮ ದೇಶದಲ್ಲಿ ಹಿಂದೆ ಎಲ್ಲ ಶಾಸ್ತ್ರಗಳಿಗೂ ಸಂಸ್ಕೃತವೇ ನೆಲೆವೀಡಾಗಿದ್ದ ಕಾರಣ, ಲಕ್ಷಣ ಗ್ರಂಥಗಳನ್ನು ಕನ್ನಡದಲ್ಲಿ ಓದಿ-ಕೊಂಡು ವಿಷಯ ಗ್ರಹಣ ಮಾಡಬೇಕಾದ ಆವಶ್ಯಕತೆ ವಿದ್ಯಾರ್ಥಿಗಳಿಗೆ ಸಾಮಾನ್ಯವಾಗಿ ಇರುತ್ತಿರಲಿಲ್ಲ.

ಪ್ರೊ. ತೀ. ನಂ. ಶ್ರೀಕಂಠಯ್ಯ

ಬೇಂದ್ರೆಯವರ ಈಚಿನ ಕಾವ್ಯವನ್ನು ಆಸ್ವಾದಿಸಲು ನಮ್ಮ ಶಾಸ್ತ್ರ-ಪುರಾಣಗಳ, ವೇದ-ಉಪನಿಷತ್ತುಗಳ ಇತರ ತತ್ತ್ವಶಾಸ್ತ್ರಗಳ ಪರಿಚಯ ಅಗತ್ಯ. ದಣಿವಿಲ್ಲದೆ ಬೆಟ್ಟಹತ್ತುವುದು ಸಾಧ್ಯವಿಲ್ಲ. ಅವರ ಹಳೆಯ ಕವಿತೆಗಳನ್ನು ಚೆನ್ನಾಗಿ ಅಧ್ಯಯನ ಮಾಡಿರುವವರಿಗೆ, ಅವರ ಈಚಿನ ಕವಿತೆಗಳಲ್ಲೂ ಅದೇ ಮಾರ್ದನಿ ಕೇಳಿಸುತ್ತದೆ. ಹಳೆಯ ಲೇಖಕರು ಹೊಸಲೇಖಕರನ್ನು ಅಧ್ಯಯನ ಮಾಡದೆ ತಿರಸ್ಕರಿಸುತ್ತಿದ್ದಾರೆ ಎಂದು ಟೀಕಿಸುವವರು ಮೊದಲು ಹಳೆಯ ಲೇಖಕರನ್ನು ಅಭ್ಯಾಸ ಮಾಡಬೇಕು. ಹಳಬರು ಹೊಸಬರನ್ನು ಓದದಿದ್ದರೆ ಏನೂ ನಷ್ಟವಿಲ್ಲ. ಆದರೆ ಹೊಸಬರು ಮಾತ್ರ ಹಳೆಯವರನ್ನು ಅಭ್ಯಾಸ ಮಾಡದಿದ್ದರೆ, ಅವರ ವಿಶ್ಲೇಷಣೆ. ಮರುಪರಿಚಯ ಇವುಗಳಲ್ಲಿ ತೊಡಗದಿದ್ದರೆ ಸಾಹಿತ್ಯಕ್ಕೆ ದೊಡ್ಡ ನಷ್ಟ ಸಂಭವಿಸುತ್ತದೆ. ಏಕೆಂದರೆ ಇದರಿಂದ ಪರಂಪರೆಯೇ ಕಡಿದು ಹೋಗುತ್ತದೆ. ಪರಂಪರೆಯನ್ನು ಕಳೆದುಕೊಂಡ ಸಾಹಿತ್ಯ ಕೇವಲ ಕುಂಡದ ಗಿಡವಾಗಿ ಬೆಳೆಯುತ್ತದೆ.

—ಸು. ರಂಗಸ್ವಾಮಿ

The Process of acquiring a cultural complex is governed by the inherited archetypes of an individual. These

archetypes are hidden in the Collective Unconscious of the newly born individual. It is because of these archetypes that cultural patterns differ from one group to another group of individuals. The unanimous contents of these archetypes jerk into the conscious plane and exert coersive influence on the ego in an imperceptible manner

—from "ಶ್ರೀ ಅರವಿಂದಾವಲೋಕನ"

ಸಂಸ್ಕೃತದ ಈ ಸ್ವೀಕರಣಗಳು ಕನ್ನಡ ಶಬ್ದಕೋಶದ ಬಹು ಪ್ರಧಾನ ಭಾಗಗಳಾಗಿವೆ. ಅವುಗಳಿಲ್ಲದೆ ಕನ್ನಡವು ಉನ್ನತ ಭಾವಗಳನ್ನಾಗಲಿ ಉದಾತ್ತ ಅಭಿಪ್ರಾಯಗಳನ್ನಾಗಲಿ ಅಭಿವ್ಯಕ್ತ ಮಾಡಲಾರದು.

—ಡಾ. ಎಂ. ಚಿದಾನಂದಮೂರ್ತಿ

ಇಂಥ (ಸಂಸ್ಕೃತದಲ್ಲಿರುವಂಥ) ಸಾಹಿತ್ಯದ ಬೆಂಬಲವು ಕನ್ನಡಕ್ಕೆ ಮೊದಲಿನಿಂದ ಇತ್ತು. ಈ ತಳಹದಿಯ ಮೇಲೆಯೇ ಕರ್ಣಾಟಕದಲ್ಲಿ ಕಾರ್ಯವು ಪ್ರಾರಂಭವಾಯಿತು. ಇದಲ್ಲದೆ ಸಂಸ್ಕೃತದಲ್ಲಿ ಗ್ರಂಥಗಳನ್ನು ಬರೆದ ಅನೇಕ ಆಚಾರ್ಯರು ಕರ್ಣಾಟಕದವರು. ಶಂಕರಾಚಾರ್ಯ, ಮಧ್ವಾಚಾರ್ಯ, ವಿದ್ಯಾರಣ್ಯ ಇಂಥ ಮಹನೀಯರನ್ನು ಆರ್ಯಾವರ್ತದ ಉದ್ಧಾರಕ್ಕಾಗಿ ದಯಪಾಲಿಸಿದ ಕರ್ಣಾಟಕಮಾತೆಯು ಎಂಥ ಉಚ್ಚ ಸಂಸ್ಕೃತಿಯ ತಾಯ್ನಾಡಾಗಿರಬೇಡ ?

—ಡಾ. ವಿ. ಕೃ. ಗೋಕಾಕ

ಕವಿ ವರ್ತಮಾನ ವಾತಾವರಣದಲ್ಲಿ ಬಾಳಬೇಕಾಗಿರುವುದರಿಂದ ಶೈಲಿ ಶಬ್ದ ನಡಗೆ ಬೆಡಗುಗಳಲ್ಲಿ ಮಾತ್ರ ಲೋಕ ಶರಣ್ಯನಾಗಿ, ತನ್ನ ಆತ್ಮಕ್ಕೆ ವಂಚನೆಯನ್ನು ಮಾಡಿಕೊಳ್ಳದೆ ತನ್ನ ರಿವಾಜಿನಿಂದ ತನಗೆ ಸುಖ ಲಭಿಸಲೆಂದು ಬಯಸಿ ರಸ ಶರಣ್ಯನಾಗಿ ತನ್ನ ಕಾವ್ಯವನ್ನು ನಿರ್ಮಿಸಿದ ಪಕ್ಷದಲ್ಲಿ ಕೃತಾರ್ಥನಾಗುತ್ತಾನೆ. ಹಾಗಲ್ಲದೆ ಭಾವಗಳ ವಿಷಯದಲ್ಲಿಯೂ ಈತ ಪ್ರವರ್ತಮಾನಕ್ಕೆ ವಶ್ಯನಾದರೆ ಆತನ ಕೃತಿ ರಸಪ್ರದವಾಗುವುದು ಕಷ್ಟ. ಆದುದರಿಂದ ಕವಿಗಳು ಕ್ರಾಂತದರ್ಶಿಗಳು —ಅದೃಷ್ಟವನ್ನು ಕಾಣತಕ್ಕವರು—ಎಂದು ನಮ್ಮ ಹಿಂದಿನವರು ಹೇಳುತ್ತಿದ್ದುದು. ಇದನ್ನೇ ಇನ್ನೊಂದು ತೆರದಲ್ಲಿ ಹೇಳಬಹುದಾದರೆ, ಅದ್ಯತನ ವಿಮುಕ್ತಿಯನ್ನು ತಾವಿಸ್ತರಿಸಿದಂತೆ ಪಡೆಯುವಂಥವರು ಕವಿಗಳಾಗುವುದಕ್ಕೆ ಅರ್ಹರು ಎಂದೆನ್ನ-ಬಹುದು.

—ಪ್ರೊ. ಎಂ. ಗೋಪಾಲಕೃಷ್ಣ ಅಡಿಗ

ಪೂರ್ವಾನುಭವವನ್ನೇ ಸ್ಮರಣೆಯಿಂದ ಪುನರನುಭೂತಿಗೆ ತಂದುಕೊಂಡು ಭಾವ–ರಸಾಸ್ವಾದನ ಮಾಡುವ ಕಾವ್ಯಕೃತಿ ಒಂದು ಬಗೆಯದು. ಅನನುಭೂತ-ವಾದ ಭಾವಗಳನ್ನು ಅನುಭವಕ್ಕೆ ನಿಲುಕುವಂತೆ ಶಬ್ದಶಕ್ತಿ ಸಾಮರ್ಥ್ಯದಿಂದ ಜೀವದ

ಬೇರೆ ಭೂಮಿಕೆಗೆ ಏತ್ತುವದು ಇನ್ನೊಂದು ಬಗೆಯ ಕಾವ್ಯಕೃತಿ..................... ಅನುಭವ ಎಷ್ಟೇ ವಿಶಿಷ್ಟ ಸ್ವರೂಪದ್ದಾಗಿದ್ದರೂ ಅದರ ಸಾಹಿತ್ಯೀಕರಣವಾದೊಡನೆ ಅದರ ಸಾಮಾನ್ಯೀಕರಣವೂ ಆಗುತ್ತದೆ-ಅಂದರೆ–ಅಸಾಮಾನ್ಯವನ್ನು ಸಾಮಾನ್ಯಕ್ಕೆ ತಂದು ಮುಟ್ಟಿಸುವ ಕಾರ್ಯವೂ ಸಾಮಾನ್ಯವನ್ನು ಅಸಾಮಾನ್ಯತೆಗೆ ಏತ್ತುವ ಕಾರ್ಯವೂ ಸಾಹಿತ್ಯ ಮುಖಾಂತರವಾಗಲೂ ನಡೆದಿರುತ್ತವೆ.

—ಡಾ. ಡಿ. ಆರ್. ಬೇಂದ್ರೆ

ಆಧುನಿಕ ಕಾವ್ಯವು—ಅಲ್ಲ, ಯಾವದೇ ವಿಶಿಷ್ಟ, ಉತ್ತಮ, ದುರೂಹವಾದ ಕ್ಲಿಷ್ಟ ಕವಿತೆಯು– ವಿಮರ್ಶಾವಿಚಕ್ಷಣನೊಬ್ಬನ ಮಧ್ಯಸ್ಥಿಕೆಯಿಲ್ಲದಿದ್ದರೆ– ಅವನ ವ್ಯಾಖ್ಯಾನ, ಭಾಷ್ಯ, ಮೀಮಾಂಸೆ ಸಿಗದಿದ್ದರೆ, ಓದುಗರ ಪಾಲಿಗೆ ಒಡೆಯದ ಒಗಟಾಗಿಯೇ ಉಳಿಯುತ್ತದೆ. ಪ್ರಾಚೀನ ಲಿಪಿಯನ್ನು ಅರ್ಥಮಾಡಿ ಹೇಳುವ ತಜ್ಞನಂತೆ ಇಂದು ವಿಮರ್ಶಕನು ಕವಿಯ ಇಂಗಿತವನ್ನು, ಅವನ ಕಾವ್ಯಕುಸುಮದಲ್ಲಿ ಹುದುಗಿದ "ನಾಳಿನ ಹಣ್ಣಿನ ರುಚಿ" ಯನ್ನು ಸಹೃದಯನಿಗೆ, ರಸಿಕನಿಗೆ ತೆರೆದು ತೋರಿಸಿ ತಿಳಿಸಿ ಹೇಳುವ "ಗಂಧವಹ" ನ ಕೈಕೊಳ್ಳಲೇಬೇಕಾಗುತ್ತದೆ. ಏಕೆಂದರೆ ಇತ್ತೀಚೆಗೆ ಕಾವ್ಯವು ಒಂದು ಕಲೆಯು ಕರಪಲ್ಲವಿಯಂತೆ ತೀರ ವೈಯಕ್ತಿಕ ಭಾಷೆಯಾಗಿ ಬಿಟ್ಟಿದೆ.

—ಗೌರೀಶ ಕಾಯ್ಕಿಣಿ

ಕುವೆಂಪು ಅವರು ಕಾವ್ಯ ಮೀಮಾಂಸೆಯ ತತ್ತ್ವ ಪ್ರತಿಪಾದನೆಗಾಗಿಯೇ ಬರೆದಿರುವ ಪ್ರಬಂಧಗಳು ಹತ್ತಾರು ಮಾತ್ರ. ಆದರೆ ಅವರ ತತ್ತ್ವಪ್ರತಿಪಾದನೆಗೆ ಅವರು ಬರೆದಿರುವ ಸಾಹಿತ್ಯವೆಲ್ಲ ನಿದರ್ಶನವೇ ಎಂದರೂ ಸಲ್ಲುತ್ತದೆ, ತಮ್ಮ ಸಾಹಿತ್ಯರಚನೆಯ ನಿದರ್ಶನದಿಂದಲೇ ತತ್ತ್ವವನ್ನು ಪ್ರತಿಷ್ಠಾಪಿಸಲು ಹೋದರೆ— ಇದರಲ್ಲಿ ನಾನಾರೀತಿಯ ಆರೋಪಗಳಿಗೆ ಎಡೆಯುಂಟು— ಸರ್ವಸಮ್ಮತವಾದ ಪ್ರಾಚೀನ ಸಾಹಿತ್ಯದಿಂದಲೇ ತಮ್ಮ ಸಿದ್ಧಾಂತಗಳಿಗೆ ದೃಷ್ಟಾಂತಗಳನ್ನು ಒದಗಿಸಿ ಉಪಪಾದಿಸಿರುವುದು ಕುವೆಂಪು ಅವರ ಅದ್ವಿತೀಯ ವೈಶಿಷ್ಟ್ಯವೆನ್ನಬಹುದು. ಪಂಪ, ರಾಘವಾಂಕ, ಕುಮಾರವ್ಯಾಸರಂತಹ ಕನ್ನಡ ಮಹಾಕವಿಗಳ ಪ್ರಯೋಗಗಳಂತೆ ವಾಲ್ಮೀಕಿ, ಕಾಳಿದಾಸರಂಥ ಸಂಸ್ಕೃತ ಮಹಾಕವಿಗಳ ಪ್ರಬಂಧಗಳೂ ಕುವೆಂಪು ಅವರ ಕಾವ್ಯಮೀಮಾಂಸೆಯ ತತ್ತ್ವಗಳನ್ನು ಬೆಳಗುವ ನಿದರ್ಶನಗಳಾಗುತ್ತವೆ.

—ಡಾ. ಕೆ. ಕೃಷ್ಣಮೂರ್ತಿ.

ಸಂಸ್ಕೃತ ಭಾಷೆಯ ವೈದಗ್ಧ್ಯ, ಗಾಂಭೀರ್ಯ, ಸಂಪತ್ತು, ಭಾಷಾಮರ್ಯಾದೆಯ ಒಳಗುಟ್ಟುಗಳನ್ನು ಅರ್ಥಮಾಡಿಕೊಂಡವರು ಕುವೆಂಪು. ಕೆಲವು ಉದಾಹರಣೆಗಳಿಂದ ಮೇಲೆ ಹೇಳಿದ ಅಂಶಗಳನ್ನು ತಿಳಿಯಬಹುದು.

ಸ್ವಪ್ನ ಕಾಮಿನಿ, ಮಧೂನ್ಮಾದಿನಿ, ರಸಹ್ಲಾದಿನಿ, ಭರತಭೋಧಿನಿ, ಕಲೋನ್ಮಾದಿನಿ, ರಸಹ್ರಾದಿನಿ, ಚಿರವನವಾಸಿನಿ. ಸುಮನಸಸಂಗಿನಿ, ವಿಶ್ವದೇಹಿನಿ, ಸ್ವರ್ಣಸ್ವಪ್ನರಂಗಿನಿ, ಭಾವನಾಂಗಿನಿ, ಅಂತರ್ಯಾಮಿನಿ, ಋತ ಅಧಿಕಾರಿಣಿ, ಪ್ರೇಮೋನ್ಮಾದಿನಿ, ಮೃತ್ಯುಮಾಧುರಿ, ಅರೂಪಸುಂದರಿ, ರಸಯೋಗಿನಿ, ಆತ್ಮಾಹ್ಲಾದಕಾರಿಣಿ, ಆತ್ಮೋದ್ಧಾರ ಕಾರಿಣಿ, ಘೋರಮುಣಿ, ಸುರತರಂಗಿಣಿ, ಕಲ್ಲೋಲಿನಿ, ನಿರಂತರ ಕ್ರಾಂತದರ್ಶಿನಿ, ಋತ ದರ್ಶಿನೀ, ಋತಚಿನ್ಮಯೀ. ಭೋಗಿನಿ, ಕಠೋರ ಕೋಮಲೆ, ನೀಲಿಮಾದಿಗಂಬರೆ, ಸಾಗರಾಂಬರೆ, ಶರಧಿಶರೀರೆ, ಗಿರಿವನವದನೆ, ಗಗನಾಂಬರೆ, ನಯನ ಸರೋವರ, ಮೇಘತಿಲೋತ್ತಮೆ, ಸಲಿಲತಿಲೋತ್ತಮೆ, ಲೋಕಾಂತರವಿಹಾರೆ, ಅಮೃತಾಹಾರೆ, ರಕ್ತತರ್ಪಣತೃಪ್ತೆ, ದಿವ್ಯಸಾಮಾನ್ಯೆ, ಕ್ರತುದೀಕ್ಷಿತೆ, ಬ್ರಹ್ಮಹೃದಯ ಸದ್ಮೆ, ಮನೋನ್ಮಾದಿನಿ.

—ಎಚ್. ಎಸ್. ಸುಜಾತ

ಹೋಮರನ ಎರಡು ಮಹಾಕಾವ್ಯಗಳೊಂದಿಗೆ ಕುವೆಂಪು ಅವರ "ರಾಮಾಯಣದರ್ಶನ" ವನ್ನು ಹೋಲಿಸುವಾಗ ಈ ಅಂಶಗಳನ್ನು ನೆನಪಿಡಬೇಕು. ಕುವೆಂಪು ಅವರ ಹಿಂದೆ ಭಾರತದಲ್ಲಿನ ಮಹಾಕಾವ್ಯಪರಂಪರೆ ಇದೆ, ಜಗತ್ತಿನ ಮಹಾಕಾವ್ಯಗಳ ಶ್ರೀಮಂತ ಜಗತ್ತಿದೆ, ವೇದಕಾಲದ ಋಷಿಗಳಿಂದ ಅರವಿಂದರ ವರೆಗೆ ಭಾರತದ ತತ್ವಜ್ಞಾನಿಗಳು ಅನುಗ್ರಹಿಸಿದ ಚಿಂತನೆಯ ಗಣಿ ಇದೆ. ಹೋಮರ್ ತನ್ನ ಕಾಲದ ನೂರಾರು ಪೌರಾಣಿಕ ಕಥೆಗಳಿಗೆ ಕೈಚಾಚಿ ಅವನ್ನು ಬಳಸಿಕೊಂಡ. ಕುವೆಂಪುವಿಗೆ ರಾಮಾಯಣದ ಕರ್ತೃ ವಾಲ್ಮೀಕಿ ಗುರು.

—ಎಲ್. ಎಸ್. ಶೇಷಗಿರಿರಾವ್

ವೇದಭಾಷೆಯಾಗಿ ಸಂಸ್ಕೃತವು ಇದ್ದ ಸ್ಥಿತಿಯಲ್ಲೇ ಸಾಗಿ ಬಂದಿರುವುದಿಲ್ಲ. ವೇದಾಂತದಲ್ಲಿ ಸಂಸ್ಕೃತ ಭಾಷೆಯೇ ಬೇರೆ, ಪಾಣಿನಿಯ ವ್ಯಾಕರಣದ ಸಂಸ್ಕೃತ ಭಾಷೆಯೇ ಬೇರೆ. ಲೌಕಿಕ ಸಂಸ್ಕೃತವೇ ಬೇರೆ. ಇನ್ನಿತರ ಭಾಷೆಗಳಂತೆ ಸಂಸ್ಕೃತ ಭಾಷೆಯೂ ಪರಿವರ್ತನ ಹೊಂದುತ್ತಲೇ ಬಂದಿದೆ......ಸಂಸ್ಕೃತವು ವ್ಯಾವಹಾರಿಕ, ರಾಜಕೀಯ ಮತ್ತು ಸಾಹಿತ್ಯಿಕ ಭಾಷೆಯಾಗಿ ಪ್ರಚಾರದಲ್ಲಿದ್ದಿತು......ಸಂಸ್ಕೃತವು ಇಂದು ಧಾರ್ಮಿಕ ಐಕ್ಯವನ್ನು ಕಾಯ್ದುಕೊಂಡು ಬರುವ ಒಂದೇ ಒಂದು ಭಾಷೆಯಾಗಿದೆ...ಸಂಸ್ಕೃತವು ಮೃತಭಾಷೆಯಲ್ಲ. ಜೀವಂತ ಭಾಷೆ. ಕ್ರಿ. ಪೂ. 3000 ವರ್ಷಗಳಿಂದ ಇಂದಿನವರೆಗೆ ಭಾರತದಲ್ಲಿ ನಡೆದು ಬಂದ ಭಾಷೆ.

—ಪ್ರ. ಗೋ. ಕುಲಕರಣಿ

ಈಗ ಹಳಗನ್ನಡದಲ್ಲಿರುವ ಅಲಂಕಾರ ಗ್ರಂಥಗಳೆಲ್ಲಾ ಸಂಸ್ಕೃತ ಗ್ರಂಥಗಳನ್ನು ಅನುಸರಿಸಿ ಬರೆಯಲ್ಪಟ್ಟವು. ಕನ್ನಡ ಆಲಂಕಾರಿಕರು ಪ್ರಾಯಶಃ ತಮ್ಮ

ಗ್ರಂಥಗಳಲ್ಲಿ ಯಾವ ಹೊಸಸಂಗತಿಯನ್ನು ಎತ್ತಿಯಾಗಲಿ, ವಿಚಾರಮಾಡಿಯಾಗಲಿ ಹೇಳಿಲ್ಲ.

— ಡಾ. ಎ. ಆರ್. ಕೃಷ್ಣಶಾಸ್ತ್ರಿಗಳು
ಮತ್ತು ಕೆ. ವರದಾಚಾರ್ಯರು.

ಸ್ವಪರಂಪರೆಯನ್ನು ಅವಲಂಬಿಸದ ಬೆಳವಣಿಗೆ ಸಹಜವಾಗದು, ಸಂಪುಷ್ಟವಾಗದು. ಅಂತೆಯೇ ಲಲಿತ ಕಲಾಶಾಸ್ತ್ರದ ನಮ್ಮ ಪೂರ್ವಪರಂಪರೆಯನ್ನು ತಿಳಿದಲ್ಲದೆ ನಮಗೆ ಇಂದು ಅಗತ್ಯವಾದ ನೂತನಕಲಾಶಾಸ್ತ್ರ, ಸಹಜ ಅರಳಿದಂತೆ, ಹುಟ್ಟಿ ಬೆಳೆಯಲಾರದು. ನಾಟ್ಯಕಲೆಯ ವಿಷಯವನ್ನು ತೆಗೆದುಕೊಂಡರೂ ಅಷ್ಟೆ: ನಮ್ಮಲ್ಲಿ ಈ ಶತಮಾನದ ನೂತನ ನಾಟ್ಯಶಾಸ್ತ್ರ ಹುಟ್ಟಿ ಬೆಳೆಯ ಬೇಕಾದರೆ ಮೊದಲಿಗೆ ನಮ್ಮ ಭಾರತೀಯ ನಾಟ್ಯಶಾಸ್ತ್ರದ ಪರಂಪರೆ ಸ್ಪಷ್ಟವಾಗಿ ತಿಳಿಯಬೇಕು. ಅದಕ್ಕೆ ಮುಖ್ಯವಾಗಿ ಸಂಸ್ಕೃತದಲ್ಲಿರುವ ನಾಟ್ಯವಿಷಯಕ ಗ್ರಂಥಗಳೆಲ್ಲವೂ ಪ್ರಾದೇಶಿಕ ಭಾಷೆಗಳಲ್ಲಿ ಅನುವಾದವಾಗಬೇಕು.

—ಕೆ. ವಿ. ಸುಬ್ಬಣ್ಣ

ಮತ್ತೂ ಹೆಚ್ಚಿನ ಸಂತೋಷದ ಸಂಗತಿ ಎಂದರೆ:—ಉಪನಿಷತ್ತಿನ ಮಂತ್ರ-ಗಳನ್ನು ದೇವನಾಗರಿಯಲ್ಲಿಯೂ ಕನ್ನಡ ಅಕ್ಷರದಲ್ಲಿಯೂ ಅಚ್ಚು ಮಾಡಿಸಿದ್ದಾರೆ. ಸಂಸ್ಕೃತ ಮೂಲದ ಜೊತೆಗೆ ಕನ್ನಡದಲ್ಲಿಯೂ ಇಂಗ್ಲಿಷಿನಲ್ಲಿಯೂ ಅರ್ಥಗಳನ್ನು ಒದಗಿಸಿ ಕೊಟ್ಟಿದ್ದಾರೆ. ಈ ಉಪಕಾರಕ್ಕಾಗಿ ಬೆಂಗಳೂರಿನ ವಿಶ್ವವಿದ್ಯಾಲಯಕ್ಕೆ ನಮ್ಮ ಅಭಿನಂದನೆಗಳು ಸಲ್ಲಬೇಕು. ಸಂಸ್ಕೃತಕ್ಕೆ. ಕನ್ನಡಕ್ಕೆ. ಇಂಗ್ಲಿಷಿಗೆ ಸಲ್ಲಬೇಕಾದ ಸ್ಥಾನ ಈಗ ಈ ಸಣ್ಣ ಆರಂಭದಿಂದ ಮೊದಲಾಗಿದೆ. ಇದು ಹೀಗೆ ಮುಂದು-ವರಿಯಲಿ, ವಿದ್ಯಾರ್ಜನೆಯ ಮಾಧ್ಯಮ ಕನ್ನಡವಾಗಲಿ, ಸಂಸ್ಕೃತವೂ ಇಂಗ್ಲಿಷೂ ಕನ್ನಡದ ವಿಶಾಲವಾದ ವಕ್ಷಃಸ್ಥಳಕ್ಕೆ ಆಜಾನುಬಾಹುಗಳಾಗಲಿ. ಸ್ವಸ್ತಿ.

—ಜಿ. ಪಿ. ರಾಜರತ್ನಂ

ನಮ್ಮ ಭಾಷೆ, ನಮ್ಮ ವಿಚಾರ. ನಮ್ಮ ರೀತಿ–ನೀತಿಗಳು. ನಮ್ಮ ಗಾದೆಯ ಮಾತುಗಳು ನಮ್ಮ ಅಜ್ಜಿಯರು ಹೇಳುವ ಕಥೆಗಳು–ಇವೆಲ್ಲವೂ ಆರ್ಯರ ಸಂಸ್ಕೃತಿ-ಯೊಡನೆ ಕಲಬೆರಕೆಯಾಗಿ. ಆರ್ಯ-ದ್ರಾವಿಡವೆಂಬ ಭೇದವೇ ಮಾಯವಾಗಿ ಸಂಸ್ಕೃತ ಸಾಹಿತ್ಯದ ಮಾರ್ಗವಾಗಿ ನಮಗೆ ಜೀವನ ಶಕ್ತಿಗಳಾಗಿ ದೊರೆತಿವೆ. ಸಂಸ್ಕೃತ ಭಾಷೆಯನ್ನರಿಯದಿದ್ದರೆ ಒಂದೆಡೆ. ಬೇಕಾದ ವಿಚಾರಕ್ಕೆ ತಕ್ಕ ಶಬ್ದ ಸಾಮಗ್ರಿ ಇಲ್ಲದೆ ಹೋದರೆ, ಇನ್ನೊಂದೆಡೆ ನಮ್ಮಲ್ಲಿಯ ಸಾಮಾನ್ಯ ಜನರ ಮಾಧ್ಯಮ ನಮಗೆ ಇಲ್ಲ-ದಂತಾಗುವುದು. ಸಂಸ್ಕೃತದ ಆಗತ್ಯದ ಬಗ್ಗೆ ಕನ್ನಡಿಗರಲ್ಲಿ ಆಂಡಯ್ಯನ ಕಾಲದಿಂದಲೂ ಭಿನ್ನಾಭಿಪ್ರಾಯವಿದೆ; ಆದರೆ ಅಭಿಪ್ರಾಯ ಭಿನ್ನವಾದರೆ ಸಂಸಾರವು ಕೂಡಿಯ

ನಡೆಯುವುದು ಅನಿವಾರ್ಯವೆಂಬ ಸಾಂಪ್ರದಾಯಿಕ ಗಂಡ-ಹೆಂಡತಿಯ ಜೊತೆಯಂತೆ ಸಂಸ್ಕೃತ-ಕನ್ನಡಗಳ ಜೊತೆ ಇದೆ.

—ವಸ್ತುಕೋಶ, ಪ್ರಬುದ್ಧ ಕರ್ಣಾಟಕ, 1956
ಸಂಪುಟ 37, ಸಂಚಿಕೆ 4

ಇನ್ನು ಇತ್ತೀಚೆಗೆ ವಿಶ್ವವಿದ್ಯಾನಿಲಯಗಳಲ್ಲಿ ಓದುವ ಸ್ನಾತಕರನ್ನು ಬಿಟ್ಟರೆ ನಮ್ಮ ಹಳಗನ್ನಡ ಸಾಹಿತ್ಯ ಕೃತಿಗಳ ಆಳವಾದ ಅಭ್ಯಾಸವನ್ನು ಜನತೆಯು ಮಾಡಲಿಲ್ಲ. ಇಷ್ಟೇ ಅಲ್ಲ. ಎಷ್ಟೋ ತರುಣ ಲೇಖಕರೂ ಹಳೆಯ ಸಾಹಿತ್ಯದ ಪರಿಚಯವನ್ನು ಹೊಂದಿಲ್ಲ. ನಮ್ಮ ಹಿಂದಿನ ಸಾಹಿತ್ಯ ಪರಂಪರೆಯ ಸಮೃದ್ಧವಾದ ಅಡಿಗಲ್ಲಿನ ಮೇಲೆಯೇ ನಮ್ಮ ಮುಂದಿನ ಸಾಹಿತ್ಯವು ರೂಪುಗೊಳ್ಳುತ್ತ ಹೋಗಬೇಕು. ಪರಕೀಯ ಭಾಷೆ, ಸಾಹಿತ್ಯಗಳಿಂದ ಹೊಸ ಹೊಸ ದೃಷ್ಟಿಗಳು ಮೂಡಲಿ; ಆದರೆ ಅವೆಲ್ಲ ನಮ್ಮ ಸಂಸ್ಕೃತಿ ಪರಂಪರೆಗಳಿಗೆ ಒಗ್ಗುವಂತೆ ಬೆಳೆಯಲಿ.

—ಡಾ. ಆ. ನೇ. ಉಪಾಧ್ಯೆ

ಸಿದ್ಧರಾಮನ ವಚನಗಳಲ್ಲಿ. ಶಬ್ದದಲ್ಲಿ ಅರ್ಥಸಮೃದ್ಧಿ ಇದೆ. ಪದವಿನ್ಯಾಸ ಸಹಜವಾಗಿದೆ. ಭಾವ ತುಂಬಿ ತುಳುಕುತ್ತದೆ. ಭಾವಾಭಿವ್ಯಕ್ತಿಗೆ ಉಚಿತವಾದ ಪೋಷಕವಾದ ಲಯವಿದೆ. ಒಟ್ಟಂದದ ಅನುಭವದಲ್ಲಿ ಪ್ರಸಾದ ಗುಣ ಉಂಟಾಗುತ್ತದೆ. ಭಾವದ ಆಳ ಹಾಗೂ ಎತ್ತರ ಬೆರಗು ತರಿಸುವಂತಹದಿದೆ. ಕನ್ನಡ-ಸಂಸ್ಕೃತಗಳ ಹಿತಮಿತವಾದ ಬೆರಕೆ ಭಾಷೆಯ ಸೌಂದರ್ಯವನ್ನು ಹೆಚ್ಚಿಸಿದೆ.

— ಎ. ಎ. ದಿವಾಣಜಿ

ಆದರೆ ವಚನಕಾರರು (ಅವರಲ್ಲಿ ಕೆಲವರಾದರೂ ಆಳವಾದ ಸಂಸ್ಕೃತ ಪಾಂಡಿತ್ಯವನ್ನು ಗಳಿಸಿದ್ದರೆನ್ನಲು ವಚನಗಳಲ್ಲಿಯೇ ಆಧಾರವನ್ನು ಕಾಣಬಹುದು). ತಮ್ಮ ಆಧ್ಯಾತ್ಮಿಕ ವಿಚಾರ, ಚರ್ಚೆ, ಧಾರ್ಮಿಕಬೋಧನೆ, ಅನುಭಾವಿಕ ಅನುಭಾವಗಳ ಅಭಿವ್ಯಕ್ತಿ–ಇವೆಲ್ಲವನ್ನೂ ಕನ್ನಡದಲ್ಲಿಯೇ ನಡೆಸಿದರು.

— ಪಿ. ವಿ. ನಾರಾಯಣ

ಗಿರಿಜಾಕಲ್ಯಾಣವನ್ನು ಬರೆಯುವ ಹೊತ್ತಿಗೆ ಹರಿಹರನ ಮುಂದೆ ಆಗಲೇ ಪಂಚಮಹಾಕಾವ್ಯಗಳಲ್ಲಿ ಒಂದೆಂದು ಪ್ರಸಿದ್ಧವಾಗಿದ್ದ ಕುಮಾರ ಸಂಭವ, ಪ್ರಾಯಶಃ ಆಗ ದೊರೆಯುತ್ತಿದ್ದ ಉದ್ಭಟನ ಕುಮಾರ ಸಂಭವವೂ ಇದ್ದುವು. ಮತ್ತೆ, ಲಿಂಗ ಪುರಾಣ ಶಿವ-ಸ್ಕಾಂದ-ಪದ್ಮ-ಸೌರಪುರಾಣಗಳು ಆ ವೇಳೆಗಾಗಲೆ ಹಲವು ಕವಲಾಗಿ ಬೆಳೆದಿದ್ದುವು. ಅವುಗಳ ಸಾರಸತ್ವವನ್ನು ಬಿಡದೆ, ಸವಾಲನ್ನೂ ನಿರ್ಲಕ್ಷಿಸದೆ ಮೇಲಾಗಿ ತನ್ನ ಪ್ರತಿಭೆಯನ್ನೂ ಮರೆಸದೆ ಈ ಕಾವ್ಯ ರಚಿಸಬೇಕಿತ್ತು.

— ಎಸ್. ನಾರಾಯಣ ಶೆಟ್ಟಿ

(ಹರಿಹರನ) ರಕ್ಷಾಶತಕದ ಮೊದಲ ನಾಲ್ಕು ಪದ್ಯಗಳು ಶಂಕರಾಚಾರ್ಯರ ಶಿವಾಪರಾಧಕ್ಷಮಾಪಣಸ್ತೋತ್ರದ ಮೊದಲ ಮೂರು ಪದ್ಯಗಳ ಭಾವವನ್ನೇ ಪ್ರತಿಬಿಂಬಿಸುತ್ತದೆ.

— ಕೋ ಚೆನ್ನಬಸಪ್ಪ

(ಹರಿಹರನ ಗಿರಿಜಾಕಲ್ಯಾಣದಲ್ಲಿ) ದೇಶಿಗಿಂತ ಸಂಸ್ಕೃತದ ಬಳಕೆಯೇ ಮಿಗಿಲು.

— ಡಿ. ವಿ. ಶೇಷಗಿರಿರಾವ್

ಹರಿಹರ ತನ್ನ ಕೃತಿಯಲ್ಲಿ ಹಲವು ಸ್ವತಂತ್ರ ಕಲ್ಪನೆಗಳನ್ನು ಜೋಡಿಸಿ ಒಂದು ಹೊಸತನವನ್ನು ಮೆರೆದಿರುವನಾದರೂ ಕಾಳಿದಾಸನ ಕೃತಿಯ ಪ್ರಭಾವ ಅವನ ಕೃತಿಯ ಮೇಲೆ ಬೀಳದೆ ಇಲ್ಲ.

— ಕೆ. ವೆಂಕಟರಾಮಪ್ಪ

ಕೆರೆಯ ಪದ್ಮರಸನು ಕನ್ನಡದಲ್ಲಿ ದೀಕ್ಷಾಬೋಧೆಯೆಂಬ ಕೃತಿಯನ್ನೂ ಸಂಸ್ಕೃತ-ದಲ್ಲಿ ಸಾನಂದಚರಿತ್ರೆಯೆಂಬ ಕೃತಿಯನ್ನೂ ರಚಿಸಿದ್ದಾನೆ.

— ಎನ್. ವಿ. ವಿಮಲ

ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಷಟ್ಪದೀ ಕಾವ್ಯಪ್ರಕಾರವು ವಿಶಿಷ್ಟವೂ ವಿಪುಲವೂ ಆದುದು............ಈ ಸಂಗತಿಗಳಿಗೆ ಪೋಷಕವಾಗಿ ಸಂಸ್ಕೃತದಲ್ಲಿರುವ "ಸಂಗೀತ ರತ್ನಾಕರ" ದ ಕರ್ತೃವಾದ ಶಾರ್ಙ್ಗದೇವನ (ಕ್ರಿ. ಶ. ಸುಮಾರು 1250) ಲಕ್ಷಣ ಪದ್ಯಗಳು ಹೀಗಿವೆ :

ಷಷ್ಠಸ್ತೃತೀಯಾಸ್ತ್ರಿಗಣ ಪೃಥಗ್ ದ್ವಿ ದ್ವಿ ಗಣಾಃ ಪರೇ
ಚತ್ವಾರಶ್ಚರಣಾ ಬಾಣ ಪ್ರಾಸ್ತ್ಯ ಷಷ್ಠತೃತೀಯಕೌ ।
ಶೇಷಾಸ್ತು ಮಾನ್ಮಥಗಣಾ ಯಸ್ಯಾಂ ಸಾ ಷಟ್ಪದೀ ಮತಾ
ಕರ್ಣಾಟಭಾಷಯಾ ತಾಲವರ್ಜಿತಾ ನಾದಮುಕ್ತಿಕಾ ॥

— ಸಾ. ಜಿ. ವರದರಾಜರಾವ್

ವೀರೇಶನ ಕಥೆಯು ಸ್ಕಾಂದಪುರಾಣ, ಶಿವಪುರಾಣ, ಲಿಂಗಪುರಾಣ, ವಾಯು-ವೀಯ ಸಂಹಿತೆ, ಭಾರತ ಮತ್ತು ಭಾಗವತ ಮೊದಲಾದ ಪ್ರಾಚೀನ ಪುರಾಣಗಳಲ್ಲಿ ಅಡಕವಾಗಿದೆ. ಇವುಗಳ ಆಧಾರದಿಂದ ಭಕ್ತಕವಿಯಾದ ಹರಿಹರನು ತನ್ನ ಮನೋ-ಧರ್ಮಕ್ಕನುಸಾರವಾಗಿ ಕೆಲವು ಮಾರ್ಪಾಡುಗಳೊಂದಿಗೆ ಲಲಿತರಗಳೆಯಲ್ಲಿ ವೀರಭದ್ರದೇವರ ರಗಳೆಯನ್ನು ರಚಿಸಿದ್ದಾನೆ.

— ಸಂಗಮನಾಥ ಜಿ. ಹಂಡಿ

(ನೇಮಿಚಂದ್ರನ) ಲೀಲಾವತಿ ಲೌಕಿಕ ಕಾವ್ಯ. ಆದರೂ ಇದರಲ್ಲಿ ಬರುವ ಕಥೆ ರಾಮಾಯಣ–ಮಹಾಭಾರತಗಳಿಂದ ಎತ್ತಿಕೊಂಡದ್ದಾಗಿದೆ ....

ಪರಂಪರಾಗತವಾಗಿ ಹರಿದು ಬಂದ ಸಂಸ್ಕೃತ-ಪ್ರಾಕೃತ ಭಾಷೆಗಳಲ್ಲಿ ಆಗಲೇ ಪ್ರಚಾರವಾಗಿದ್ದ ಬಂಧಾ ಮಾತಾಗಿವೆಯಾಗಿ.

— ಬಿ. ಎಸ್. ಕುಲಕರ್ಣಿ

ಮಹಾಭಾರತ, ವಿಷ್ಣು ಪುರಾಣಗಳಲ್ಲಿ ಅದರಲ್ಲೂ ಹೆಚ್ಚಾಗಿ ಭಾಗವತ ಪುರಾಣದಲ್ಲಿ ಬರುವ ಕೃಷ್ಣನ ಚರಿತ್ರೆಯು ಜೈನಕವಿಗಳನ್ನು-ವಿಶೇಷವಾಗಿ ಕನ್ನಡ ಜೈನಕವಿಗಳನ್ನು ಆಕರ್ಷಿಸಿದಂತಿದೆ.

— ಬಿ. ಎಸ್. ಕುಲಕರ್ಣಿ

ಇವರಲ್ಲಿ ಮೊದಲನೆಯ ನಾಗವರ್ಮ ಮತ್ತು ದುರ್ಗಸಿಂಹರು ಚಂಪೂಕೃತಿಗಳನ್ನು ತಮ್ಮದೇ ಆದ ವಿಶಿಷ್ಟ ಹಾಗೂ ಸುಲಲಿತ ಶೈಲಿಯಲ್ಲಿ ರಚಿಸಿದ್ದರೂ ಇವು ಸ್ವತಂತ್ರ ಪ್ರತಿಭೆಯನ್ನು ಬೆಳಗಿಸುವ ಪ್ರಯತ್ನಗಳಾಗಿಲ್ಲ: ಅನುವಾದಗ್ರಂಥಗಳಾಗಿವೆ. ಬೇರೊಂದು (ಹೇರಡೊಂದು) ಸಾಹಿತ್ಯರೂಪದಲ್ಲಿ ಪರಿವರ್ತನೆಗೊಂಡಿದ್ದರೂ ವಿಷಯ ನಿರೂಪಣೆಯ ರೀತಿನೀತಿಯಲ್ಲಿ ಅವು ಸಂಸ್ಕೃತದ ಗದ್ಯಕವಿಗಳ ಕೃತಿಗಳ ಛಾಯಾನುವರ್ತಿಗಳೇ ಆಗಿವೆ.

— ಎಸ್. ಆರ್. ಮಳಗಿ

ಸಂಸ್ಕೃತ ಭಾಷೆಯಲ್ಲಿರುವ "ರಸಕಲಿಕಾ" ಎಂಬ ಗ್ರಂಥವು ರುದ್ರಭಟ್ಟನದಿರಲಾರದು .... ಅಥವಾ ರಸಕಲಿಕೆಯಲ್ಲಿ ಅನುವಾದಿಸಲ್ಪಟ್ಟ ಶೃಂಗಾರಸೂತ್ರಗಳಿಗೆ (ನೇಮಿಚಂದ್ರನ ಲೀಲಾವತಿಯು) ದೃಷ್ಟಾಂತವಾಗುತಿರಬೇಕು.

— ಪ್ರೊ. ಜಿ. ವೆಂಕಟಸುಬ್ಬಯ್ಯ

ನೇಮಿಚಂದ್ರನು ತನ್ನ ನೇಮಿನಾಥಪುರಾಣದಲ್ಲಿ ದಿಗಂಬರ ಜೈನಪಂಥದ ಕಥಾಸಂಪ್ರದಾಯವನ್ನು ಅನುಸರಿಸುತ್ತಾನೆ. ಸಂಸ್ಕೃತ ಮಹಾಪುರಾಣದಲ್ಲಿ ಈ ಸಂಪ್ರದಾಯದ ಕಥೆಗಳು ನಿರೂಪಿತಗೊಂಡಿವೆ.

— ಪ್ರೊ. ಜಿ. ವೆಂಕಟಸುಬ್ಬಯ್ಯ

"ಅಗ್ಗಳನು ತನ್ನ ಚಂದ್ರಪ್ರಭ ಚರಿತೆಗೆ...... ವೀರನಂದಿಕೃತವಾದ ಸಂಸ್ಕೃತ ಚಂದ್ರಪ್ರಭಚರಿತೆ ಆಕರವಾಗಿರಬೇಕು" ಎಂಬ ಅಂಶವನ್ನು ಈ ಎರಡೂ ಕಾವ್ಯಗಳಲ್ಲಿ ಬರುವ ಸಾಧಾರಣವಾದ ಹೋಲಿಕೆಗಳಿಂದ ಸ್ಪಷ್ಟಪಡಿಸಿದ್ದಾರೆ.

— ಸಿ. ಬಸಪ್ಪ

ಪಾರ್ಶ್ವನಾಥಪುರಾಣವು ಹದಿನಾರು ಆಶ್ವಾಸಗಳಿಂದ ಕೂಡಿದ ದೊಡ್ಡ ಚಂಪೂಕಾವ್ಯ. ಇದರ ಕಥಾವಸ್ತು ಸಂಸ್ಕೃತದಲ್ಲಿ ಗುಣಭದ್ರ ಮಹಾಕವಿಯಿಂದ ರಚಿತವಾದ ಮಹಾಪುರಾಣದಲ್ಲಿ, ಹತ್ತನೆಯ ಶತಮಾನದಲ್ಲಿ ಚಾವುಂಡರಾಯನಿಂದ ರಚಿತವಾದ ಕನ್ನಡ ಗದ್ಯಗ್ರಂಥಗಳಲ್ಲಿ ದೊರೆಯುತ್ತದೆ.

— ಸಿ. ಬಸಪ್ಪ

(ಜನ್ನನ) ಯಶೋಧರ ಚರಿತೆಯ ಕಥೆ ಬಹಳ ಪ್ರಾಚೀನವಾದದ್ದು. ಪ್ರಾಕೃತ ಸಂಸ್ಕೃತ ಕಾವ್ಯಗಳಲ್ಲಿ ಈ ಕಥಾವಸ್ತು ಬಳಕೆಯಾಗಿದೆ.

—ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ವೈದಿಕ ಸಾಹಿತ್ಯದೊಳಗಿನ ಲೌಕಿಕ ಕಾಮನಿಗೆ ಸಂಬಂಧಿಸಿದ ಈ ಅಸ್ಫುಟವಾದ ಚಾರಿತ್ರಿಕ ಅಂಶವನ್ನು ಎತ್ತಿಕೊಂಡು ಆಂಡಯ್ಯನು ಆಗಮಿಕ (ಜೈನ) ಸಾಹಿತ್ಯ ಪ್ರಣೀತವಾದ ಕಲ್ಪನೆಯ ಅಳಿಸಿಂದ ಲೌಕಿಕ ಕಾಮನ ಪಾತ್ರವನ್ನು ಉನ್ನತ-ಗೊಳಿಸಲು ಪ್ರಯತ್ನಿಸಿರುವನು.

—ಸದಾನಂದ ನಾಯಕ

ಅಚ್ಚಗನ್ನಡವೆಂದರೆ ಶುದ್ಧವಾದ ದೇಶಿಯ ಪದವು ಮಾತ್ರವೇ ಅಲ್ಲ; ಅಪ-ಭ್ರಂಶಕ್ಕೂ ತದ್ಭವಕ್ಕೂ ತದ್ಭವಸಮಾಸಕ್ಕೂ ಇಲ್ಲವೆ ಇವುಗಳೊಡನೆ ದೇಶಿಯ ಪದವನ್ನು ಬೆರೆಸಿ ಮಾಡಿದ ಸಮಾಸಕ್ಕೂ "ಅಚ್ಚಗನ್ನಡ"ವೆಂದು ಕೇಶಿರಾಜನು ಪರ್ಯಾಯದಿಂದ ತಿಳಿದಿರುವನು.

—ಸದಾನಂದ ನಾಯಕ

ಹಸ್ತಿಮಲ್ಲನ ನಾಟಕಗಳು ಸಂಸ್ಕೃತ ಸಾಹಿತ್ಯದಲ್ಲಿ ಮಹತ್ವಪೂರ್ಣ ಕೃತಿಗಳಾಗಿವೆ. ಆದರೆ ಆದಿಪುರಾಣವನ್ನು ಬರೆಯುವಲ್ಲಿ ಅವನು ತನ್ನ ಸಂಸ್ಕೃತ ಪಾಂಡಿತ್ಯವನ್ನು ಮೆರೆಯಲು (ಮೆರೆಯಿಸಲು) ಪ್ರಯತ್ನಿಸಿಲ್ಲ.

—ಎಸ್. ಪಿ. ಪಾಟೀಲ

ಇದುವರೆಗಿನ ಪರಿಶೀಲನೆಯಿಂದ ಕ್ರಿ. ಶ. 1150 ರಿಂದ 1350 ರ ವರೆಗಿನ ಕಾಲಖಂಡದಲ್ಲಿ ಕನ್ನಡಿಗರು ಅನ್ಯಭಾಷೆಗಳಾದ ತೆಲುಗಿನಲ್ಲಿ ಸ್ವಲ್ಪಮಟ್ಟಿಗೂ ಸಂಸ್ಕೃತ ದಲ್ಲಿ ಸಮೃದ್ಧವಾಗಿಯೂ ಸಾಹಿತ್ಯರಚನೆ ಮಾಡಿದ್ದರೆಂಬುದು ವಿದಿತವಾಗುತ್ತದೆ... ಸಂಸ್ಕೃತದ ರಚನೆಗಳು ಹೆಚ್ಚಾಗಿ ವೇದಾಂತ ವಿಷಯಕವಾಗಿವೆ: ಕಾವ್ಯ, ನಾಟಕ. ಅಲಂಕಾರ, ವ್ಯಾಕರಣ ಮುಂತಾದ ಸಾಹಿತ್ಯ ಹಾಗೂ ಸಾಹಿತ್ಯಶಾಸ್ತ್ರಕ್ಕೆ ಸಂಬಂಧಿಸಿದವು ಸ್ವಲ್ಪ ಮಟ್ಟಿಗೆ ಗೋಚರವಾಗಿವೆ.

—ಟಿ. ಕೇಶವಭಟ್ಟ

"ಅಥ ಬಭೂವ ದ್ವಿಜಕುಲಂ ಪ್ರಾಂತು ಚರಮ್‌ಗುಣೇಂದ್ವಂಶುಮಂಡಲಂ ತ್ರ್ಯಾರ್ಷವರ್ತ್ಮ ಹಾರಿತೀಪುತ್ರಂ ಋಷಿಮುಖ್ಯ ಮಾನವ್ಯ ಗೋತ್ರಜಂ। ವಿವಿಧ ಯಜ್ಞಾವಭೃತ ಪುಣ್ಯಾಂಬು ನಿಯತಾಭಿಷೇಕಾರ್ದ್ರ ಮೂರ್ಧಜಂ। ಪ್ರಮಾಣಾವ ಗಾಹನಿಷ್ಣಾತಂ ವಿಧಿವತ್ ಸಮಿದ್ಧಾಗ್ನಿ ಸೋಮಪಂ। ಪ್ರಣವಪೂರ್ವ ಷಡ್ವಿಧಾಧ್ಯಯನ+ ಅನರ್ಘ ಮಾನಾಂತರಾಲಯಂ। ಅಕ್ಷತ ಚಾತುರ್ಮಾಸ್ಯ ಹೋಮೇಷ್ಟಿ ಪಶುಪಾರ್ವಣ ಶ್ರಾದ್ಧ ಪೌಷ್ಟಿಕಂ। ಅತಿಥಿನಿತ್ಯ ಸಂಪ್ರೀತಾವಸಥ ಸಹಸ್ರಯಾವಂಥ್ಯ

ನೈತ್ಯಕಂ । ಗೃಹ ಸಮೀಪದೇಶ ಸಂರೂಢ ವಿಕಸತ್ ಕದಂಬ್ಯಕಪಾದಪರಿ ತದುಪಚಾರಾತ್ ತದಾ ಅಸ್ಯ ತರೋಃ ಸಾಮಾನ್ಯಂ ಸಾಧರ್ಮ್ಯಂ ಅಸ್ಯ ತತ್ । ಪ್ರವವೃತೇ ಸತೀರ್ಥ್ಯವಿಪ್ರಾಣಾಂ ಪ್ರಾಚುರ್ಯಂ ತದ್ವಿಶೇಷಣಂ ॥ ಏವಮಾಗತೇ ಕದಂಬಕುಲೇ ಶ್ರೀಮಾನ್ ಬಭೂವ ದ್ವಿಜೋತ್ತಮಃ । ನಾಮತೋ ಮಯೂರ ಶರ್ಮೇತಿ ಶ್ರುತಶೀಲಶೌಚಾದ್ಯಲಂಕೃತಃ ॥ ಯಃ ಪ್ರೇಯಾಯ ಪಲ್ಲವೇಂದ್ರಪುರೀಂ ಗುರುಣಾ ಸಹಂ ವೀರಶರ್ಮಣಾ । ಅಧಿಜಿಗಾಂಸು ಪ್ರವಚನಂ ನಿಖಿಲಂ ಘಟಿಕಾಂ ವಿವೇಶ ಆಶುತರ್ಕಕಃ ॥ ತತ್ರ ಪಲ್ಲವಾಶ್ವಸಂಸ್ಥೇನ ಕಲಹೇನ ತೀವ್ರೇಣ ರೋಷಿತಃ । ಕಲಿಯುಗೇ ಅಸ್ಮಿನ್ನಹೋ ಬತ ಕ್ಷತ್ರಾತ್ ಪರಿಪೇಲವಾ ವಿಪ್ರತಾ ಯತಃ । ಗುರು ಕುಲಾನಿ ಸಮ್ಯಗಾರಾಧ್ಯ ಶಾಖಾಮಧೀತ್ಯಾಪಿ ಯತ್ನತಃ ಬ್ರಹ್ಮಸಿದ್ಧಿರ್ ಯದಿ ನೃಪಾಧೀನಾ ಕಿಮತಃ ಪರಂ ದುಃಖಮಿತ್ಯತಃ । ಕುಶಸಮಿದ್ ದೃಷತ್ ಸ್ರುಗಾಜ್ಯ ಚರುಗ್ರಹಣಾದಿ ದಕ್ಷಿಣೇನ ಪಾಣಿನಾ । ಉದ್ಬಬರ್ಹ ದೀಪ್ತಿಮತ್ ಶಸ್ತ್ರಂ ವಿಜಿಗೀಷ- ಮಾಣೋ ವಸುಂಧರಾಂ ॥ ಯೋಽಂತಪಾಲಾನ್ ಪಲ್ಲವೇಂದ್ರಾಣಾಂ ಸಹಸಾ ವಿನಿರ್ಜಿತ್ಯ ಸಂಯುಗೇ ಅಧ್ಯುವಾಸ ದುರ್ಗಮಾಮಟವೀಂ ಶ್ರೀಪರ್ವತದ್ವಾರ- ಸಂಶ್ರಿತಾಂ ॥ ಆದದೇ ಕರಾನ್ ಬೃಹದ್ಬಾಣಪ್ರಮುಖಾದ್ ಬಹೂನ್ ರಾಜ ಮಂಡಲಾನ್ ॥ ಏವಮೇಭಿಃ ಪಲ್ಲವೇಂದ್ರಾಣಾಂ ಭ್ರುಕುಟೀ ಸಮುತ್ಪತ್ತಿಕಾರಣೈಃ ಸ್ವಪ್ರತಿಜ್ಞಾಪಾಲನೋತ್ಥಾನಲಘುಭಿಃ ಕೃತಾರ್ಥೈಶ್ಚ ವೇಷ್ಟಿತೋ ಭೂಷಣೈರಿವಾ ಬಭೌ ಬಲವದ್ಯಾತ್ರಾಸಮುತ್ಥಾನೇನ ಚ ॥ ಅಭಿಯುಯುಕ್ಷಯಾ ಗತೇಷು ಭೃಶಂ ಕಾಂಚೀನರೇಂದ್ರೇಷ್ವರಾತಿಷು । ವಿಷಮದೇಶ ಪ್ರಯಾಣ ಸಂವೇಶ ರಜಸೀ- ಪ್ರವಸ್ಕನ್ನ ಭೂಮಿಷು । ಪ್ರಾಪ್ಯ ಸೇನಾಸಾಗರಂ ತೇಷಾಂ ಪ್ರಾಹನ್ ಬಲೀ ಶ್ಯೇನವತ್ ತದಾ॥ಆಪದನ್ನಾನ್ ಧಾರಯಾಮಾಸ ಭುಜಖಡ್ಗಮಾತ್ರ ವ್ಯಪಾಶ್ರಯಃ॥ ಪಲ್ಲವೇಂದ್ರಾಸ್ತಸ್ಯ ಶಕ್ತಿಮಿಮಾಂ ಲಬ್ಧ್ವಾ ಪ್ರತಾಪಾನ್ವಯಾ ಅಪಿ ನಾಸ್ಯಹಾನಿ ನಿಃಶ್ರೇಯಸೀತ್ಯುಕ್ತ್ವಾ ಯಂ ಓ ಮಿತ್ರಮೇವಾಶು ವವ್ರಿರೇ"—ಹಲ್ಮಿಡಿಯ ಕನ್ನಡ ಶಾಸನವನ್ನು ಕ್ರಿ. ಶ. 450 ರಲ್ಲಿ ಬರೆಯಿಸಿದ ಕದಂಬ ಶಾಂತಿವರ್ಮನ ತಾಳಗುಂದ ಶಾಸನದಿಂದ.

ಸಂಸ್ಕೃತದ ಬಗೆಗೆ ಐನ್‌ಸ್ಟೀನ್

1948ರಲ್ಲಿ ಭಾರತೀಯ ತರುಣ ವಿಜ್ಞಾನಿಗಳಾದ ಡಾ. ಡಿ. ಎಂ. ಗುಪ್ತಾ ಅವರು ಪ್ರಿನ್ಸ್‌ಟನ್‌ದಲ್ಲಿ ಡಾ. ಐನ್‌ಸ್ಟೀನರನ್ನು ಕಾಣಲು ಹೋಗಿದ್ದರು. ಐನ್‌ಸ್ಟೀನರು ಅತಿಥಿಗಳ ಸ್ವಾಗತವನ್ನು ಸಂಸ್ಕೃತದಲ್ಲಿಯೇ ಮಾಡಿದರು. ಆಗ ಡಾ. ಗುಪ್ತಾರು ಗಾಬರಿಗೊಂಡು 'ನನಗೆ ಸಂಸ್ಕೃತ ತಿಳಿಯದು' ಎಂದು ಐನ್‌ಸ್ಟೀನರಿಗೆ ವಿನಯಪೂರ್ವಕ ತಿಳಿಸಿದರು. ಆಗ ಐನ್‌ಸ್ಟೀನರು "ತತ್ವಜ್ಞಾನಿಗಳ ತವರುಮನೆಯಾದ ಭಾರತದಿಂದ ನೀವು ಬರುತ್ತಿದ್ದೀರಿ. ಆದರೂ ಸಂಸ್ಕೃತವನ್ನು ಕಲಿಯುವ ಬಯಕೆ ನಿಮಗಾಗಲಿಲ್ಲವೇ ? ಬನ್ನಿ, ನನ್ನ ಪುಸ್ತಕ ಭಂಡಾರವನ್ನು ನಿಮಗೆ ತೋರಿಸುವೆನು. ಅದರಲ್ಲಿ ಭಾರತೀಯ ದರ್ಶನಗಳ ಪ್ರಮುಖ ಗ್ರಂಥಗಳೆಲ್ಲವೂ ಮುಖ್ಯವಾಗಿ ಭಗವದ್ಗೀತೆಯೂ ಇರುವುದು ಕಾಣುವುದು. ವೈಜ್ಞಾನಿಕ ಅನ್ವೇಷಣೆ ಮತ್ತು ನನ್ನ ಸಿದ್ಧಾಂತಗಳ ರೂಪಕ್ಕೆ ನನಗೆ ಭಗವದ್ಗೀತೆಯಿಂದ ಅಪಾರ ಸ್ಫೂರ್ತಿ ಸಿಕ್ಕಿದೆ" ಎಂದರು.

ಗ್ರಂಥಋಣ

1. ಕನ್ನಡ ಕವಿಚರಿತೆ (ಆರ್. ನರಸಿಂಹಾಚಾರ್ಯರಿಂದ)
2. ಕನ್ನಡ ಸಾಹಿತ್ಯ ಚರಿತ್ರೆ (ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಣೆ)
3. "ಕದಂಬ ವೈಭವ" ಎಂಬ ಕನ್ನಡ ಖಂಡಕಾವ್ಯವನ್ನೊಳಗೊಂಡ 'ಪ್ರಬುದ್ಧ ಕರ್ಣಾಟಕ'ದ ಸಂಪುಟಗಳು
4. ಕನ್ನಡ ಭಾಷೆಯ ಚರಿತ್ರೆ (ಪ್ರ. ಗೋ. ಕುಲಕರಣಿಯವರಿಂದ)
5. ಶಬ್ದಮಣಿದರ್ಪಣ (ಕೇಶಿರಾಜನಿಂದ)
6. ಶಬ್ದಾನುಶಾಸನ (ಭಟ್ಟಾಕಳಂಕನಿಂದ)
7. ಸಂಶೋಧನ ತರಂಗ (ಟಿ. ಕೇಶವಭಟ್ಟರಿಂದ)
8. ಸ್ವಾರಸ್ಯ (ಜಿ. ಪಿ. ರಾಜರತ್ನರಿಂದ)
9. ಕನ್ನಡ–ಕನ್ನಡಕೋಶ (ಸೇಡಿಯಾಪು ಕೃಷ್ಣಭಟ್ಟರು ಮತ್ತು ಇತರರಿಂದ)
10. ಡಾ. ಎ. ವೆಂಕಟಸುಬ್ಬಯ್ಯನವರ ಸಂಶೋಧನ ಪ್ರಬಂಧಗಳು
11. ಮೈಸೂರು ಗೆಜೆಟಿಯರ್ (ಹಯವದನರಾಯರಿಂದ)
12. ಕನ್ನಡ ಮುನ್ನುಡಿಗಳು (ವಿವಿಧ ಕನ್ನಡ ವಿದ್ವಾಂಸರಿಂದ)
13. ಗೋವಿಂದ ಪೈ ವಾಙ್ಮಯ
14. ಸಂಶೋಧನತರಂಗ (ಡಾ. ಚಿದಾನಂದ ಮೂರ್ತಿಯವರಿಂದ)
15. ಸಾಹಿತ್ಯಸಮೀಕ್ಷೆ (ಡಾ. ಹಾ. ಮಾ. ನಾಯಕರಿಂದ)
16. ಸಹ್ಯಾದ್ರಿ (ವಿವಿಧ ಲೇಖಕರಿಂದ)
17. ರಾಮಾಯಣ ದರ್ಶನ (ಕುವೆಂಪು ಅವರಿಂದ)
18. ಸಾಹಿತ್ಯ ವಿಮರ್ಶೆ (ಕರ್ಣಾಟಕ ವಿಶ್ವವಿದ್ಯಾಲಯ ಪ್ರಕಟಣೆ)
19. ಭಾರತೀಯ ಕಾವ್ಯಮೀಮಾಂಸೆ (ತೀ. ನಂ. ಶ್ರೀ. ಅವರಿಂದ)
20. ಕನ್ನಡ ಕೈಪಿಡಿ (ವಿವಿಧ ಕನ್ನಡ ವಿದ್ವಾಂಸರಿಂದ)
21. ವಚನ ಸಾಹಿತ್ಯ (ಪ್ರಭುದೇವ ಮುಂತಾದವರಿಂದ)
22. ಕನ್ನಡಕುವಲಯಾನಂದ (ಶಿ. ಚೆ. ನಂದೀಮಠ ಸಂಪಾದಿತ)
23. ಸಾಹಿತ್ಯಶಕ್ತಿ (ಡಿ. ವಿ. ಜಿ. ಅವರಿಂದ)
24. ಸಾಹಿತ್ಯದ ವಿರಾಟ್ ಸ್ವರೂಪ (ವರಕವಿ ಬೇಂದ್ರೆಯವರಿಂದ)
25. ಇಂದಿನ ಸಾಹಿತ್ಯದ ಗೊತ್ತುಗುರಿಗಳು (ವಿ. ಕೃ. ಗೋಕಾಕರಿಂದ)
26. ತಪೋನಂದನ (ಕುವೆಂಪು ಅವರಿಂದ)
27. ಕಾವ್ಯಸೂತ್ರ (ಬಿ. ಎಚ್. ಶ್ರೀ.)
28. ಕೌಸ್ತುಭ (ಕ. ಸಾ. ಪ. ವಜ್ರಮಹೋತ್ಸವ ಸಂಚಿಕೆ)

29. ವೈದಿಕ ಸಾಹಿತ್ಯಚರಿತ್ರೆ (ಎನ್. ಎಸ್. ಅನಂತರಂಗಾಚಾರ್ಯರಿಂದ)
30. ಜ್ಞಾನೋಪಾಸಕ (ವಿವಿಧ ಲೇಖಕರಿಂದ)
31. Kadamba Kula by George Moraes
32. History of Ancient Indian Literature by M. Winternitz
33. Macdonell's foreword to his Vedic Reader
34. History of Classical Sanskrit Literature by A. B. Keith
35. History of Sanskrit Drama by A. B. Keith
36. The Arctic Home of the Aryans by B. G. Tilak
37. History of the Culture and the people of India (Bhavan's Pub.)
38. South Indian Inscriptions (Kannada & Sanskrit)
39. Proceedings of the Third All India conference of Dravidian Linguistics
40. A History of Karnataka by Dr. P. B. Desai
41. Studies in Indian History and Culture (Several Scholars)
42. Indo-Ethiopian Relations for Centuries by I. M. Muttanna
43. Sahityadarpana edited by Dr. P. V. Kane
44 Sources of Karnatak History by Dr. S. Srikantha Shastri
45. Ancient Karnataka by Dr. B. A. Saletore
46. Wilson Philological Lectures
47. Grammar of the Old Kanarese Language by Dr. A. N. Narasimhaiya
48. Pre-Aryan and Pre-Aryan by Dr. Barnet
49. History of Indian philosophy by Dr. S. Radhakrishnan
50. The Major Bhashyas on the Brahmasutra of Badarayana and other Prakarana Granthas.

ಪ್ರಧಾನ ವಿತರಕರು

ಸಾಹಿತ್ಯ ಕೇಂದ್ರ

ಪಂಜೆ ಮಂಗೇಶರಾವ ರಸ್ತೆ, ಮಂಗಳೂರು—575 001